
# ಅರಸೀಕೆರೆ ತಾಲ್ಲೂಕು ಕನ್ನಡ ಶಿಕ್ಷಕರ ಸಂಘ



**ಸಾರ್ವಜನಿಕ ಶಿಕ್ಷಣ ಇಲಾಖೆ**

**ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ. ಅರಸೀಕೆರೆ.**

ಅರಸೀಕೆರೆ ತಾಲ್ಲೂಕು. ಹಾಸನ ಜಿಲ್ಲೆ.




## ಪ್ರಥಮ ಭಾಷೆ ಕನ್ನಡ

# ಪರೀಕ್ಷಾ ಸ್ಫೂರ್ತಿ

(ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳ ಮಾರ್ಗದರ್ಶಿ)

೨೦೧೯-೨೦

೨೦೧೯-೨೦

**ಸಲಹೆ ಮತ್ತು ಮಾರ್ಗದರ್ಶನ:**

ಶ್ರೀ.ಕೆ.ಎಸ್.ಪ್ರಕಾಶ್. ಮಾನ್ಯ ಉಪನಿರ್ದೇಶಕರು(ಆಡಳಿತ) ಸಾ.ಶಿ.ಇ. ಹಾಸನ.

ಶ್ರೀ.ಡಿ.ಟಿ.ಪುಟ್ಟರಾಜು. ಪ್ರಾಂಶುಪಾಲರು ಮತ್ತು ಉಪನಿರ್ದೇಶಕರು(ಅಭಿವೃದ್ಧಿ) ಡಯೆಟ್ ಹಾಸನ.

ಶ್ರೀ.ಹೆಚ್.ಬಿ.ಮೋಹನ್‌ಕುಮಾರ್. ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾ.ಶಿ.ಇ. ಅರಸೀಕೆರೆ.

ಶ್ರೀ.ಎಸ್. ರುದ್ರೇಶ್. ಶಿಕ್ಷಣಾಧಿಕಾರಿಗಳು. ಉಪನಿರ್ದೇಶಕರ ಕಚೇರಿ, ಸಾ.ಶಿ.ಇ. ಹಾಸನ.

ಶ್ರೀ.ಗಂಗಾಧರಸ್ವಾಮಿ.ಕೆ.ಎಸ್. ಕ್ಷೇತ್ರ ಸಮನ್ವಯಾಧಿಕಾರಿಗಳು. ಬಿ.ಆರ್.ಸಿ. ಅರಸೀಕೆರೆ.

ಶ್ರೀ.ಧನಂಜಯ. ಕನ್ನಡ ವಿಷಯ ಪರಿವೀಕ್ಷಕರು. ಉಪನಿರ್ದೇಶಕರ ಕಚೇರಿ. ಸಾ.ಶಿ.ಇ. ಹಾಸನ.

ಶ್ರೀ.ಅಣ್ಣಾದ್ಯನಾಯಕ್, ತಾಲ್ಲೂಕು ನೋಡಲ್ ಅಧಿಕಾರಿಗಳು, ಎಸ್.ಎಸ್.ಎಲ್.ಸಿ. ಪರೀಕ್ಷೆಗಳು.

ಶ್ರೀ.ಬಿ.ಎಸ್.ಗಿರೀಶ್. ಇ.ಸಿ.ಒ ಮತ್ತು ತಾಲ್ಲೂಕು ನೋಡಲ್ ಅಧಿಕಾರಿಗಳು.ಎಸ್.ಎಸ್.ಎಲ್.ಸಿ.ಪರೀಕ್ಷೆಗಳು.


**ತಾಲ್ಲೂಕು ಕನ್ನಡ ಭಾಷಾ ಶಿಕ್ಷಕರ ಸಂಘ. ಅರಸೀಕರೆ**

# ಅರಸೀಕೆರೆ ತಾಲ್ಲೂಕು ಕನ್ನಡ ಶಿಕ್ಷಕರ ಸಂಘ

**ಹಾಸನ ಜಿಲ್ಲಾ ಉಪನಿರ್ದೇಶಕರ ಕಚೇರಿ, ಹಾಸನ**

ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ. ಅರಸೀಕೆರೆ






## ಪ್ರಥಮ ಭಾಷೆ ಕನ್ನಡ

# ಎಸ್.ಎಸ್.ಎಲ್.ಸಿ. ಪರೀಕ್ಷಾ ಸ್ಫೂರ್ತಿ

೨೦೧೯-೨೦

## ೨೦೧೯-೨೦

**ಸಲಹೆ ಮತ್ತು ಮಾರ್ಗದರ್ಶನ:**

ಶ್ರೀ ಹೆಚ್.ಬಿ.ಮೋಹನ್‌ಕುಮಾರ್‌ರವರು
ಮಾನ್ಯ ಕ್ಷೇತ್ರ ಶಿಕ್ಷಣಾಧಿಕಾರಿಗಳು,
ಅರಸೀಕೆರೆ ತಾಲ್ಲೂಕು.
ಹಾಸನ ಜಿಲ್ಲೆ.

ಸಂಯೋಜನೆ:

ಶ್ರೀ ಧನಂಜಯರವರು
ಕನ್ನಡ ವಿಷಯ ಪರಿವೀಕ್ಷಕರು
ಉಪನಿರ್ದೇಶಕರ ಕಚೇರಿ.
ಹಾಸನ. ಹಾಸನ ಜಿಲ್ಲೆ.

# ಮುನ್ನುಡಿ



**ಶ್ರೀ ಹೆಚ್.ಬಿ. ಮೋಹನ್‌ಕುಮಾರ್‌ರವರು**
ಮಾನ್ಯ ಕ್ಷೇತ್ರ ಶಿಕ್ಷಣಾಧಿಕಾರಿಗಳು.
ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ.
ಅರಸೀಕೆರೆ. ಹಾಸನ ಜಿಲ್ಲೆ.

ಅರಸೀಕೆರೆ ತಾಲ್ಲೂಕಿನ ಎಲ್ಲಾ ಪ್ರೌಢಶಾಲೆಗಳ ಕನ್ನಡ ಭಾಷಾ ಶಿಕ್ಷಕರ ಸಂಘವು ತಯಾರಿಸಿರುವ ಕನಿಷ್ಠ ಅಂಕ ಗಳಿಕಾ ಸಂಪನ್ಮೂಲ ಕೈಪಿಡಿಯನ್ನು ಹೊರತರುತ್ತಿದ್ದೇವೆ. ಇದರಲ್ಲಿ ಹೊಸದಾಗಿ 2019–20ನೇ ಸಾಲಿಗೆ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ಬಿಡುಗಡೆ ಮಾಡಿರುವ ಪ್ರಶ್ನೆ ಪತ್ರಿಕೆಯನ್ನು ಆಧರಿಸಿ ಪ್ರಶ್ನೆಗಳನ್ನು ಸಿದ್ಧಪಡಿಸಿದೆ. ಇದರಲ್ಲಿ ಕನಿಷ್ಠ ಅಂಕಗಳನ್ನು ಗಳಿಸುವಷ್ಟು ಸಂಪನ್ಮೂಲ ಇದೆಯೆನ್ನುವ ನಂಬಿಕೆ ಇದೆ. ಆದ್ದರಿಂದ ಇದನ್ನು ಕಲಿಕೆಯಲ್ಲಿ ಹಿಂದುಳಿದ ಮಕ್ಕಳ ಹೆಚ್ಚಿನ ಕನಿಷ್ಠ ಕಲಿಕೆಗಾಗಿ ಬಳಸಿ ಪರೀಕ್ಷೆಗೆ ಸಿದ್ಧಪಡಿಸುವಂತೆ ಎಲ್ಲ ಶಿಕ್ಷಕರಿಗೆ ಸೂಚಿಸಿದೆ.

ಆದರೆ ಈ ವರ್ಷ ಪಠ್ಯಪುಸ್ತಕದ ಅಭ್ಯಾಸದಲ್ಲಿನ ಪ್ರಶ್ನೆಗಳಿಗಿಂತ ಹೆಚ್ಚಾಗಿ ಪಾಠದ ಒಳಗಿನಿಂದ ಪ್ರಶ್ನೆಗಳನ್ನು ತೆಗೆಯುವ ಸಂಭವವಿರುವುದರಿಂದ ಎಲ್ಲ ಪಾಠ/ಪದ್ಯಗಳನ್ನು ಸಂಪೂರ್ಣವಾಗಿ ಅಭ್ಯಾಸ ಮಾಡಿಸುವುದು, ಕಲಿಕೆಯನ್ನು ಒರೆಗೆ ಹಚ್ಚುವುದು ಎಲ್ಲ ಶಿಕ್ಷಕರ ಜವಾಬ್ದಾರಿಯಾಗಿದೆ. ಉದಾಹರಣೆಗೆ ಪ್ರೌಢಶಿಕ್ಷಣ ಮಂಡಳಿ ಬಿಡುಗಡೆ ಮಾಡಿರುವ ಎರಡನೇ ಮಾದರಿ ಪ್ರಶ್ನೆ ಪತ್ರಿಕೆಯನ್ನು ಗಮನಿಸಿದರೆ ನಿಮ್ಮ ಅರಿವಿಗೆ ಬರುತ್ತದೆ. ಶೇ.100 ಫಲಿತಾಂಶ ನಿರೀಕ್ಷಿಸುವ ಶಾಲೆಗಳು, ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಪಠ್ಯಪುಸ್ತಕವನ್ನು ಸಂಪೂರ್ಣವಾಗಿ ಅಭ್ಯಸಿಸಿ ಸ್ವಂತ ಅಭಿವ್ಯಕ್ತಿ ಸಾಮರ್ಥ್ಯವನ್ನು ಗಳಿಸಲು ಶಕ್ತರಾಗುವಂತೆ ಎಲ್ಲರೂ ನೋಡಿಕೊಳ್ಳಬೇಕೆಂದು ಈ ಮೂಲಕ ತಿಳಿಸಬಯಸುತ್ತೇನೆ. ನಿಮ್ಮ ಪರೀಕ್ಷಾ ಸಿದ್ಧತೆಗೆ ನಮ್ಮ ಶುಭವನ್ನು ಹಾರೈಸುತ್ತೇನೆ.

**ಶ್ರೀ ಹೆಚ್.ಬಿ.ಮೋಹನ್‌ಕುಮಾರ್. ಬಿ.ಇ.ಒ**

**–:ಸಂಪನ್ಮೂಲ ರಚನಾ ತಂಡ:–**

| ಕ್ರಸಂ | ಶಿಕ್ಷಕರ ಹೆಸರು | ಶಾಲೆಯ ವಿಳಾಸ |
|---|---|---|
| 1 | ಜಿ.ಬಸವರಾಜಪ್ಪ | ಶ್ರೀ ಮಹದೇಶ್ವರ ಪ್ರೌಢಶಾಲೆ, ರಂಗನಾಯಕನಕೊಪ್ಪಲು |
| 2 | ಈಶ್ವರಪ್ಪ. ಹೆಚ್.ಸಿ. | ಶ್ರೀ ಹಾಲುಸಿದ್ದೇಶ್ವರ ಪ್ರೌಢಶಾಲೆ, ಹಿರಿಯೂರು |
| 3 | ಧರ್ಮಪ್ಪ | ಶ್ರೀ ಬಸವೇಶ್ವರ ಗ್ರಾಮಾಂತರ ಪ್ರೌಢಶಾಲೆ, ಹಂದ್ರಾಳು |
| 4 | ನಾಗರಾಜಪ್ಪ.ಎಸ್.ಆರ್ | ಶ್ರೀ ಸಿದ್ದೇಶ್ವರ ಪ್ರೌಢಶಾಲೆ, ದುಮ್ಮೇನಹಳ್ಳಿ |
| 5 | ಕೆ.ಬಿ.ಜಯಣ್ಣ | ಪ್ರಗತಿಶೀಲ ಗ್ರಾಮಾಂತರ ಪ್ರೌಢಶಾಲೆ, ಎಸ್.ಡಿಗ್ಗೇನಹಳ್ಳಿ |
| 6 | ವೀರಣ್ಣ.ಟಿ. | ಸರ್ಕಾರಿ ಪ್ರೌಢಶಾಲೆ, ಜೆ.ಸಿ.ಪುರ |
| 7 | ಮಹೇಶ್ವರಯ್ಯ.ಪಿ.ಜಿ | ಸರ್ಕಾರಿ ಪ್ರೌಢಶಾಲೆ, ಚಗಚಗೆರೆ |
| 8 | ಪ್ರಕಾಶ್.ಡಿ.ಎಸ್. | ಸರ್ಕಾರಿ ಪ್ರೌಢಶಾಲೆ, ನೇರ್ಲಿಗೆ |
| 9 | ವೈ.ಹೆಚ್.ಕಾಳೆ | ಸರ್ಕಾರಿ ಪ್ರೌಢಶಾಲೆ, ಬೆಳಗುಂಬ |
| 10 | ರಮೇಶ್.ಕೆ. | ಸರ್ಕಾರಿ ಪದವಿ ಪೂರ್ವ ಕಾಲೇಜು. ಬಾಣಾವರ. |

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.**

1. 'ಜಗಜ್ಜ್ಯೋತಿ' ಪದದಲ್ಲಿ ಆಗಿರುವ ಸಂಧಿ;
(ಎ) ಜಶ್ತ್ವ (ಬಿ) ಶ್ಚುತ್ವ
(ಸಿ) ಅನುನಾಸಿಕ (ಡಿ) ಯ ಕಾರಾಗಮ

2. ಅನೇಕ ಉಪವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದಾಗ ಉಪವಾಕ್ಯಗಳು ಮುಗಿದಾಲೆಲ್ಲ ಈ ಚಿಹ್ನೆಯನ್ನು ಬಳಸಬೇಕು;
(ಎ) ಅಲ್ಪವಿರಾಮ (ಬಿ) ಆವರಣ
(ಸಿ) ಅರ್ಧವಿರಾಮ (ಡಿ) ಪ್ರಶ್ನಾರ್ಥಕ

3. "ಓದಿಯಾನು" ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ;
(ಎ) ವಿಧ್ಯರ್ಥಕ (ಬಿ) ಸಂಭಾವನಾರ್ಥಕ
(ಸಿ) ನಿಷೇಧಾರ್ಥ (ಡಿ) ಪ್ರಶ್ನಾರ್ಥಕ

4. 'ದವಾಖಾನೆ' ಪದವು ಈ ಭಾಷೆಯಿಂದ ಕನ್ನಡಕ್ಕೆ ಬಂದಿದೆ;
(ಎ) ಪರ್ಷಿಯನ್ (ಬಿ) ಉರ್ದು
(ಸಿ) ಗ್ರೀಕ್ (ಡಿ) ಅರಬ್ಬೀ

5. ಇವುಗಳಲ್ಲಿ ದ್ವಿತೀಯಾ ವಿಭಕ್ತಿಯುಳ್ಳ ಪದವಿದು;
(ಎ) ಗುರುನತ್ತಣಿಂ (ಬಿ) ದ್ರೋಣಂ
(ಸಿ) ಕುಂಭಂಭವನಂ (ಡಿ) ಚಟ್ಟರಿಂ

6. 'ವ್ಯಾಪಾರಿ' ಪದದ ತದ್ಭವ ರೂಪವಿದು;
(ಎ) ಬೇಪಾರಿ (ಬಿ) ಬೇಹಾರಿ
(ಸಿ) ಯಾಪಾರಿ (ಡಿ) ವ್ಯವಹಾರಿ

7. ಇವುಗಳಲ್ಲಿ ದ್ವಿರುಕ್ತಿಗೆ ಉದಾಹರಣೆಯಾದ ಪದವಿದು:
(ಎ) ಮೊಟ್ಟಮೊದಲು (ಬಿ) ಹಾಲ್ಜೇನು
(ಸಿ) ಮೊದಲ ಮಾತು ಡಿ) ಹಾಲುಗೀಲು

8. "ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ" ಅಂತಹ ವಾಕ್ಯವು :
(ಎ) ನಿಷೇಧಾರ್ಥಕ ವಾಕ್ಯ (ಬಿ) ಮಿಶ್ರ ವಾಕ್ಯ
(ಸಿ) ಸಂಯೋಜಿತ ವಾಕ್ಯ (ಡಿ) ಸಾಮಾನ್ಯ ವಾಕ್ಯ

9. 'ಆದ್ದರಿಂದ' ಪದವು ಅವ್ಯಯಕ್ಕೆ ಉದಾಹರಣೆಯಾಗಿದೆ;
(ಎ) ಸಾಮಾನ್ಯಾವ್ಯಯ
(ಬಿ) ಭಾವಸೂಚಕಾವ್ಯಯ
(ಸಿ) ಸಂಬಂಧಾರ್ಥಕಾವ್ಯಯ
(ಡಿ)ಅವಧಾರಣಾರ್ಥಕಾವ್ಯಯ

10. 'ಬರೆಯುವಿಕೆ' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ;
(ಎ) ಕೃದಂತನಾಮ (ಬಿ) ಕೃದಂತ ಭಾವನಾಮ
(ಸಿ) ಕೃದಂತಾವ್ಯಯ (ಡಿ) ತದ್ಧಿತಾಂತ ಭಾವನಾಮ

11. ವರ್ಣಮಾಲೆಯ ವರ್ಗದ ಮೊದಲನೆಯ ಮತ್ತು ಮೂರನೆಯ ಅಕ್ಷರಗಳನ್ನು ಹೀಗೆ ಕರೆಯುವರು.
ಎ) ಮಹಾಪ್ರಾಣ ಬಿ) ಅಲ್ಪಪ್ರಾಣ
ಸಿ) ಅನುನಾಸಿಕ ಡಿ) ಯೋಗವಾಹಗಳು

12. ಇವುಗಳಲ್ಲಿ ಅನ್ವರ್ಥನಾಮಪದಕ್ಕೆ ಉದಾಹರಣೆ
ಎ) ವಿದ್ಯಾರ್ಥಿ ಬಿ) ಬೆಟ್ಟ
ಸಿ) ಶಂಕರ ಡಿ) ನದಿ

13. ಸಪ್ತಮಿ ವಿಭಕ್ತಿಯ ಕಾರಕಾರ್ಥ
ಎ) ಕರ್ತರ್ಥ ಬಿ) ಕರ್ಮಾರ್ಥ
ಸಿ) ಅಧಿಕರಣ ಡಿ) ಸಂಪ್ರದಾನ

14. ಪ್ರಾಣಿಗಳು ಬರಗಾಲದಲ್ಲಿ ಸ್ವಲ್ಪ ಮೇವನ್ನಾದರೂ <u>ತಿನ್ನಲಿ</u> ________ಎಂದು ಜನರು ಹೋರಾಡಿದರು–
ಗೆರೆ ಎಳೆದ ಪದದ ಕ್ರಿಯಾರೂಪ
ಎ) ಸಂಭಾವನಾರ್ಥಕ ಬಿ) ನಿಷೇಧಾರ್ಥಕ
ಸಿ) ಅವಧಾರಣಾರ್ಥಕ ಡಿ) ವಿದ್ಯರ್ಥಕ

15. ಈ ಪದಗಳಲ್ಲಿ ಲೋಪಸಂಧಿಗೆ ಉದಾಹರಣೆ
ಎ) ಮಗುವಿಗೆ ಬಿ) ಹೊಸಗಾಲ
ಸಿ) ಏಕೈಕ ಡಿ) ಊರೂರು

16. 'ದಮ್ಮಡಿ' ಪದವು ಈ ಭಾಷೆಯಿಂದ ಕನ್ನಡಕ್ಕೆ ಬಂದಿದೆ.
ಎ) ಗ್ರೀಕ್ ಬಿ) ಉರ್ದು
ಸಿ) ಪೋರ್ಚುಗೀಸ್ ಡಿ) ಪಾರ್ಸಿ

17. ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಬಳಸುವ ಲೇಖನ ಚಿಹ್ನೆ
ಎ) ವಿವರಣಾತ್ಮಕ ಚಿಹ್ನೆ ಬಿ) ಉದ್ಧರಣ ಚಿಹ್ನೆ
ಸಿ) ವಾಕ್ಯವೇಷ್ಟನ ಚಿಹ್ನೆ ಡಿ) ಭಾವಸೂಚಕ ಚಿಹ್ನೆ

18. ಪ್ರವಾಸವು ದಿನದಿನದ ಬೇಸರವನ್ನು ದೂರ ಮಾಡುತ್ತಾ ನಮ್ಮ ಅನುಭವವನ್ನೂ ಹೆಚ್ಚಿಸುತ್ತದೆ. ಈ ವಾಕ್ಯದ ವಿಧ
ಎ) ಸಾಮಾನ್ಯ ವಾಕ್ಯ ಬಿ) ಮಿಶ್ರವಾಕ್ಯ
ಸಿ) ಸಂಯೋಜಿತ ವಾಕ್ಯ ಡಿ) ಪ್ರಶ್ನಾರ್ಥಕ ವಾಕ್ಯ

19. ಇವುಗಳಲ್ಲಿ ಗುಂಪಿಗೆ ಸೇರದ ಸಮಸ್ತ ಪದ
ಎ) ಕೈಯನ್ನು ಬಿ) ಅಂಗೈ
ಸಿ) ನಟ್ಟಿರುಳು ಡಿ) ಮುಂಗುರುಳು

20. ಇವುಗಳಲ್ಲಿ ದ್ವಿರುಕ್ತಿಗೆ ಉದಾಹರಣೆ
ಎ) ಇಲ್ಲಿಲ್ಲ ಬಿ) ಅಲ್ಲೆಲ್ಲಿ
ಸಿ) ಮನೆಮಾರು ಡಿ) ಅಬ್ಬಬ್ಬಾ

21. ಇವುಗಳಲ್ಲಿ ವಿಜಾತೀಯ ಸಂಯುಕ್ತಾಕ್ಷರಕ್ಕೆ ಉದಾಹರಣೆಯಾಗುವ ಪದ
ಎ) ಅಪ್ಪ ಬಿ) ಕಜ್ಜ
ಸಿ) ಉಷ್ಣ ಡಿ) ಅಕ್ಕ

22. ಕೋಟ್ಯಧೀಶ್ವರ – ಪದವು ಈ ಸಂಧಿಗೆ ಉದಾಹರಣೆಯಾಗಿದೆ.
ಎ) ಗುಣ ಸಂಧಿ ಬಿ) ಯಣ್ ಸಂಧಿ
ಸಿ) ವೃದ್ಧಿ ಸಂಧಿ ಡಿ) ಸವರ್ಣದೀರ್ಘ ಸಂಧಿ

23. 'ತಿಂದನು' ಎಂಬುದು ಈ ಪುರುಷವಾಚಕ ಪದವಾಗಿದೆ.
ಎ) ಉತ್ತಮ ಬಿ) ಪ್ರಥಮ(ಅನ್ಯ)
ಸಿ) ಮಧ್ಯಮ ಡಿ) ಅಂತಿಮ

24. ಒಂದು ಅಭಿಪ್ರಾಯದ ವಿವರಣೆ ಇಂತಿದೆ ಎಂದು ತೋರಿಸುವ ಸಂದರ್ಭದಲ್ಲಿ ಈ ಲೇಖನ ಚಿಹ್ನೆ ಬಳಸಬೇಕು.
ಎ) ಆವರಣ ಚಿಹ್ನೆ ಬಿ) ಉದ್ಧರಣ ಚಿಹ್ನೆ
ಸಿ) ಭಾವಸೂಚಕ ಚಿಹ್ನೆ ಡಿ) ವಿವರಣಾತ್ಮಕ ಚಿಹ್ನೆ

25. ಒಂದು ಪೂರ್ಣ ಕ್ರಿಯಾಪದದೊಂದಿಗೆ ಸ್ವತಂತ್ರವಾಗಿರುವ ವಾಕ್ಯವನ್ನು ಈ ವಿಧಧ ವಾಕ್ಯವೆಂದು ಹೇಳುವರು.
ಎ) ಸಂಯೋಜಿತ ವಾಕ್ಯ ಬಿ) ಸಾಮಾನ್ಯ ವಾಕ್ಯ
ಸಿ) ಮಿಶ್ರ ವಾಕ್ಯ ಡಿ) ಸರಳ ವಾಕ್ಯ

26. ‘ನೆಯ್ದುವಸ್ತ್ರ’ ಇದನ್ನು ವಿಗ್ರಹ ವಾಕ್ಯ ಮಾಡಿದಾಗ ಈ ರೂಪ ಪಡೆಯುತ್ತದೆ.
ಎ) ನೆಯ್ದುದು+ವಸ್ತ್ರ ಬಿ) ನೇಯ್ದು+ ವಸ್ತ್ರ
ಸಿ) ನೆಯ್ + ವಸ್ತ್ರ ಡಿ) ನೆಯ್ಯು+ವಸ್ತ್ರ

27. ‘ಕನ್ನಡತಿ’ ಇಲ್ಲಿ ಬಳಸಲಾಗಿರುವ ವ್ಯಾಕರಣ ರೂಪ ಇದಾಗಿದೆ.
ಎ) ತದ್ಧಿತಾಂತ ಭಾವನಾಮ ಬಿ) ತದ್ಧಿತಾಂತ ನಾಮ
ಸಿ) ತದ್ಧಿತಾಂತಾವ್ಯಯ ಡಿ) ಕೃದಂತಾವ್ಯಯ

28. ‘ಮರಭನಯಯಯ’ ಗಣವಿನ್ಯಾಸ ಬರುವ ಖ್ಯಾತಕರ್ಣಾಟಕ ವೃತ್ತ
ಎ) ಚಂಪಕಮಾಲಾ ವೃತ್ತ ಬಿ) ಶಾರ್ದೂಲ ವಿಕ್ರೀಡಿತ
ಸಿ) ಮಹಾಸ್ರಗ್ಧರಾ ವೃತ್ತ ಡಿ) ಸ್ರಗ್ಧರಾವೃತ್ತ

29. ಆತ್ಮಾರ್ಥಕ ಸರ್ವನಾಮ ಪದ ಇದಾಗಿದೆ.
ಎ) ತಾವು ಬಿ) ಅವನು
ಸಿ) ಅದು ಡಿ) ನೀನು

30. ‘ಅದುವೇ’ ಎಂಬುದು ಈ ಅವ್ಯಯ ಪದವಾಗಿದೆ.
ಎ) ಸಂಬಂಧಾರ್ಥಕಾವ್ಯಯ ಬಿ) ಕ್ರಿಯಾರ್ಥಕಾವ್ಯಯ
ಸಿ) ಅವಧಾರಣಾರ್ಥಕಾವ್ಯಯ ಡಿ)ಸಾಮಾನ್ಯಾವ್ಯಯ

31. ‘ತ’ ವರ್ಗದ ಅನುನಾಸಿಕಾಕ್ಷರ ಇದು
ಎ) ಮ ಬಿ) ನ
ಸಿ) ಙ ಡಿ) ಞ

32. ಅನ್ವರ್ಥನಾಮಕ್ಕೆ ಉದಾಹರಣೆ ಇದು
ಎ) ಬೆಟ್ಟ ಬಿ) ರಾಮ
ಸಿ) ವಿದ್ವಾಂಸ ಡಿ) ಅವನು

33. ದ್ವಿತೀಯಾ ವಿಭಕ್ತಿಯ ಕಾರಕಾರ್ಥ
ಎ) ಕರ್ಮಾರ್ಥ ಬಿ) ಸಂಪ್ರದಾನ
ಸಿ) ಅವಧಾರಣಾರ್ಥ ಡಿ) ಕರ್ತರ್ಥ

34. ಅವನು ಒಳಗೆ ಊಟ ಮಾಡುವನು. ಈ ವಾಕ್ಯವನ್ನು ವರ್ತಮಾನ ಕಾಲಕ್ಕೆ ಪರಿವರ್ತಿಸಿದಾಗ ಆಗುವ ರೂಪ
ಎ) ಅವನು ಒಳಗೆ ಊಟ ಮಾಡಿದನು
ಬಿ) ಅವನು ಒಳಗೆ ಊಟ ಮಾಡುತ್ತಾನೆ
ಸಿ) ಅವನು ಒಳಗೆ ಊಟ ಮಾಡಿದ
ಡಿ) ಅವನು ಒಳಗೆ ಊಟ ಮಾಡುವನು

35. ಜಾತ್ಯತೀತ ಪದದಲ್ಲಿರುವ ಸಂಧಿ
ಎ) ಜಶ್ತ್ವಸಂಧಿ ಬಿ) ಶ್ಚುತ್ವಸಂಧಿ
ಸಿ) ಗುಣಸಂಧಿ ಡಿ) ಯಣ್ ಸಂಧಿ

36. ಸೂರ್ಯಚಂದ್ರರು– ಈ ಪದದಲ್ಲಿರುವ ಸಮಾಸ
ಎ) ದ್ವಂದ್ವ ಸಮಾಸ ಬಿ) ಬಹುವ್ರೀಹಿ ಸಮಾಸ
ಸಿ) ಗಮಕ ಸಮಾಸ ಡಿ) ಅಂಶಿ ಸಮಾಸ

37. ಹುಕುಂ – ಪದವು ಯಾವ ಭಾಷೆಯಿಂದ ಕನ್ನಡಕ್ಕೆ ಬಂದಿದೆ.
ಎ) ಗ್ರೀಕ್ ಬಿ) ಉರ್ದು
ಸಿ) ಸಂಸ್ಕೃತ ಡಿ) ಹಿಂದೂಸ್ಥಾನಿ

38. ಕುಠಾರ – ಪದದ ತದ್ಭವ ರೂಪ
ಎ) ಕೊಡಲಿ ಬಿ) ಕುಠೀರ
ಸಿ) ಕೂಡು ಡಿ) ಕುಂಡಲಿ

39. ಅದೇ ನನ್ನ ಪುಸ್ತಕ – ಈ ವಾಕ್ಯದಲ್ಲಿರುವ ಅವ್ಯಯದ ವಿಧ
ಎ) ಸಂಬಂಧಾರ್ಥಕಾವ್ಯಯ
ಬಿ) ಕ್ರಿಯಾರ್ಥಕಾವ್ಯಯ
ಸಿ) ಅವಧಾರಣಾರ್ಥಕಾವ್ಯಯ
ಡಿ) ಸಾಮಾನ್ಯಾವ್ಯಯ

40. ಒಂದು ಅಭಿಪ್ರಾಯದ ವಿವರಣೆ ಮುಂದೆ ತಿಳಿಸಿದಂತೆ ಇದೆ ಎಂದು ತೋರಿಸುವಾಗ ಬಳಸುವ ಲೇಖನ ಚಿಹ್ನೆ
ಎ) ವಿವರಣಾತ್ಮಕ ಚಿಹ್ನೆ ಬಿ) ಆವರಣ ಚಿಹ್ನೆ
ಸಿ) ಭಾವಸೂಚಕ ಚಿಹ್ನೆ ಡಿ) ಅಲ್ಪವಿರಾಮ ಚಿಹ್ನೆ

41. ಕೆಳಗಿನವುಗಳಲ್ಲಿ ಮಹಾಪ್ರಾಣಾಕ್ಷರಗಳ ಗುಂಪು
ಎ) ಅಇಉಋಎಒ ಬಿ) ಆಈಊಏಓ
ಸಿ) ಕಗಚಜಡಟ ಡಿ) ಖಘಛಝಥಧ

42. ಪರ್ವತ – ಈ ಪದದ ವಸ್ತುವಾಚಕದ ವಿಧ
ಎ) ರೂಢನಾಮ ಬಿ) ಅಂಕಿತನಾಮ
ಸಿ) ಅನ್ವರ್ಥನಾಮ ಡಿ) ಭಾವನಾಮ

43. ಇವುಗಳಲ್ಲಿ ಅನ್ಯಪುರುಷ ಸರ್ವನಾಮ
ಎ) ನಾನು ಬಿ) ನೀನು
ಸಿ) ಯಾವನು ಡಿ) ಅವನು

44. ಹಳಗನ್ನಡದ ಪಂಚಮಿ ವಿಭಕ್ತಿ ಪ್ರತ್ಯಯ
ಎ) ಮ್ ಬಿ) ಅತ್ತಣಿಂ
ಸಿ) ಒಳ್ ಡಿ) ಇಂದಂ

45. ಇವುಗಳಲ್ಲಿ ಸಂಭವನಾರ್ಥಕ ಕ್ರಿಯಾಪದ
ಎ) ಬಂದಾನು ಬಿ) ಬಾರನು
ಸಿ) ಬಾ ಡಿ) ಬರುವನು

46. ಜಗತ್+ಈಶ= ಜಗದೀಶ ಇದು ಯಾವ ಸಂಧಿಗೆ ಉದಾಹರಣೆ
ಎ) ಲೋಪ ಸಂಧಿ ಬಿ) ಗುಣಸಂಧಿ
ಸಿ) ಯಣ್ ಸಂಧಿ ಡಿ) ಜಶ್ತ್ವಸಂಧಿ

47. ಆ ಕಲ್ಲು – ಈ ಪದವು ಯಾವ ಸಮಾಸಕ್ಕೆ ಉದಾಹರಣೆಯಾಗಿದೆ.
ಎ) ಗಮಕ ಬಿ) ತತ್ಪುರುಷ
ಸಿ) ದ್ವಂದ್ವ ಡಿ) ಕ್ರಿಯಾ

48. ಈ ಕೆಳಗಿನ ಪದಗಳಲ್ಲಿ ಇಂಗ್ಲೀಷ್‌ನಿಂದ ಕನ್ನಡಕ್ಕೆ ಬಂದ ಪದ
ಎ) ಅಜಮಾಯಿಷಿ ಬಿ) ದಮ್ಮಡಿ
ಸಿ) ಬಸ್ಸು ಡಿ) ಮೇಜು

49. ಸಂದೇಹ – ಈ ಪದ ತದ್ಭವ ರೂಪ
ಎ) ಸೆಣಬು ಬಿ) ಸಂಜೆ
ಸಿ) ಸಂದೂಕ ಡಿ) ಸಂದೆಯ

50. ಈ ಕೆಳಗಿನ ಪದಗಳಲ್ಲಿ ಭಾವಸೂಚಕಾವ್ಯಯ ಪದ
ಎ) ನೆಟ್ಟಗೆ ಬಿ) ಅವನಂತೆ
ಸಿ) ಅಯ್ಯೋ ಡಿ) ಚುರುಚುರು

51. ಕನ್ನಡ ವರ್ಣಮಾಲೆಯಲ್ಲಿರುವ ಅಲ್ಪಪ್ರಾಣಾಕ್ಷರಗಳ ಸಂಖ್ಯೆ
ಎ) 25 ಬಿ) 09
ಸಿ) 10 ಡಿ) 05

52. ಪ್ರಥಮ ಪುರುಷ ಸರ್ವನಾಮಕ್ಕೆ ಉದಾಹರಣೆ
ಎ) ನಾನು ಬಿ) ನೀನು
ಸಿ) ಅದು ಡಿ) ನಾವು

53. ಪಂಚಮೀ ವಿಭಕ್ತಿಯ ಕಾರಕಾರ್ಥ
ಎ) ಸಂಪ್ರದಾನ ಬಿ) ಅಪಾದಾನ
ಸಿ) ಸಮಾಧಾನ ಡಿ) ಅಧಿಕರಣ

54. ಕೆಳಗಿನವುಗಳಲ್ಲಿ ವಿಧ್ಯರ್ಥಕ ಕ್ರಿಯಾಪದ
ಎ) ಮುಟ್ಟೋಣ ಬಿ) ಮಾಡಲಿ
ಸಿ) ಕೇಳುವೆವು ಡಿ) ನೋಡಳು

55. 'ಹೊಸಗಾಲ' ಈ ಪದವು ಯಾವ ಸಂಧಿಗೆ ಉದಾಹರಣೆಯಾಗಿದೆ.
ಎ) ಲೋಪ ಸಂಧಿ ಬಿ) ಗುಣ ಸಂಧಿ
ಸಿ) ಆಗಮ ಸಂಧಿ ಡಿ) ಆದೇಶ ಸಂಧಿ

56. 'ನಡುರಾತ್ರಿ' ಪದವು ಈ ಸಮಾಸಕ್ಕೆ ಸೇರಿದೆ
ಎ) ಕರ್ಮಧಾರಯ ಬಿ) ಅಂಶಿ
ಸಿ) ದ್ವಂದ್ವ ಡಿ) ಕ್ರಿಯಾ

57. ಸಿಟ್ಟೆಲಿ – ಪದದ ಗ್ರಾಂಥಿಕ ರೂಪ
ಎ) ಸಿಟ್ಟೆಲ್ಲಿ ಬಿ) ಸಿಟ್ಟಿನಲ್ಲಿ
ಸಿ) ಸೀಟೆಲ್ಲಿ ಡಿ) ಸಿಟ್ಟಿನಿಂದ

58. 'ಅರ್ಕ' ಪದದ ತದ್ಭವ ರೂಪ
ಎ) ಸೂರ್ಯ ಬಿ) ಅಕ್ಷರ
ಸಿ) ಎಕ್ಕ ಡಿ) ಚಂದ್ರ

59. ಈ ಕೆಳಗಿನವುಗಳಲ್ಲಿ ಸಾಮಾನ್ಯಾವ್ಯಯಕ್ಕೆ ಉದಾಹರಣೆ
ಎ) ಭೋರೆಂದು ಬಿ) ತಟ್ಟನೆ
ಸಿ) ಬೇಡ ಡಿ) ಅವನೇ

60. ಇವುಗಳಲ್ಲಿ ತದ್ಧಿತಾಂತ ಭಾವನಾಮಕ್ಕೆ ಉದಾಹರಣೆ
ಎ) ಬಳೆಗಾರ ಬಿ) ಜಾಣತನ
ಸಿ) ಚಂದ್ರನಂತೆ ಡಿ) ನಿನಗಾಗಿ

61. 'ಮನೆಯಲ್ಲಿ' ಪದದಲ್ಲಿರುವ ವಿಭಕ್ತಿಯ ಹೆಸರು;
(ಎ) ಚತುರ್ಥಿ (ಬಿ) ಪಂಚಮಿ
(ಸಿ) ಷಷ್ಠಿ (ಡಿ) ಸಪ್ತಮಿ

62. ಇವುಗಳಲ್ಲಿ ನಿಷೇಧಾರ್ಥಕ ಕ್ರಿಯಾರೂಪಕ್ಕೆ ಉದಾಹರಣೆಯಾದ ಪದವಿದು;
(ಎ) ಹಾಡಲಿ (ಬಿ) ಹಾಡಿಯಾನು
(ಸಿ) ಹಾಡನು (ಡಿ) ಹಾಡುವನು

63. 'ತಿಂಗಳಿನೂರು' ಪದದಲ್ಲಿ ಆಗಿರುವ ಸಂಧಿ;
(ಎ) ಲೋಪ (ಬಿ) ಆಗಮ
(ಸಿ) ಅದೇಶ (ಡಿ) ಪ್ರಕೃತಿಭಾವ

64. 'ತಲೆನೋವು' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ;
(ಎ) ತತ್ಪುರುಷ (ಬಿ) ಕರ್ಮಧಾರಯ
(ಸಿ) ಕ್ರಿಯಾ (ಡಿ) ದ್ವಂದ್ವ

65. ಇವುಗಳಲ್ಲಿ ಜೋಡುನುಡಿಗೆ ಉದಾಹರಣೆಯಾದ ಪದವಿದು;
(ಎ) ಮನೆಮಠ (ಬಿ) ಬಟ್ಟಬಯಲು
(ಸಿ) ಕಟ್ಟಕಡೆಗೆ (ಡಿ) ಧಗಧಗ

66. 'ತರುವಾಯ' ಪದವು ಈ ಅವ್ಯಯಕ್ಕೆ ಉದಾಹರಣೆಯಾಗಿದೆ;
(ಎ) ಸಾಮಾನ್ಯ ಅವ್ಯಯ
(ಬಿ) ಸಂಬಂಧಾರ್ಥಕ ಅವ್ಯಯ
(ಸಿ) ಭಾವಸೂಚಕ ಅವ್ಯಯ
(ಡಿ) ಕ್ರಿಯಾರ್ಥಕ ಅವ್ಯಯ

67. 'ತೊಡುಗೆ' ಪದವು ಈ ವ್ಯಾಕಾರಣಾಂಶಕ್ಕೆ ಉದಾಹರಣೆಯಾಗಿದೆ:
(ಎ) ಕೃದಂತನಾಮ
(ಬಿ) ಕೃದಂತಭಾವನಾಮ
(ಸಿ) ಕೃದಂತಾವ್ಯಯ
(ಡಿ) ತದ್ಧಿತಾಂತಭಾವನಾಮ

68. ಇವುಗಳಲ್ಲಿ ತದ್ಧಿತಾಂತ ಅವ್ಯಯಕ್ಕೆ ಉದಾಹರಣೆಯಾದ ಪದವಿದು:
(ಎ) ಸಿರಿವಂತ (ಬಿ) ಸಿರಿತನ
(ಸಿ) ಸಿರಿಗಾಗಿ (ಡಿ) ಸಿರಿ

69. ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಿದ್ದರೆ ಅದನ್ನು ಹೀಗೆನ್ನುವರು;
(ಎ) ಸಾಮಾನ್ಯವಾಕ್ಯ (ಬಿ) ಸಂಯೋಜಿತವಾಕ್ಯ
(ಸಿ) ಮಿಶ್ರವಾಕ್ಯ (ಡಿ) ಪ್ರಶ್ನಾರ್ಥಕವಾಕ್ಯ

70. ಸಂಬೋಧನೆಯ ಮುಂದೆ ಹಾಗೂ ಕರ್ತೃ, ಕರ್ಮ, ಕ್ರಿಯಾಪದಗಳಿಗೆ ಬೇರೆ ಬೇರೆ ವಿಶೇಷಣಗಳು ಬಂದಾಗ ಕೊನೆಯ ವಿಶೇಷಣವನ್ನು ಬಿಟ್ಟು ಉಳಿದವುಗಳ ಮುಂದೆ ಈ ಚಿಹ್ನೆಯನ್ನು ಹಾಕಬೇಕು;
(ಎ) ಪೂರ್ಣವಿರಾಮ (ಬಿ) ಅಲ್ಪವಿರಾಮ
(ಸಿ) ಅರ್ಧವಿರಾಮ (ಡಿ) ಉದ್ಧರಣ

71. 'ಪರ್ವತ' ಈ ನಾಮಪದಕ್ಕೆ ಉದಾಹರಣೆಯಾಗಿದೆ.
(ಎ) ರೂಢನಾಮ (ಬಿ) ಅಂಕಿತನಾಮ
(ಸಿ) ಅನ್ವರ್ಥನಾಮ (ಡಿ) ಸರ್ವನಾಮ

72. ಚತುರ್ಥಿ ವಿಭಕ್ತಿಯ ಕಾರಕಾರ್ಥ
(ಎ) ಅಧಿಕರಣ (ಬಿ) ಅಪಾದಾನ
(ಸಿ) ಸಂಪ್ರದಾನ (ಡಿ) ಕರಣಾರ್ಥ

73. 'ಈ ದಿನ ಮಳೆ ಬಾರದು' ಈ ವಾಕ್ಯದಲ್ಲಿರುವ ಕ್ರಿಯಾರೂಪ
(ಎ) ನಿಷೇಧಾರ್ಥಕ (ಬಿ) ಸಂಭವನಾರ್ಥಕ
(ಸಿ) ವಿಧ್ಯರ್ಥಕ (ಡಿ) ಕ್ರಿಯಾರ್ಥಕ

74. 'ಮಂಗಳ' ಪದದಲ್ಲಿರುವ ಅನುನಾಸಿಕ ಅಕ್ಷರ
(ಎ) ಗ (ಬಿ) ಳ
(ಸಿ) ಮ (ಡಿ) ೦

75. 'ಅತ್ಯವಸರ' ಪದದಲ್ಲಿರುವ ಸಂಧಿ
(ಎ) ಗುಣಸಂಧಿ (ಬಿ) ವೃದ್ಧಿಸಂಧಿ
(ಸಿ) ಯಣ್‌ಸಂಧಿ (ಡಿ) ಆಗಮಸಂಧಿ

76. 'ಹಾವು ಸರಸರನೆ ಹರಿದು ಹೋಯಿತು' ಈ ವಾಕ್ಯದಲ್ಲಿರುವ ಅನುಕರಣಾವ್ಯಯ
(ಎ) ಸರಸರ (ಬಿ) ಚೆನ್ನಾಗಿ
(ಸಿ) ಹೋಯಿತು (ಡಿ) ಹಾವು

77. ಭೂತಕಾಲದ ಕಾಲಸೂಚಕ ಪ್ರತ್ಯಯ
(ಎ) ಉತ್ತ (ಬಿ) ವ
(ಸಿ) ದ (ಡಿ) ಉವ

78. ದಶರಥ ಯಾರು ಈ ವಾಕ್ಯದ ಕೊನೆಯಲ್ಲಿರಬೇಕಾದ ಲೇಖನ ಚಿಹ್ನೆ
(ಎ) ಭಾವಸೂಚಕ (ಬಿ) ಪ್ರಶ್ನಾರ್ಥಕ
(ಸಿ) ಅಲ್ಪವಿರಾಮ (ಡಿ) ಅರ್ಧವಿರಾಮ
79. 'ಕಣ್ದೆರೆ' ಈ ಪದದಲ್ಲಿರುವ ಸಮಾಸ
(ಎ) ಅಂಶಿಸಮಾಸ (ಬಿ) ದ್ವಂದ್ವಸಮಾಸ
(ಸಿ) ಕ್ರಿಯಾಸಮಾಸ (ಡಿ) ಗಮಕಸಮಾಸ
80. ಸ,ಭ,ರ,ನ,ಮ,ಯ ಲ, ಗು ಈ ಗಣವಿನ್ಯಾಸ ಬರುವ ವೃತ್ತ
(ಎ) ಮತ್ತೇಭವಿಕ್ರೀಡಿತ (ಬಿ) ಚಂಪಕಮಾಲಾವೃತ್ತ
(ಸಿ) ಸ್ರಗ್ಧರಾವೃತ್ತ (ಡಿ) ಉತ್ಪಲಮಾಲಾವೃತ್ತ
81. 'ಹೂವಾಡಿಗ' ಈ ಪದದಲ್ಲಿರುವ ತದ್ಧಿತ ಪ್ರತ್ಯಯ
(ಎ) ಇಗ (ಬಿ) ವಾಡಿಗ
(ಸಿ) ಡಿಗ (ಡಿ) ಅಡಿಗ
82. ಪೆರ್ಮೆ ಪದವು ಈ ವ್ಯಾಕರಣಾಂಶಕ್ಕೆ ಸೇರಿದೆ.
ಎ) ತದ್ಧಿತಾಂತಾವ್ಯಯ
ಬಿ) ಕೃದಂತನಾಮ
ಸಿ) ತದ್ಧಿತಾಂತ ಭಾವನಾಮ
ಡಿ) ಕೃದಂತ ಭಾವನಾಮ
83. 'ಮಹೀಪತಿ' ಪದವು ಈ ಸಮಾಸಕ್ಕೆ ಉದಾಹರಣೆ
(ಎ) ಕರ್ಮಧಾರಯ ಸಮಾಸ (ಬಿ) ದ್ವಂದ್ವಸಮಾಸ
(ಸಿ) ಬಹುವ್ರೀಹಿ ಸಮಾಸ (ಡಿ) ದ್ವಿಗು ಸಮಾಶ
84. 'ಅಳವು' ಪದದ ಅರ್ಥ
(ಎ) ಆಳ (ಬಿ) ದುಃಖ
(ಸಿ) ಪರಾಕ್ರಮ (ಡಿ) ಶಕ್ತಿಹೀನತೆ
85. 'ಹೊಸಗಾಲ' ಪದದಲ್ಲಿರುವ ಸಂಧಿ
(ಎ) ಲೋಪಸಂಧಿ (ಬಿ) ಆಗಮಸಂಧಿ
(ಸಿ) ಆದೇಶಸಂಧಿ (ಡಿ) ಗುಣಸಂಧಿ
86. 'ಮಾತು ಬಲ್ಲವನಿಗೆ ಜಗಳವಿಲ್ಲ; ಊಟ ಬಲ್ಲವನಿಗೆ ರೋಗವಿಲ್ಲ' ಈ ವಾಕ್ಯದಲ್ಲಿರುವ ಅಲಂಕಾರ
(ಎ) ಉತ್ಪ್ರೇಕ್ಷಾಲಂಕಾರ (ಬಿ) ರೂಪಕಾಲಂಕಾರ
(ಸಿ) ದೃಷ್ಟಾಂತಾಲಂಕಾರ (ಡಿ) ಉಪಮಾಲಂಕಾರ
87. ಬರವಣಿಗೆಯಲ್ಲಿ ಇನ್ನೊಬ್ಬರ ಹೇಳಿಕೆಯನ್ನು ಯಥಾವತ್ತಾಗಿ ಬರೆಯುವಾಗ ಬಳಸುವ ಲೇಖನ ಚಿಹ್ನೆ
(ಎ) ಅಲ್ಪವಿರಾಮ ಚಿಹ್ನೆ (ಬಿ) ಉದ್ಧರಣ ಚಿಹ್ನೆ
(ಸಿ) ಆವರಣ ಚಿಹ್ನೆ (ಡಿ) ಭಾವಸೂಚಕ ಚಿಹ್ನೆ
88. 'ಸಕ್ಕಾರಿ' ಪದದ ಗ್ರಾಂಥಿಕ ರೂಪ
(ಎ) ಸಕ್ಕರೆ (ಬಿ) ಶರ್ಕರಾ
(ಸಿ) ಸಕ್ಕಾರಿ (ಡಿ) ಸಾಕ್ಕಾರ
89. ಆತ್ಮಾರ್ಥಕ ಸರ್ವನಾಮಕ್ಕೆ ಉದಾಹರಣೆ
(ಎ) ನೀನು (ಬಿ) ನೀವು
(ಸಿ) ತಾನು (ಡಿ) ನಾವು
90. ಎರಡು ಮಾತ್ರಾಕಾಲದಲ್ಲಿ ಉಚ್ಚರಿಸುವ ಸ್ವರಗಳಿಗೆ ಹೀಗೆನ್ನುವರು.
(ಎ) ದೀರ್ಘಸ್ವರ (ಬಿ) ಹ್ರಸ್ವಸ್ವರ
(ಸಿ) ಪ್ಲುತಸ್ವರ (ಡಿ) ಸಪ್ತಸ್ವರ
91. 'ಬಂಜೆ' ಈ ಪದದ ತತ್ಸಮ ರೂಪ
(ಎ) ವಂಧ್ಯಾ (ಬಿ) ಭಜೆ
(ಸಿ) ಪಂಜು (ಡಿ) ವಂಚು
92. ಹಳಗನ್ನಡ ದ್ವಿತೀಯ ವಿಭಕ್ತಿ ಪ್ರತ್ಯಯ
(ಎ) ಮ್ (ಬಿ) ಅ
(ಸಿ) ಇಂದಂ (ಡಿ) ಅಂ
93. 'ನೆಯ್ದುವಸ್ತ್ರ' ಪದವು ಈ ಸಮಾಸಕ್ಕೆ ಉದಾಹರಣೆ
(ಎ) ಗಮಕ ಸಮಾಸ (ಬಿ) ದ್ವಂದ್ವಸಮಾಸ
(ಸಿ) ತತ್ಪುರುಷ ಸಮಾಸ (ಡಿ) ದ್ವಿಗು ಸಮಾಸ
94. 'ಪಯಶ್ಶಯನ' ಪದದಲ್ಲಿರುವ ಸಂಧಿ
(ಎ) ಯಣ್‌ಸಂಧಿ (ಬಿ) ಅನುನಾಸಿಕ ಸಂಧಿ
(ಸಿ) ಶ್ಚುತ್ವ ಸಂಧಿ (ಡಿ) ವೃದ್ಧಿ ಸಂಧಿ
95. ಅನ್ವರ್ಥನಾಮ ಪದಕ್ಕೆ ಉದಾಹರಣೆಯಿದು
(ಎ) ವ್ಯಾಪಾರಿ (ಬಿ) ಮನುಷ್ಯ
(ಸಿ) ಆಗ್ನೇಯ (ಡಿ) ಕಮಲ
96. "ಕಾರವಾರದಲ್ಲಿ ಮಲೇರಿಯಾ ವ್ಯಾಪಕವಾಗಿತ್ತು' ಈ ವಾಕ್ಯದ ವಿಧ
(ಎ) ವಿಶೇಷವಾಕ್ಯ (ಬಿ) ಸಾಮಾನ್ಯವಾಕ್ಯ
(ಸಿ) ಸಂಯೋಜಿತ ವಾಕ್ಯ (ಡಿ) ಮಿಶ್ರವಾಕ್ಯ
97. 'ಹಾಡು' ಪದದ ವಿಧ್ಯರ್ಥಕ ರೂಪ
(ಎ) ಹಾಡಲಿ (ಬಿ) ಹಾಡಿಯಾನು
(ಸಿ) ಹಾಡನು (ಡಿ) ಹಾಡಿದನು
98. ಇವುಗಳಲ್ಲಿ ಫಾರ್ಸಿ ಭಾಷೆಯಿಂದ ಬಂದಿರುವ ಪದ
(ಎ) ಅಮಾನತು (ಬಿ) ತಂಬಾಕು
(ಸಿ) ಅರ್ಜಿ (ಡಿ) ಚೌಕಾಷಿ
99. ಮಾಡದ - ಪದವು ಈ ಕೃದಂತಕ್ಕೆ ಉದಾಹರಣೆ
(ಎ) ಭೂತಕೃದಂತ (ಬಿ) ಕೃದಂತಭಾವನಾಮ
(ಸಿ) ನಿಷೇಧಕೃದಂತ (ಡಿ) ಕೃದಂತಾವ್ಯಯ
100. ಅನೇಕ ಉಪವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದಾಗ ಉಪವಾಕ್ಯಗಳು ಮುಗಿದಾಗಲೆಲ್ಲ ಈ ಚಿಹ್ನೆಯನ್ನು ಬಳಸುವರು.
(ಎ) ಅಲ್ಪವಿರಾಮ (ಬಿ) ಪ್ರಶ್ನಾರ್ಥಕ
(ಸಿ) ವಾಕ್ಯವೇಷ್ಟನ (ಡಿ) ಅರ್ಧವಿರಾಮ
101. 'ವನೌಷಧ' ಪದವು ಈ ಸಂಧಿಗೆ ಉದಾಹರಣೆಯಾಗಿದೆ.
(ಎ) ಗುಣಸಂಧಿ (ಬಿ) ವೃದ್ಧಿಸಂಧಿ
(ಸಿ) ಯಣ್‌ಸಂಧಿ (ಡಿ) ಆಗಮಸಂಧಿ
102. ಪಾರಿಭಾಷಿಕ ಪದಗಳನ್ನು ಬಳಸುವಾಗ ಅನ್ಯಭಾಷೆಯ ಪದಗಳನ್ನು ಬಳಸುವಾಗ, ಪ್ರಮುಖ ಪದಗಳನ್ನು ಸೂಚಿಸುವಾಗ ಬಳಸುವ ಲೇಖನ ಚಿಹ್ನೆ
(ಎ) ಅಲ್ಪವಿರಾಮ (ಬಿ) ಆವರಣ
(ಸಿ) ಉದ್ಧರಣ (ಡಿ) ವಾಕ್ಯವೇಷ್ಟನ

103. ಹುಡುಗರು ಶಾಲೆಗೆ ಹೋದರು; ಆದರೆ ಅಲ್ಲಿ ಅವರು ಓದಲಿಲ್ಲ. ಈ ವಾಕ್ಯವು
(ಎ) ಸಾಮಾನ್ಯ ವಾಕ್ಯ (ಬಿ) ಸರಳ ವಾಕ್ಯ
(ಸಿ) ಮಿಶ್ರ ವಾಕ್ಯ (ಡಿ) ಸಂಯೋಜಿತ ವಾಕ್ಯ

104. 'ಕೆರ್ಮುಗಳೊಳ್' ಪದವು ಈ ವಿಭಕ್ತಿಯಲ್ಲಿದೆ.
(ಎ) ಸಪ್ತಮಿ (ಬಿ) ಷಷ್ಠಿ
(ಸಿ) ಪಂಚಮಿ (ಡಿ) ಚತುರ್ಥಿ

105. 'ಹಲವು ವಸ್ತುಗಳಲ್ಲಿ ಒಂದನ್ನು ನಿಶ್ಚಯವಾಗಿ ಹೇಳುವ ಸಂದರ್ಭದಲ್ಲಿ ಬಳಸುವ ಅವ್ಯಯ ಇದಾಗಿದೆ.
(ಎ) ಕ್ರಿಯಾರ್ಥಕಾವ್ಯಯ
(ಬಿ) ಸಾಮಾನ್ಯಾವ್ಯಯ
(ಸಿ) ಅವಧಾರಣಾರ್ಥಕಾವ್ಯಯ
(ಡಿ) ಅನುಕರಣಾವ್ಯಯ

106. 'ಸಲಾಮು' ಪದವು ಈ ಭಾಷೆಯಿಂದ ಕನ್ನಡಕ್ಕೆ ಬಂದಿದೆ.
(ಎ) ಫಾರ್ಸಿ (ಬಿ) ಹಿಂದೂಸ್ಥಾನಿ
(ಸಿ) ಉರ್ದು (ಡಿ) ಅರಬ್ಬೀ

107. ಇವುಗಳಲ್ಲಿ ಬಹುವ್ರೀಹಿ ಸಮಾಸಕ್ಕೆ ಉದಾಹರಣೆ
(ಎ) ಹೊಸಗನ್ನಡ (ಬಿ) ದೀನಾನಾಥರು
(ಸಿ) ಪೆರ್ಬಯಕೆ (ಡಿ) ಚಕ್ರಪಾಣಿ

108. ತದ್ಧಿತಾಂತ ಅವ್ಯಯಕ್ಕೆ ಉದಾಹರಣೆಯಾದ ಪದವಿದು
(ಎ) ಜಾಣತನ (ಬಿ) ಕನ್ನಡತಿ
(ಸಿ) ಶಾಲೆಯವರೆಗೆ (ಡಿ) ಉಡುಗೆ

109. ಇವುಗಳಲ್ಲಿ 'ಅನ್ವರ್ಥನಾಮ' ಪದ
(ಎ) ಮನುಷ್ಯ (ಬಿ) ವಿಜ್ಞಾನಿ
(ಸಿ) ಕರ್ಮಧಾರಯ (ಡಿ) ದೊಡ್ಡದು

110. ಇವುಗಳಲ್ಲಿ ಹ್ರಸ್ವಸ್ವರಗಳ ಗುಂಪು
(ಎ) ಕ,ಗ,ಜ,ಡ (ಬಿ) ಅ,ಇ,ಉ,ಎ,ಒ
(ಸಿ) ಅ,ಇ,ಉ,ಋ,ಎ (ಡಿ) ಆ, ಈ, ಊ, ನ

111. ಕನ್ನಡ ವರ್ಣಮಾಲೆಯಲ್ಲಿ ಪ್ರತಿ ವರ್ಗದ ಒಂದು ಮತ್ತು ಮೂರನೇ ಅಕ್ಷರಗಳನ್ನು ಹೀಗೆಂದು ಕರೆಯುತ್ತೇವೆ.
(ಎ) ಅಲ್ಪಪ್ರಾಣಾಕ್ಷರಗಳು (ಬಿ) ಮಹಾಪ್ರಾಣಾಕ್ಷರಗಳು
(ಸಿ) ವ್ಯಂಜನಗಳು (ಡಿ) ಅನುನಾಸಿಕಾಕ್ಷರಗಳು

112. 'ಕಾರ್ಖಾನೆ'– ಪದವು ಈ ಭಾಷೆಯಿಂದ ಕನ್ನಡಕ್ಕೆ ಬಂದಿದೆ
(ಎ) ಉರ್ದು (ಬಿ) ಅರಬ್ಬೀ
(ಸಿ) ಫಾರ್ಸಿ (ಡಿ) ಹಿಂದೂಸ್ಥಾನಿ

113. ಜಾಣತನ– ಪದವು ಈ ತದ್ಧಿತಾಂತಕ್ಕೆ ಉದಾಹರಣೆಯಾಗಿದೆ.
(ಎ) ತದ್ಧಿತಾಂತನಾಮ (ಬಿ) ತದ್ಧಿತಾಂತ ಭಾವನಾಮ
(ಸಿ) ಅವ್ಯಯ (ಡಿ) ತದ್ಧಿತಾಂತಾವ್ಯಯ

114. ಹಳಗನ್ನಡದ ಸಪ್ತಮೀ ವಿಭಕ್ತಿ ಪ್ರತ್ಯಯ ಇದು
(ಎ) ಅತ್ತಣಿಂ (ಬಿ) ಒಳ್
(ಸಿ) ಮ್ (ಡಿ) ಅಂ

115. 'ಮೈದೋರು' ಪದವು ಈ ಸಂಧಿಗೆ ಉದಾಹರಣೆಯಾಗಿದೆ.
(ಎ) ಲೋಪಸಂಧಿ (ಬಿ) ಆದೇಶಸಂಧಿ
(ಸಿ) ಆಗಮಸಂಧಿ (ಡಿ) ಗುಣಸಂಧಿ

116. ಪಾರಿಭಾಷಿಕ ಪದಗಳನ್ನು ಬಳಸುವಾಗ ಈ ಚಿಹ್ನೆಯನ್ನು ಬಳಸಲಾಗುವುದು.
(ಎ) ವಾಕ್ಯವೇಷ್ಟನ ಚಿಹ್ನೆ (ಬಿ) ಭಾವಸೂಚಕಚಿಹ್ನೆ
(ಸಿ) ಉದ್ಧರಣ ಚಿಹ್ನೆ (ಡಿ) ಆವರಣ ಚಿಹ್ನೆ

117. ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನವಾಕ್ಯಕ್ಕೆ ಅಧೀನವಾಗಿದ್ದರೆ ಅಂಥ ವಾಕ್ಯವನ್ನು ಹೀಗೆನ್ನುವರು.
(ಎ) ಸಾಮಾನ್ಯವಾಕ್ಯ (ಬಿ) ಮಿಶ್ರವಾಕ್ಯ
(ಸಿ) ಸರಳವಾಕ್ಯ (ಡಿ) ಸಂಯೋಜಿತವಾಕ್ಯ

118. ಗುರು–ಲಘು ನಡುವಿರೆ ಅದು ________
(ಎ) ಮ–ನ ಗಣ (ಬಿ) ಭ–ಯ ಗಣ
(ಸಿ) ಜ–ರ ಗಣ (ಡಿ) ಸ–ತ ಗಣ

119. 'ಕಣ್ದೆರೆ' ಪದವು ಈ ಸಮಾಸಕ್ಕೆ ಸೇರಿದೆ.
(ಎ) ತತ್ಪುರುಷ ಸಮಾಸ (ಬಿ) ಗಮಕ ಸಮಾಸ
(ಸಿ) ಕ್ರಿಯಾ ಸಮಾಸ (ಡಿ) ದ್ವಂದ್ವ ಸಮಾಸ

120. 'ಬವರ' ಪದದ ಅರ್ಥವಿದು
(ಎ) ಜಗಳ (ಬಿ) ಭೂಮಿ
(ಸಿ) ಸುಳ್ಳು (ಡಿ) ಸ್ನೇಹಿತ

121. 'ಬೆಂಬತ್ತು' ಪದವು ಈ ಸಂಧಿಗೆ ಉದಾಹರಣೆ;
(ಎ) ಲೋಪಸಂಧಿ (ಬಿ) ಆದೇಶಸಂಧಿ
(ಸಿ) ಆಗಮಸಂಧಿ (ಡಿ) ಗುಣಸಂಧಿ

122. ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಈ ಚಿಹ್ನೆ ಬಳಸಲಾಗುವುದು.
(ಎ) ವಾಕ್ಯವೇಷ್ಠನ (ಬಿ) ಅರ್ಧವಿರಾಮ
(ಸಿ) ಉದ್ಧರಣ (ಡಿ) ಆವರಣ

123. ವರ್ತಮಾನಕಾಲದ ಕಾಲಸೂಚಕ ಪ್ರತ್ಯಯವಿದು.
(ಎ)ದ (ಬಿ) ಉತ್ತ
(ಸಿ) ಉ (ಡಿ) ವ

124. 'ಕಡೆಗಣ್ಣು' ಪದವು ಈ ಸಮಾಸಕ್ಕೆ ಉದಾಹರಣೆ:
(ಎ) ದ್ವಂದ್ವಸಮಾಸ (ಬಿ) ತತ್ಪುರುಷ ಸಮಾಸ
(ಸಿ) ಬಹುವ್ರೀಹಿ ಸಮಾಸ (ಡಿ) ಅಂಶಿ ಸಮಾಸ

125. 'ಲೋಕದಿಂ' ಪದವು ಈ ವಿಭಕ್ತಿಯಲ್ಲಿದೆ.
(ಎ)ಪ್ರಥಮ (ಬಿ) ತೃತೀಯ
(ಸಿ) ದ್ವಿತೀಯ (ಡಿ) ಸಪ್ತಮಿ

126. ಮಹೇಶ ಪದವು ಈ ನಾಮಪದಕ್ಕೆ ಉದಾಹರಣೆಯಾಗಿದೆ?
(ಎ) ರೂಢನಾಮ (ಬಿ) ಅನ್ವರ್ಥನಾಮ
(ಸಿ) ಸರ್ವನಾಮ (ಡಿ) ಅಂಕಿತನಾಮ

127. 'ದವಾಖಾನೆ' ' ಪದವು ಕನ್ನಡಕ್ಕೆ ಈ ಭಾಷೆಯಿಂದ ಬಂದಿದೆ;
(ಎ) ಪೋರ್ಚುಗೀಸ್ (ಬಿ) ಫಾರ್ಸಿ
(ಸಿ) ಉರ್ದು (ಡಿ) ಹಿಂದೂಸ್ಥಾನಿ

128. 'ಕಾರವಾರದಲ್ಲಿ ಮಲೇರಿಯಾ ವ್ಯಾಪಕವಾಗಿ ಹಬ್ಬಿತ್ತು' ಈ ವಾಕ್ಯವು
(ಎ) ನಿಷೇಧಾರ್ಥಕ ವಾಕ್ಯ (ಬಿ)ಮಿಶ್ರ ವಾಕ್ಯ
(ಸಿ)ಸಾಮಾನ್ಯ ವಾಕ್ಯ (ಡಿ) ಸಂಯೋಜಿತ ವಾಕ್ಯ

129. ಕೃದಂತಭಾವನಾಮಕ್ಕೆ ಉದಾಹರಣೆಯಾದ ಪದ ಇದು.
(ಎ) ತಿನ್ನುವ (ಬಿ) ಓಡಿ
(ಸಿ) ಬಾಳಿದ (ಡಿ) ನೆನಪು

130. ಎರಡು ಬೇರೆಬೇರೆ ವಾಕ್ಯಗಳಲ್ಲಿ ಅರ್ಥಸಾದೃಶ್ಯದಿಂದ ಬಿಂಬ ಪ್ರತಿಬಿಂಬ ಭಾವ ತೋರಿದರೆ ಅದು ಯಾವ ಅಲಂಕಾರ?
(ಎ) ಉಪಮಾಲಂಕಾರ (ಬಿ) ಶ್ಲೇಷಾಲಂಕಾರ
(ಸಿ) ದೃಷ್ಟಾಂತಾಲಂಕಾರ (ಡಿ) ರೂಪಕಾಲಂಕಾರ

131. 'ಅನುಭವ' ಪದದಲ್ಲಿರುವ ಅವರ್ಗೀಯ ವ್ಯಂಜನಾಕ್ಷರ
ಎ) ಅ ಬಿ) ನ
ಸಿ) ಭ ಡಿ) ವ

132. **ಇದಿರುಗೊಳೆ** ನಾವಿದನು ಏನಹುದೊ ಬನ್ನ. ಈ ವಾಕ್ಯದಲ್ಲಿ ಗೆರೆ ಎಳೆದಿರುವ ಪದದ ಸಂಧಿ
ಎ) ಸವರ್ಣದೀರ್ಘಸಂಧಿ ಬಿ) ಆಗಮಸಂಧಿ
ಸಿ) ಲೋಪಸಂಧಿ ಡಿ) ಆದೇಶಸಂಧಿ

133. 'ಅತ್ಯಾದರ' ಪದದಲ್ಲಿರುವ ಸಂಧಿ
ಎ) ಯಣ್ ಸಂಧಿ ಬಿ) ಯಕಾರಾಗಮಸಂಧಿ
ಸಿ) ಸವರ್ಣದೀರ್ಘಸಂಧಿ ಡಿ) ವೃದ್ಧಿಸಂಧಿ

134. ಪಾದ್ರಿಯು ಪ್ರಾರ್ಥನೆಯನ್ನು ಓದುವರು. ಈ ವಾಕ್ಯವು ಯಾವ ಕಾಲದಲ್ಲಿದೆ.
ಎ) ಭೂತಕಾಲ ಬಿ) ವರ್ತಮಾನ ಕಾಲ
ಸಿ) ಭವಿಷ್ಯತ್ಕಾಲ ಡಿ) ಪೂಜಾಕಾಲ

135. "ಹರಿಕಾರ' ಪದದ ಅರ್ಥ
ಎ) ಓಲೆಕಾರ ಬಿ) ಹರಿಭಕ್ತ ಸಿ) ಪ್ರತಿನಿಧಿ ಡಿ) ಮುಂದಾಳು

136. ವಿಶ್ವೇಶ್ವರಯ್ಯನವರು ಕೈಗಾರಿಕೀಕರಣ ಇಲ್ಲವೆ ಅವನತಿ ಎಂಬ ಘೋಷಣೆ ಮಾಡಿದರು. ಈ ವಾಕ್ಯದಲ್ಲಿ ಬಿಟ್ಟಿರುವ ಲೇಖನ ಚಿಹ್ನೆ
ಎ) ವಾಕ್ಯವೇಷ್ಟನ ಬಿ) ಅರ್ಧವಿರಾಮ
ಸಿ) ಉದ್ಧರಣ ಡಿ) ವಿವರಣಾತ್ಮಕ

137. ಕೇಂದ್ರ ಲೋಕ ಸೇವಾ ಆಯೋಗ ವರ್ಷಕ್ಕೆ ಎರಡು ಬಾರಿ ನಡೆಸುವ ಎನ್.ಡಿ.ಎ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಬೇಕು ಹಾಗೂ ಅವರು ಸಂದರ್ಶನದಲ್ಲಿ ಆಯ್ಕೆಯಾಗಬೇಕು. ಈ ವಾಕ್ಯದ ವಿಧ
ಎ) ಸಾಮಾನ್ಯ ವಾಕ್ಯ ಬಿ) ಸಂಯೋಜಿತ ವಾಕ್ಯ
ಸಿ) ಮಿಶ್ರವಾಕ್ಯ ಡಿ) ವಿವರಣಾತ್ಮಕ ವಾಕ್ಯ

138. ಕೆಳಗೆ ಕೊಟ್ಟಿರುವ ಸಮಸ್ತ ಪದಗಳಲ್ಲಿ ಕರ್ಮಧಾರಯ ಸಮಾಸ ಪದ
ಎ) ಹೊಸಗನ್ನಡ ಬಿ) ತಲೆನೋವು
ಸಿ) ಸಪ್ತಸ್ವರಗಳು ಡಿ) ಕಡೆಗಣ್ಣು

139. ಬಡತನ– ಈ ಪದದಲ್ಲಿರುವ ವ್ಯಾಕರಣಾಂಶ
ಎ) ತದ್ಧಿತಾಂತ ನಾಮ ಬಿ) ತದ್ಧಿತಾಂತಾವ್ಯಯ
ಸಿ) ಕೃದಂತಭಾವನಾಮ ಡಿ) ತದ್ಧಿತಾಂತ ಭಾವನಾಮ

140. ಈ ಕೆಳಗಿನ ನಾಮಪದಗಳಲ್ಲಿ ಪಂಚಮಿ ವಿಭಕ್ತಿ ಹೊಂದಿರುವ ಪದ ಎ) ಮರದಿಂದ ಬಿ) ಜಲದಿಂ
ಸಿ) ಮರದತ್ತಣಿಂ ಡಿ) ರಾಯಂಗೆ

141. 'ಪೂಜಾರಿ' ಪದವು ಈ ನಾಮಪದಕ್ಕೆ ಉದಾಹರಣೆ.
(ಎ) ಅಂಕಿತನಾಮ (ಬಿ) ರೂಢನಾಮ
(ಸಿ) ಅನ್ವರ್ಥನಾಮ (ಡಿ) ಭಾವನಾಮ

142. ಎರಡು ಮಾತ್ರಾಕಾಲದಲ್ಲಿ ಉಚ್ಚರಿಸುವ ಸ್ವರಾಕ್ಷರಗಳಿಗೆ ಹೀಗೆನ್ನುವರು:
(ಎ) ದೀರ್ಘಸ್ವರ (ಬಿ) ಹ್ರಸ್ವಸ್ವರ
(ಸಿ) ಪ್ಲುತಸ್ವರ (ಡಿ) ಸಪ್ತಸ್ವರ

143. 'ಸಾಕ್ಷಿಮಾಡು' ಪದವು ಈ ಸಮಾಸಕ್ಕೆ ಉದಾಹರಣೆ:
(ಎ) ಕರ್ಮಧಾರಯ ಸಮಾಸ (ಬಿ) ತತ್ಪುರುಷ ಸಮಾಸ
(ಸಿ) ದ್ವಿಗು ಸಮಾಸ (ಡಿ) ಕ್ರಿಯಾ ಸಮಾಸ

144. ಹರ್ಷ, ಆಶ್ಚರ್ಯ, ಸಂತೋಷ, ವಿಷಾದ, ದುಃಖ ಮುಂತಾದ ಭಾವನೆಗಳನ್ನು ಸೂಚಿಸುವ ಪದಗಳ ಮುಂದೆ ಈ ಚಿಹ್ನೆಯನ್ನು ಬಳಸಲಾಗುವುದು;
(ಎ) ಉದ್ಧರಣ ಚಿಹ್ನೆ (ಬಿ) ಭಾವಸೂಚಕ ಚಿಹ್ನೆ
(ಸಿ) ಪ್ರಶ್ನಾರ್ಥಕ ಚಿಹ್ನೆ (ಡಿ) ಅರ್ಧವಿರಾಮ ಚಿಹ್ನೆ

145. 'ಸನ್ಮಾನ' ಪದದಲ್ಲಿ ಏರ್ಪಟ್ಟಿರುವ ಸಂಧಿ:
(ಎ) ಯಣ್ (ಬಿ) ಅನುನಾಸಿಕ
(ಸಿ) ಶ್ಚುತ್ವ (ಡಿ) ವೃದ್ಧಿ

146. ಕಾರವಾರದಲ್ಲಿ ಮಲೇರಿಯಾ ಹಬ್ಬಿತ್ತು; ಆದ್ದರಿಂದ ವೀರೇಶ್ವರ ಪಾಠಕ್ ಅವರು ಮಲೇರಿಯಾದಿಂದ ಬಳಲಬೇಕಾಯಿತು' ಈ ವಾಕ್ಯವು
(ಎ) ಸಾಮಾನ್ಯ ವಾಕ್ಯ (ಬಿ) ಮಿಶ್ರವಾಕ್ಯ
(ಸಿ) ಸಂಯೋಜಿತ ವಾಕ್ಯ (ಡಿ) ವಿಶೇಷ ವಾಕ್ಯ

147. ಹೆಚ್ಚಿನ ವಿವರಣೆಗಳನ್ನು, ಅರ್ಥಗಳನ್ನು ನೀಡುವ ಸಂದರ್ಭದಲ್ಲಿ ಬಳಸುವ ಲೇಖನ ಚಿಹ್ನೆ;
(ಎ) ಆವರಣ (ಬಿ) ಉದ್ಧರಣ
(ಸಿ) ವಾಕ್ಯವೇಷ್ಟನ (ಡಿ) ವಿವರಣಾತ್ಮಕ

148. 'ಕಿಮ್ಮತ್ತು' ಈ ಭಾಷೆಯಿಂದ ಬಂದಿದೆ.
(ಎ) ಪೋರ್ಚುಗೀಸ್ (ಬಿ) ಪರ್ಷಿಯನ್
(ಸಿ) ಇಂಗ್ಲೀಷ್ (ಡಿ) ಉರ್ದು

149. 'ಉಪಮೇಯ ಉಪಮಾನಗಳು ಅರ್ಥ ಸಾದೃಶ್ಯದಿಂದ ಒಂದಕ್ಕೊಂದು ಬಿಂಬ ಪ್ರತಿಬಿಂಬ ಭಾವದಂತೆ ತೋರುತ್ತಿದ್ದರೆ' ಅದು:
(ಎ) ದೃಷ್ಟಾಂತಾಲಂಕಾರ (ಬಿ) ಉಪಮಾಲಂಕಾರ
(ಸಿ) ಶಬ್ದಾಲಂಕಾರ (ಡಿ) ಶ್ಲೇಷಾಲಂಕಾರ

150. ನೋಡನು – ಈ ಕ್ರಿಯಾಪದ ಈ ರೂಪದಲ್ಲಿದೆ:
(ಎ) ನಿಷೇಧಾರ್ಥಕ (ಬಿ) ಸಂಭಾವನಾರ್ಥಕ
(ಸಿ) ವಿಧ್ಯರ್ಥಕ (ಡಿ) ಆತ್ಮಾರ್ಥಕ

151. 'ನೊಳ ' ಈ ಪದದ ಅರ್ಥ.
(ಎ) ಬಾವಿ (ಬಿ) ಹುಲಿ
(ಸಿ) ಕೊಳ (ಡಿ) ನೊಣ

152. ಆತ್ಮಾರ್ಥಕ ಸರ್ವನಾಮಕ್ಕೆ ಉದಾಹರಣೆ:
(ಎ) ನೀನು (ಬಿ) ನೀವು
(ಸಿ) ತಾನು (ಡಿ) ನಾವು

153. ಇವುಗಳಿಲ್ಲಿ ಸಂಭಾವನಾರ್ಥಕ ರೂಪಕ್ಕೆ ಉದಾಹರಣೆಯಾದ ಪದವಿದು;
(ಎ) ಮಾಡಲಿ (ಬಿ) ಮಾಡನು
(ಸಿ) ಮಾಡಿಯಾನು (ಡಿ) ಮಾಡಿದನು

154. 'ಕೃದಂತ ಭಾವನಾಮ'ಕ್ಕೆ ಉದಾಹರಣೆ ಇದು;
(ಎ) ಮಾಡಲಿಕ್ಕೆ (ಬಿ) ಮಾಟ
(ಸಿ) ಮಾಡಲು (ಡಿ) ಮಾಡಿದ

155. 'ಮುಖಶಾಲೆ ' ಪದದ ತದ್ಭವ ರೂಪ;
(ಎ) ಮೊಗಸಾಲೆ (ಬಿ) ಮಕಸಾಲೆ
(ಸಿ) ಮೊಕಸಾಲೆ (ಡಿ) ಮಗಸಾಲೆ

156. 'ಇಮ್ಮಾವು' ಪದವು ಈ ಸಮಾಸಕ್ಕೆ ಉದಾಹರಣೆ.
(ಎ) ಕರ್ಮಧಾರಯ (ಬಿ) ತತ್ಪುರುಷ
(ಸಿ) ಅಂಶಿ (ಡಿ) ದ್ವಿಗು

157. 'ಸಹೋದ್ಯೋಗಿ' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆ
(ಎ) ಗುಣಸಂಧಿ (ಬಿ) ಅನುನಾಸಿಕ ಸಂಧಿ
(ಸಿ) ಯಣ್ಸಂಧಿ (ಡಿ) ವೃದ್ಧಿ ಸಂಧಿ

158. 'ಕಾರ್ಖಾನೆ' ಈ ಪದವು ಕನ್ನಡಕ್ಕೆ ಈ ಭಾಷೆಯಿಂದ ಬಂದಿದೆ
(ಎ) ಹಿಂದೂಸ್ಥಾನಿ (ಬಿ) ಉರ್ದು
(ಸಿ) ಇಂಗ್ಲಿಷ್ (ಡಿ) ಫಾರ್ಸಿ

159. ಕರ್ಮಾರ್ಥ ಕಾರಕವು ಈ ವಿಭಕ್ತಿಯಲ್ಲಿ ಕಂಡುಬರುವುದು;
(ಎ) ದ್ವಿತೀಯಾ (ಬಿ) ಸಪ್ತಮೀ
(ಸಿ) ತೃತೀಯಾ (ಡಿ) ಪಂಚಮೀ

160. ನನಗೋಸ್ಕರ– ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ;
(ಎ) ತದ್ಧಿತಾಂತನಾಮ (ಬಿ) ತದ್ಧಿತಾಂತ ಭಾವನಾಮ
(ಸಿ) ತದ್ಧಿತಾಂತಾವ್ಯಯ (ಡಿ) ಕೃದಂತನಾಮ

161. 'ಬನ್ನ' ಈ ಪದದ ಅರ್ಥ.
(ಎ) ವನ (ಬಿ) ಬಣ್ಣ
(ಸಿ) ತೊಂದರೆ (ಡಿ) ಹಣ್ಣು

162. ಇವುಗಳಲ್ಲಿ ಯಾವುದು ರಗಳೆಯ ವಿಧವಲ್ಲ
(ಎ) ಭೋಗ (ಬಿ) ಉತ್ಸಾಹ
(ಸಿ) ಮಂದಾನಿಲ (ಡಿ) ಲಲಿತ

163. ಎರಡು ಬೇರೆ ಬೇರೆ ವಾಕ್ಯಗಳಲ್ಲಿ ಅರ್ಥಸಾದೃಶ್ಯದಿಂದ ಬಿಂಬ ಪ್ರತಿಬಿಂಬ ಭಾವವು ತೋರಿಬಂದರೆ ಅದನ್ನು ಯಾವ ಅಲಂಕಾರವೆನ್ನುತ್ತಾರೆ.
(ಎ) ಶ್ಲೇಷಾಲಂಕಾರ (ಬಿ) ರೂಪಕಾಲಂಕಾರ
(ಸಿ) ದೃಷ್ಟಾಂತಾಲಂಕಾರ (ಡಿ) ಅರ್ಥಾಂತರನ್ಯಾಸ

164. 'ತದ್ಧಿತಾಂತಾವ್ಯಯ'ಕ್ಕೆ ಉದಾಹರಣೆ ಇದು;
(ಎ) ಮಾಡಲಿಕ್ಕೆ (ಬಿ) ಶಾಲೆಯವರೆಗೆ
(ಸಿ) ಜಾಣತನ (ಡಿ) ತಟ್ಟನೆ

165. 'ಪ್ರಸಾದ' ಪದದ ತದ್ಭವ ರೂಪ;
(ಎ) ಪಸದ (ಬಿ) ಹಸಾದ
(ಸಿ) ಪ್ರಸವ (ಡಿ) ಪಸಾದ

166. 'ಹನುಮಭೀಮರಾಮರು' ಪದವು ಈ ಸಮಾಸಕ್ಕೆ ಉದಾಹರಣೆ.
(ಎ) ಕರ್ಮಧಾರಯ (ಬಿ) ತತ್ಪುರುಷ
(ಸಿ) ದ್ವಂದ್ವ (ಡಿ) ದ್ವಿಗು

167. ರಾಹಿಲನು ತೆವಳುತ್ತಲೇ ಆತುರದಿಂದ ಮನೆಯೊಳಗೆ ನುಗ್ಗಿ ಬಾಗಿಲಿಕ್ಕಿಕೊಂಡು ಮನೆಯಾಕೆಯನ್ನು ದಿಟ್ಟಿಸಿದನು – ಈ ವಾಕ್ಯದ ವಿಧ
(ಎ) ಮಿಶ್ರವಾಕ್ಯ (ಬಿ) ಸಂಯೋಜಿತ ವಾಕ್ಯ
(ಸಿ) ಸಾಮಾನ್ಯವಾಕ್ಯ (ಡಿ) ಪ್ರಶ್ನಾ ವಾಕ್ಯ

168. 'ಸದ್ವಂಶ' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆ :
(ಎ) ಗುಣಸಂಧಿ (ಬಿ) ಆದೇಶಸಂಧಿ
(ಸಿ) ಜಶ್ತ್ವಸಂಧಿ (ಡಿ) ವೃದ್ಧಿ ಸಂಧಿ

169. 'ತರಬೇತು' ಈ ಪದವು ಕನ್ನಡಕ್ಕೆ ಈ ಭಾಷೆಯಿಂದ ಬಂದಿದೆ
(ಎ) ಹಿಂದೂಸ್ಥಾನಿ (ಬಿ) ಉರ್ದು
(ಸಿ) ಇಂಗ್ಲೀಷ್ (ಡಿ) ಅರಬ್ಬಿ

170. **ಉರ್ವಿಯೊಳ್** ಕೌಸಲ್ಯೆ ಪಡೆದ ಕುವರಂ ರಾಮ– ಗೆರೆ ಎಳೆದ ಪದದಲ್ಲಿರುವ ವಿಭಕ್ತಿ
(ಎ) ದ್ವಿತೀಯಾ (ಬಿ) ಸಪ್ತಮೀ
(ಸಿ) ತೃತೀಯಾ (ಡಿ) ಪಂಚಮೀ

171. 'ವನೌಷಧ' ಪದದಲ್ಲಿ ಆಗಿರುವ ಸಂಧಿ;
(ಎ) ಅನುನಾಸಿಕ (ಬಿ) ಶ್ಚುತ್ವ
(ಸಿ) ವೃದ್ಧಿ (ಡಿ) ಯ ಕಾರಾಗಮ

172. ಅನೇಕ ಉಪವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದಾಗ ಉಪವಾಕ್ಯಗಳು ಮುಗಿದಾಲೆಲ್ಲ ಈ ಚಿಹ್ನೆಯನ್ನು ಬಳಸಬೇಕು;
(ಎ) ಅಲ್ಪವಿರಾಮ (ಬಿ) ಆವರಣ
(ಸಿ) ಅರ್ಧವಿರಾಮ (ಡಿ) ಪ್ರಶ್ನಾರ್ಥಕ

173. "ನಡೆಯನು" ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ;
(ಎ) ವಿಧ್ಯರ್ಥಕ (ಬಿ) ಸಂಭಾವನಾರ್ಥಕ
(ಸಿ) ನಿಷೇಧಾರ್ಥ (ಡಿ) ಪ್ರಶ್ನಾರ್ಥಕ

174. 'ಗದ್ಯಾಣ' ಪದವು ಈ ಭಾಷೆಯಿಂದ ಕನ್ನಡಕ್ಕೆ ಬಂದಿದೆ;
(ಎ) ಪರ್ಷಿಯನ್ (ಬಿ) ಉರ್ದು
(ಸಿ) ಗ್ರೀಕ್ (ಡಿ) ಅರಬ್ಬಿ

175. ಇವುಗಳಲ್ಲಿ ತೃತೀಯಾ ವಿಭಕ್ತಿಯುಳ್ಳ ಪದವಿದು;
(ಎ) ಗುರುನತ್ತಣಿಂ (ಬಿ) ದ್ರೋಣಂ
(ಸಿ) ಕುಂಭಂಭವನಂ (ಡಿ) ಚಟ್ಟರಿಂ

176. 'ಸಂದೆಯ' ಪದದ ತತ್ಸಮ ರೂಪವಿದು;
(ಎ) ಸಂಧ್ಯಾ (ಬಿ) ಸಂದಿಯ
(ಸಿ) ಸಂದೇಹ (ಡಿ) ಸಂಯಮ

177. ಇವುಗಳಲ್ಲಿ ಜೋಡುನುಡಿಗೆ ಉದಾಹರಣೆಯಾದ ಪದವಿದು:
(ಎ) ಮೊಟ್ಟಮೊದಲು (ಬಿ) ಧಗಧಗ
(ಸಿ) ಮೊದಲ ಮಾತು (ಡಿ) ಹಾಲುಗೀಲು

178. "ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ" ಅಂತಹ ವಾಕ್ಯವು :
(ಎ) ನಿಷೇಧಾರ್ಥಕ ವಾಕ್ಯ (ಬಿ) ಮಿಶ್ರ ವಾಕ್ಯ
(ಸಿ) ಸಂಯೋಜಿತ ವಾಕ್ಯ (ಡಿ) ಸಾಮಾನ್ಯ ವಾಕ್ಯ

179. 'ಇದುವೇ' ಪದವು ಅವ್ಯಯಕ್ಕೆ ಉದಾಹರಣೆಯಾಗಿದೆ;
(ಎ) ಸಾಮಾನ್ಯಾವ್ಯಯ
(ಬಿ) ಭಾವಸೂಚಕಾವ್ಯಯ
(ಸಿ) ಸಂಬಂಧಾರ್ಥಕಾವ್ಯಯ
(ಡಿ) ಅವಧಾರಣಾರ್ಥಕಾವ್ಯಯ

180. 'ಅಂಜಿಕೆ' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ;
(ಎ) ಕೃದಂತನಾಮ (ಬಿ) ಕೃದಂತ ಭಾವನಾಮ
(ಸಿ) ಕೃಂದಂತಾವ್ಯಯ (ಡಿ) ತದ್ಧಿತಾಂತ ಭಾವನಾಮ

181. ವರ್ಗೀಯ ವ್ಯಂಜನಗಳಲ್ಲಿ ಐದನೆ ಅಕ್ಷರಗಳನ್ನು ಹೀಗೆನ್ನುತ್ತಾರೆ.
ಎ) ಅಲ್ಪಪ್ರಾಣ ಬಿ) ಮಹಾಪ್ರಾಣ
ಸಿ) ಅನುನಾಸಿಕ ಡಿ) ವಿಸರ್ಗ

182. 'ದಿಟ್ಟಿ' ಈ ಪದದ ತತ್ಸಮ ರೂಪ ಇದು
ಎ)ದೃಷ್ಪಿ ಬಿ) ದೃಷ್ಠಿ
ಸಿ) ದುಬ್ಬಿ ಡಿ) ದಿಬ್ಬ

183. 'ರಸೀದಿ' ಪದ ಕನ್ನಡಕ್ಕೆ -----ಭಾಷೆಯಿಂದ ಬಂದಿದೆ
ಎ) ಪೋರ್ಚುಗೀಸ್ ಬಿ) ಸಂಸ್ಕೃತ
ಸಿ) ಇಂಗ್ಲೀಷ್ ಡಿ) ಉರ್ದು

184. 'ಪೆರ್ಮರ" ಈಪದ ಯಾವ ಸಮಾಸಕ್ಕೆ ಉದಾ;ಆಗಿದೆ
ಎ) ತತ್ಪುರುಷ ಬಿ) ದ್ವಂದ್ವ
ಸಿ) ಕರ್ಮಧಾರಯ ಡಿ) ದ್ವಿಗು

185. 'ತನ್ಮಯ' ಇಲ್ಲಿರುವ ಸಂಧಿ
ಎ) ಅನುನಾಸಿಕ ಬಿ) ಸವರ್ಣದೀರ್ಘ
ಸಿ) ಆದೇಶ ಡಿ) ಗುಣ

186. 'ಮಂಡಲಗಿಂಡಲ' ಈ ಪದವು
ಎ) ನುಡಿಗಟ್ಟು ಬಿ) ದ್ವಿರುಕ್ತಿ
ಸಿ) ಅನುಕರಣಾವ್ಯಯ ಡಿ) ಜೋಡುನುಡಿ

187. 'ಅಥವಾ' ಎಂಬುದು
ಎ)ಅನುಕರಣಾವ್ಯಯ ಬಿ) ಸಂಬಂಧಾರ್ಥಕ ಅವ್ಯಯ
ಸಿ)ಸಾಮಾನ್ಯ ಅವ್ಯಯ ಡಿ) ಭಾವಸೂಚಕ ಅವ್ಯಯ

188. 'ಭಿಕ್ಷುಕ' ಇದು ಈ ನಾಮಪದವಾಗಿದೆ
ಎ) ರೂಢನಾಮ ಬಿ) ಅನ್ವರ್ಥನಾಮ
ಸಿ) ಸರ್ವನಾಮ ಡಿ) ಅಂಕಿತನಾಮ

189. 'ಅಸ್ತಿಭಾರ' ಪದದ ಅರ್ಥ
ಎ) ಆಸ್ತಿಯ ಜವಾಬ್ದಾರಿ ಬಿ) ಬುನಾದಿ
ಸಿ) ಅಸ್ತಿರ ಡಿ) ಭಾರ

190. ತದ್ಧಿತಾಂತ ಭಾವನಾಮಕ್ಕೆ ಉದಾಹರಣೆ ಕೊಡಿ
ಎ) ಜಾಣ್ಮೆ' ಬಿ) ರಾಮನಂತೆ
ಸಿ) ಮಾಲೆಗಾರ ಡಿ) ಗುಣವಂತ

191. ಘ,ಝ,ಢ,ಧ,ಭ, ಅಕ್ಷರಗಳನ್ನು ಹೀಗೆಂದು ಕರೆಯುತ್ತೇವೆ.
ಎ) ದೀರ್ಘಸ್ವರಾಕ್ಷರ ಬಿ) ಅಲ್ಪಪ್ರಾಣಾಕ್ಷರ
ಸಿ) ಮಹಾಪ್ರಾಣಾಕ್ಷರ ಡಿ) ಅನುನಾಸಿಕಾಕ್ಷರ.

192. 'ದಿಟ್ಟಿ' ಇದರ ತತ್ಸಮ ರೂಪ
ಎ) ದಿಟ್ಟ ಬಿ) ದಿಟ್ಟಿ
ಸಿ) ದೃಷ್ಪಿ ಡಿ) ಮುಷ್ಠಿ

193. 'ಪ್ರಾಣಾಹುತಿ' ಈ ಸಂಧಿಗೆ ಉದಾಹರಣೆ
ಎ) ಯಣ್ ಸಂಧಿ ಬಿ) ಆದೇಶ ಸಂಧಿ
ಸಿ) ಸವರ್ಣದೀರ್ಘ ಸಂಧಿ ಡಿ) ಆಗಮ ಸಂಧಿ

194. 'ರಾಮಲಕ್ಷ್ಮಣರು' ಇದು ಈ ಸಮಾಸಕ್ಕೆ ಉದಾಹರಣೆಯಾಗಿದೆ.
ಎ) ಕರ್ಮಧಾರಯ ಬಿ) ದ್ವಂದ್ವ
ಸಿ) ದ್ವಿಗು ಡಿ) ತತ್ಪುರುಷ

195. 'ಬಾಬಾ ಇದು ಈ ವ್ಯಾಕರಣಾಂಶವಾಗಿದೆ.
ಎ) ಕ್ರಿಯಾಪದ ಬಿ) ಅನುಕರಣಾವ್ಯಯ
ಸಿ) ದ್ವಿರುಕ್ತಿ ಡಿ) ಜೋಡಿನುಡಿ

196. 'ಬಸ್ಸು **<u>ರೊಯ್ಯನೆ</u>**'ಬಂತು ಗೆರೆ ಎಳೆದ ಪದವು
ಎ) ಅನುಕರಣಾವ್ಯಯ ಬಿ) ಭಾವಸೂಚಕ ಅವ್ಯಯ
ಸಿ) ನಾಮಪದ ಡಿ) ಸಾಮಾನ್ಯ ಅವ್ಯಯ

197. 'ಅವನು' ಇದು ಈ ನಾಮಪದವಾಗಿದೆ
ಎ) ರೂಢನಾಮ ಬಿ) ಅನ್ವರ್ಥನಾಮ
ಸಿ) ಸರ್ವನಾಮ ಡಿ) ಅಂಕಿತನಾಮ

198. ಸ್ವತಂತ್ರವಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವನ್ನು ಹೀಗೆನ್ನುವರು
ಎ) ಸರಳವಾಕ್ಯ ಬಿ)ಸಂಯುಕ್ತವಾಕ್ಯ
ಸಿ) ಸಂಯೋಜಿತವಾಕ್ಯ ಡಿ) ಮಿಶ್ರವಾಕ್ಯ

199. 'ತಾವು ಕಡಿಮೆಮಾತಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದೀರಿ'. ಈ ವಾಕ್ಯದ ನಡುವೆ ಬಳಸಿರುವ ಚಿನ್ಹೆ
ಎ) ಉದ್ಧರಣ ಬಿ) ಆವರಣ
ಸಿ) ಪೂರ್ಣವಿರಾಮ ಡಿ) ಅರ್ಧವಿರಾಮ

200. 'ಆಟ' ಇದು ಯಾವ ವ್ಯಾಕರಣಕ್ಕೆ ಸೇರಿದೆ
ಎ) ತದ್ಧಿತಾಂತ ಬಿ) ಕೃದಂತನಾಮ
ಸಿ) ಕೃದಂತಭಾವನಾಮ ಡಿ)ಕೃದಂತ ಅವ್ಯಯ

201. ಎರಡಕ್ಕಿಂತ ಹೆಚ್ಚು ಮಾತ್ರಾ ಕಾಲದಲ್ಲಿ ಉಚ್ಚರಿಸುವ ಸ್ವರಾಕ್ಷರಗಳಿಗೆ ಏನೆಂದು ಕರೆಯುತ್ತಾರೆ.
ಎ) ಪ್ಲುತ ಸ್ವರಗಳು ಬಿ) ದೀರ್ಘಸ್ವರಗಳು
ಸಿ) ಹ್ರಸ್ವಸ್ವರಗಳು ಡಿ) ಅನುಸ್ವರಗಳು

202. ಧಾತುಗಳಿಗೆ 'ಉವ' ಎಂಬ ಕಾಲಸೂಚಕ ಪ್ರತ್ಯಯಸೇರಿದಾಗ.
ಎ) ವರ್ತಮಾನಕಾಲ ರೂಪವಾಗುತ್ತದೆ.
ಬಿ) ಭವಿಷ್ಯತ್ ಕಾಲರೂಪವಾಗುತ್ತದೆ.
ಸಿ) ಭೂತ ಕಾಲರೂಪವಾಗುತ್ತದೆ.
ಡಿ) ವಿದ್ಯರ್ಥ ಕ್ರಿಯಾರೂಪವಾಗುತ್ತದೆ.

203. 'ವಿಜ್ಞಾನ'ಪದದ ತದ್ಭವ ರೂಪ ಇದು
ಎ) ಅಜ್ಞಾನ ಬಿ) ಬಿನ್ನಾಣ
ಸಿ)ಬಿನ್ನಹ ಡಿ)ಸುಜ್ಞಾನ

204. 'ಒಳಗಣ್ಣು' ಇದು ---ಸಮಾಸಕ್ಕೆ ಉದಾ ಆಗಿದೆ
ಎ) ತತ್ಪುರುಷ ಬಿ) ಅಂಶಿ
ಸಿ) ಕರ್ಮಧಾರಯ ಡಿ)ದ್ವಿಗು

205. 'ಗತ್ಯಂತರ' ಇದು ---- ಸಂಧಿ ಪದ
ಎ) ಗುಣಸಂಧಿ ಬಿ) ಸವರ್ಣದೀರ್ಘ ಸಂಧಿ
ಸಿ) ಯಣ್ ಸಂಧಿ ಡಿ)ಆಗಮಸಂಧಿ

206. 'ತಿನ್ನುವವನು' ವರ್ತಮಾನ ಕಾಲದಲ್ಲಿ ಬರೆದಾಗ
ಎ) ತಿನ್ನುತ್ತಿ ಬಿ) ತಿನ್ನುತ್ತೇನೆ
ಸಿ) ತಿನ್ನುತ್ತಾನೆ ಡಿ) ತಿನ್ನುವನು

ಬಹು ಅಂಶ ಆಯ್ಕೆ ಪ್ರಶ್ನೆಗಳಿಗೆ ಉತ್ತರಗಳು:

1. ಬಿ) 2. ಸಿ) 3. ಬಿ) 4. ಫಾರ್ಸಿ 5. ಸಿ) 6. ಬಿ) 7. ಎ) 8. ಸಿ) 9. ಸಿ) 10. ಬಿ) 11. ಬಿ) 12. ಎ) 13. ಸಿ) 14. ಡಿ) 15. ಡಿ) 16.ಎ) 17.ಬಿ) 18. ಎ) 19. ಎ) 20. ಡಿ) 21. ಸಿ) 22. ಬಿ) 23. ಬಿ) 24. ಡಿ) 25.ಬಿ) 26. ಎ) 27. ಬಿ) 28. ಡಿ) 29. ಎ) 30. ಸಿ) 31.ಬಿ) 32. ಸಿ) 33. ಎ) 34. ಬಿ) 35. ಡಿ) 36.ಎ) 37. ಡಿ) 38. ಡಿ) 39. ಸಿ) 40. ಎ) ಡಿ) 41. ಡಿ) 42. ಎ) 43. ಡಿ) 44.ಬಿ) 45. ಎ) 46. ಎ) 47. ಎ) 48. ಸಿ) 49. ಡಿ) 50. ಸಿ) 51. ಸಿ) 52. ಸಿ) 53. ಬಿ) 54. ಬಿ) 55. ಡಿ) 56. ಬಿ) 57. ಬಿ) 58. ಎ) 59. ಬಿ) 60. ಬಿ) 61. ಡಿ) 62. ಸಿ) 63. ಎ) 64. ಎ) 65. ಎ) 66. ಬಿ) 67. ಬಿ) 68. ಸಿ) 69. ಬಿ) 70. ಬಿ) 71. ಎ) 72. ಸಿ) 73. ಎ) 74. ಸಿ) 75. ಸಿ) 76. ಎ) 77. ಸಿ) 78. ಬಿ) 79. ಸಿ) 80.ಎ) 81. ಡಿ) 82. ಸಿ) 83.ಸಿ) 84. ಸಿ) 85. ಸಿ) 86.ಸಿ) 87. ಬಿ) 88. ಎ) 89. ಸಿ) 90. ಎ) 91. ಎ) 92.ಡಿ) 93. ಎ) 94. ಸಿ) 95. ಎ) 96. ಬಿ) 97. ಎ) 98. ಡಿ) 99. ಸಿ) 100. ಡಿ) 101. ಬಿ) 102. ಡಿ) 103.ಡಿ) 104. ಎ) 105. ಸಿ) 106. ಬಿ) 107. ಡಿ) 108. ಸಿ) 109. ಬಿ) 110. ಬಿ) 111. ಎ) 112. ಡಿ) 113. ಬಿ) 114. ಬಿ) 115. ಬಿ) 116. ಡಿ) 117. ಬಿ) 118. ಸಿ) 119.ಸಿ) 120. ಎ) 121. ಬಿ) 122. ಸಿ) 123. ಬಿ) 124. ಡಿ) 125. ಬಿ) 126. ಡಿ) 127. ಬಿ) 128. ಸಿ) 129. ಡಿ) 130. ಸಿ) 131. ಡಿ) 132. ಡಿ) 133. ಎ) 134. ಸಿ) 135. 136. ಎ) 137. ಬಿ) 138. ಎ) 139. ಡಿ) 140. ಸಿ) 141. ಸಿ) 142. ಎ) 143. ಡಿ) 144. ಬಿ) 145. ಬಿ) 146. ಸಿ) 147. ಎ) 148. ಡಿ) 149. ಎ) 150. ಬಿ) 151. ಡಿ) 152. ಸಿ) 153. ಸಿ) 154. ಬಿ) 155. ಎ) 156. ಡಿ) 157. ಎ) 158. ಎ) 159.ಎ) 160. ಸಿ) 161. ಸಿ) 162. ಎ) 163. ಸಿ) 164. ಬಿ) 165. ಬಿ) 166. ಸಿ) 167. ಸಿ) 168. ಸಿ) 169. ಡಿ) 170. ಬಿ) 171. ಸಿ) 172. ಸಿ) 173. ಸಿ) 174. ಸಿ) 175. ಡಿ) 176. ಸಿ) 177. ಡಿ) 178. ಸಿ) 179. ಡಿ) 180. ಬಿ) 181. ಸಿ) 182.ಬಿ) 183. ಡಿ) 184. ಸಿ) 185. ಎ) 186. ಡಿ) 187. ಬಿ) 188. ಬಿ) 189. ಬಿ) 190. ಎ) 191. ಸಿ) 192. ಸಿ) 193. ಸಿ) 194. ಬಿ) 195. ಸಿ) 196. ಎ) 197. ಸಿ) 198. ಸಿ) 199. ಡಿ) 200. ಸಿ) 201. ಎ) 202. ಬಿ) 203. ಬಿ) 204. ಬಿ) 205. ಸಿ) 206. ಸಿ)

**ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಸಂಬಂಧಹೊಂದುವ ಪದಗಳನ್ನು ಬರೆಯಿರಿ.**

1) ಹೊಗೆದೋರು : ಕ್ರಿಯಾಸಮಾಸ :: ಹೆದ್ದಾರಿ : ______
2) ಸ್ವಾಮಿದ್ರೋಹ : ತತ್ಪುರುಷ ಸಮಾಸ :: ಮುಂಗೈ : ______
3) ಹಣೆಗಣ್ಣ : ಬಹುವ್ರೀಹಿ :: ಬೆಟ್ಟದಾವರೆ : ______
4) ಬಿಲ್ಲನ್ನು+ಕೊಂಡು : ಬಿಲ್ಗೊಂಡು :: ತಲೆಯ+ಮುಂದೆ: ______
5) ನೆಯ್ದುವಸ್ತ : ಗಮಕಸಮಾಸ :: ಸೂರ್ಯಚಂದ್ರರು :______
6) ನಾಣಿಲಿ : ಬಹುವ್ರೀಹಿ ಸಮಾಸ : ಪೂದೋಟ : ______
7) ಕಳ್ಗುಡಿದ : ಕ್ರಿಯಾ ಸಮಾಸ : ಸಾಕ್ಷಿಮಾಡಿ : ______
8) ದೈವಭಕ್ತಿ : ತತ್ಪುರುಷ ಸಮಾಸ : : ಅಬ್ಜೋದರ :______
9) ನಂಬಿಕೆ: ಕೃದಂತ ಭಾವನಾಮ : ನಿನಗಾಗಿ: ______
10) ಹೌದ್ಹೌದು : ದ್ವಿರುಕ್ತಿ : ಹಾಲ್ಜೇನು : ______
11) ಪ್ರಸಾದ : ಹಸಾದ : : ವ್ಯಾಪಾರಿ : ______
12) ಅನುಮತಿಸು : ಸಮ್ಮತಿಸು : : ಮಸಲತ್ತು : ______
13) ಹುಳಹುಪ್ಪಡಿ : ಜೋಡುನುಡಿ : : ಒಬ್ಬೊಬ್ಬ : ______
14) ಗ್ಲಾನಿ : ತಲ್ಲಣ : : ಕಿಂಕರ : ______
15) ಮೇಜು : ಪೋರ್ಚುಗೀಸ್ : : ತಾಲೂಕು : ______
16) ಬಂಜೆ : ವಂಧ್ಯಾ : : ಸಂಜೆ : ______
17) ಅಬ್ಧಿಪ : ವರುಣ : : ಉರ್ವಿ : ______
18) ಮಕ್ಕಳುಮರಿ : ಜೋಡುನುಡಿ : ತಿರುತಿರುಗಿ : ______
19) ನೀರದ : ಮೋಡ : : ಪನ್ನಗ : ______
20) ವಿದ್ಯಾಧರ : ಬಿಜ್ಜೋದರ : ಕುಠಾರ : ______
21) ಕಾರ್ಖಾನೆ : ಹಿಂದೂಸ್ಥಾನಿ : : ಚೊಂಬು : ______
22) ಕೆನೆಮೊಸರು : ಜೋಡುನುಡಿ : : ಬಟ್ಟಬಯಲು : ______
23) ಹೋಗಲಿಕ್ಕೆ : ಕೃದಂತಾವ್ಯಯ : : ಚಂದ್ರನಂತೆ : ______
24) ಕಾರ್ಯ : ಕಜ್ಜ : : ಅಮೃತ : ______
25) ದೃಷ್ಟಿ : ದಿಟ್ಟಿ : ಪ್ರಸಾದ : ______
26) ಇನತನೂಜ : ಕರ್ಣ : : ರಾಜೀವಸಖ : ______
27) ಸಂಭೂತ : ಹುಟ್ಟಿದ : : ಸಂತತಿ : ______
28) ಶರಣನು : ಪ್ರಥಮಾ ವಿಭಕ್ತಿ : : ಶರಣರ : ______
29) ಓದುತ್ತಾನೆ : ವರ್ತಮಾನಕಾಲ : : ಓದಿದನು : ______
30) ಬರೆಯಲಿ : ವಿಧ್ಯರ್ಥಕ : : ಬರೆಯನು : ______
31) ಸದ್ವಂಶ : ಜಶ್ತ್ವಸಂಧಿ : : ತಲೆಗೂದಲು : ______
32) ಅಬಕಾರಿ : ಪರ್ಷಿಯನ್ : : ಮೇಜು : ______
33) ಮಾಟ : ಕೃದಂತ ಭಾವನಾಮ : : ಮಾಡಲಿಕ್ಕೆ : ______
34) ಮಧುಕರ : ದುಂಬಿ : : ಪೆರೆ : ______
35) ಅರ್ತಿ : ಪ್ರೀತಿ : ತೃಷೆ : ______
36) ತಮಾಲ : ಕತ್ತಲೆ : ಬವರ : ______
37) ಮೂಡಣ : ದಿಗ್ವಾಚಕ : : ನಾಲ್ವರು : ______
38) ರಾಹಿಲ : ಅಂಕಿತನಾಮ : : ಶಿಕ್ಷಕ : ______
39) ತಾನು : ಆತ್ಮಾರ್ಥಕ ಸರ್ವನಾಮ : : ಯಾರು : ______
40) ಮೇಲಧಿಕಾರಿ : ಲೋಪಸಂಧಿ : : ಕೆನೆವಾಲು : ______
41) ಮಾತುಗಾರ : ತದ್ಧಿತಾಂತನಾಮ : : ಮಾಡಲಿಕ್ಕೆ : ______
42) ನಾಲ್ವಡಿ : ದ್ವಿಗು ಸಮಾಸ : : ನಟ್ಟಡವಿ : ______
43) ಹಾಗೂ : ಸಂಬಂಧಾರ್ಥಕಾವ್ಯಯ: : ಅವರೇ : ______
44) ಸವಿಗನ್ನಡ : ಕರ್ಮಧಾರಯ : : ಹೊಗೆದೋರು : ______
45) ಮಾಡಲು : ಕೃದಂತಾವ್ಯಯ : : ಮಾಟ : ______
46) ಊ : ಸಂಬಂಧಾರ್ಥಕಾವ್ಯಯ : : ಅಲ್ಲ : __
47) ಬ್ರಹ್ಮ : ಬೊಮ್ಮ : : ಅಂಗಳ : ______
48) ಇನಾಮು : ಅರಬ್ಬೀ : : ಇಸ್ತ್ರಿ : ______
49) ಗುರುವೊಂದಾದಿಯೊಳ್ : ಉತ್ಪಲಮಾಲಾ ವೃತ್ತ : : ಲಘುನಾಲ್ಕಾಗಿರಲಂತು : ______
50) ಚಂದ್ರನಂತೆ : ತದ್ಧಿತಾಂತಾವ್ಯಯ : : ಮಾಡುವಂತೆ :______
51) ಧಗಧಗ : ಅನುಕರಣಾವ್ಯಯ: : ನೆರೆಹೊರೆ : __

**ಉತ್ತರಗಳು :**

1. ಕರ್ಮಧಾರಯ ಸಮಾಸ 2. ಅಂಶಿಸಮಾಸ 3. ತತ್ಪುರುಷಸಮಾಸ 4. ಮುಂದಲೆ 5. ದ್ವಂದ್ವಸಮಾಸ 6. ತತ್ಪುರುಷಸಮಾಸ 7. ಕ್ರಿಯಾಸಮಾಸ 8. ಬಹುವ್ರೀಹಿ ಸಮಾಸ 9. ತದ್ಧಿತಾಂತಾವ್ಯಯ 10. ಜೋಡುನುಡಿ 11.ಬೇಹಾರಿ 12. ಕುತಂತ್ರ 13. ದ್ವಿರುಕ್ತಿ 14. ಸೇವಕ 15. ಉರ್ದು 16. ಸಂಧ್ಯಾ 17. ಭೂಮಿ 18. ದ್ವಿರುಕ್ತಿ 19. ಹಾವು/ಸರ್ಪ 20 ಕೊಡಲಿ. 21. ಪೋರ್ಚುಗೀಸ್ 22. ದ್ವಿರುಕ್ತಿ 23. ತದ್ಧಿತಾಂತಾವ್ಯಯ 24. ಅಮರ್ದು 25. ಹಸಾದ 26. ಸೂರ್ಯ 27. ವಂಶ 28. ಷಷ್ಠಿ ವಿಭಕ್ತಿ 29. ಭೂತಕಾಲ 30. ನಿಷೇಧಾರ್ಥಕ 31. ಆದೇಶಸಂಧಿ 32. ಪೋರ್ಚುಗೀಸ್ 33. ತದ್ಧಿತಾಂತಾವ್ಯಯ 34. ಚಂದ್ರ 35. ಬಾಯಾರಿಕೆ 36. ಯುದ್ಧ 37. ಸಂಖ್ಯಾವಾಚಕ 38. ಅನ್ವರ್ಥ 39. ಪ್ರಶ್ನಾರ್ಥಕ ಸರ್ವನಾಮ 40. ಆದೇಶಸಂಧಿ 41. ಕೃದಂತಾವ್ಯಯ 42. ಅಂಶಿಸಮಾಸ 43. ಅವಧಾರಣಾರ್ಥಕಾವ್ಯಯ 44. ಕ್ರಿಯಾಸಮಾಸ 45. ಕೃದಂತಭಾವನಾಮ. 46. ಕ್ರಿಯಾರ್ಥಕಾವ್ಯಯ 47. ಅಂಕಣ 48. ಪೋರ್ಚುಗೀಸ್ 49. ಚಂಪಕಮಾಲಾ 50. ಕೃದಂತಾವ್ಯಯ 51. ಜೋಡುನುಡಿ

**ಈ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ:**

1. ರಾಹಿಲನು ತುರ್ತುಪರಿಸ್ಥಿತಿ ನಿರ್ವಹಣೆಗೆ ಭದ್ರವಾಗಿ ಹಿಡಿದುಕೊಂಡಿದ್ದೇನು?

ಉ: ರಾಹಿಲನು ತುರ್ತು ಪರಿಸ್ಥಿತಿಗೆ ಬೇಕಾದ ಶಸ್ತ್ರ ಚಿಕಿತ್ಸಾ ಸಾಮಾನುಗಳ ಪೆಟ್ಟಿಗೆಯನ್ನು ಭದ್ರವಾಗಿ ಹಿಡಿದುಕೊಂಡನು.

2. ರಾಹಿಲನು ಮುದುಕಿಯ ಎದುರಿಗೆ ನುಡಿದ ಗಂಭೀರವಾದ ಮಾತು ಯಾವುದು?

ಉ: ರಾಹಿಲನು, "ನಾನು ಯುದ್ಧ ಮಾಡುವ ಮೂರ್ಖರ ಕಡೆಯವನಲ್ಲ. ಸಂಕಷ್ಟಕ್ಕೀಡಾದ ಮನುಷ್ಯರ ಕಡೆಯವನು" ಎಂದು ಗಂಭೀರವಾಗಿ ನುಡಿದನು.

3. "ನಾನಾಕೆಯನ್ನು ಪರೀಕ್ಷಿಸುವೆ, ನೀವು ಬಿಸಿನೀರನ್ನು ಸಿದ್ಧಪಡಿಸಿ" ಎಂದು ಯಾರು ಯಾರಿಗೆ ಹೇಳಿದರು?

ಉತ್ತರ: "ನಾನಾಕೆಯನ್ನು ಪರೀಕ್ಷಿಸುವೆ, ನೀವು ಬಿಸಿನೀರನ್ನು ಸಿದ್ಧಪಡಿಸಿ" ಎಂದು ಡಾಕ್ಟರ್ ರಾಹಿಲನು ಮುದುಕಿಗೆ ಹೇಳಿದನು.

4. ಶ್ರೀರಾಮನಿಗೆ ಸಮರ್ಪಿಸಲು ಶಬರಿ ಏನನ್ನು ಸಂಗ್ರಹಿಸಿದ್ದಳು

ಉ: ಶ್ರೀರಾಮನಿಗೆ ಸಮರ್ಪಿಸಲು ಶಬರಿಯು ಪರಿಮಳದ ಹೂವು ಮಧುಪರ್ಕ ಮತ್ತು ರುಚಿಕರ ಹಣ್ಣುಹಂಪಲುಗಳನ್ನು ಸಂಗ್ರಹಿಸಿದ್ದಳು.

5. ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಯಾರು?

ಉ: ಮತಂಗಾಶ್ರಮದಲ್ಲಿ ಶಬರಿಯು ವಾಸವಿದ್ದಳು.

6. ರಾಮಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ಯಾರು?

ಉ: ರಾಮಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ದನು ಮಹರ್ಷಿಗಳು ಸೂಚಿಸಿದರು.

7. ವೆಸ್ಟ್ ಮಿನ್‌ಸ್ಟರ್ ಅಬೆ' ಯಾರ ಸ್ಮಾರಕವಾಗಿದೆ?

ಉ: ವೆಸ್ಟ್ ಮಿನ್‌ಸ್ಟರಬೆ ಸತ್ತುಹೋಗಿರುವ ಸಾರ್ವಭೌಮರ, ಕವಿಪುಂಗವರ ಸ್ಮಾರಕವಾಗಿದೆ.

8. ನೆಲ್ಸನ್‌ರವರ ಮೂರ್ತಿಯಿರುವ ಸ್ಥಳದ ಹೆಸರೇನು?

ಉ: ಟ್ರಾಫಲ್ಗಾರ್ ಸ್ಕ್ವೇರ್ ನೆಲ್ಸನ್‌ರವರ ಮೂರ್ತಿ ಇರುವ ಸ್ಥಳ.

9. ಆಂಗ್ರ ಸಾಮ್ರಾಜ್ಯದ ವೈಭವ ಕಂಡು ಬರುವ ಓಣಿ ಯಾವುದು?

ಉ: 'ಚೇರಿಂಗ್ ಕ್ರಾಸ್' ಆಂಗ್ರ ಸಾಮ್ರಾಜ್ಯದ ವೈಭವ ಕಂಡು ಬರುವ ಓಣಿ.

10. 'ಪ್ರವಾಸವು ಶಿಕ್ಷಣದ ಒಂದು ಭಾಗವಾಗಿದೆ' ಎಂದು ಹೇಳಿದವರು ಯಾರು?

ಉ: 'ಪ್ರವಾಸವು ಶಿಕ್ಷಣದ ಒಂದು ಭಾಗವಾಗಿದೆ' ಎಂದು ಹೇಳಿದವರು ಬೇಕನ್‌ರವರು.

11. ಲಂಡನ್ ನಗರದಲ್ಲಿರುವ ಸ್ಟೇಷನರಿ ಅಂಗಡಿ ಇರುವ ಹೆಸರೇನು?

ಉ: ಲಂಡನ್ ನಗರದಲ್ಲಿರುವ ಸ್ಟೇಷನರಿ ಅಂಗಡಿ ಇರುವ ಹೆಸರು ವೂಲವರ್ಥ.

12. ನಾಲ್ವಡಿ ಕೃಷ್ಣರಾಜ ಒಡೆಯರು ಯಾವಾಗ ಪಟ್ಟಾಭಿಷಿಕ್ತರಾದರು?

ಉ: 1895ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರು ಪಟ್ಟಾಭಿಷಿಕ್ತರಾದರು.

13. ಏಷ್ಯಾ ಖಂಡದಲ್ಲಿಯೇ ಮೊದಲು ಪ್ರಾರಂಭಿಸಿದ ಜಲವಿದ್ಯುತ್ ಯೋಜನೆ ಯಾವುದು?

ಉ: ಶಿವನಸಮುದ್ರದ ಜಲವಿದ್ಯುತ್ ಯೋಜನೆಯು ಮೊದಲು ಪ್ರಾರಂಭವಾದ ಜಲವಿದ್ಯುತ್ ಯೋಜನೆ.

14. ವಿಶ್ವೇಶ್ವರಯ್ಯನವರ ಹುಟ್ಟುಹಬ್ಬದ ನೆನಪಿಗಾಗಿ ಯಾವ ದಿನಾಚರಣೆಯನ್ನು ಆಚರಿಸಲಾಗುತ್ತಿದೆ?

ಉ: ವಿಶ್ವೇಶ್ವರಯ್ಯನವರ ಹುಟ್ಟುಹಬ್ಬದ ನೆನಪಿಗಾಗಿ 'ಎಂಜಿನಿಯರ್ಸ್ ದಿನಾಚರಣೆಯನ್ನು ಆಚರಿಸಲಾಗುತ್ತಿದೆ.

15. 'ಸಾಮಾಜಿಕ ಕಾನೂನುಗಳ ಹರಿಕಾರ' ಎಂದು ಹೆಸರಾದವರು ಯಾರು?

ಉ: 'ನಾಲ್ವಡಿ ಕೃಷ್ಣರಾಜ ಒಡೆಯರ್ ಸಾಮಾಜಿಕ ಕಾನೂನುಗಳ ಹರಿಕಾರ ಎಂದು ಹೆಸರಾಗಿದ್ದರು.

16.ಇಂದಲ್ಲ ನಾಳೆ ಫಲ ಕೊಡುವ ಅಂಶಗಳಾವುವು?

ಉ: ಎದೆಗೆ ಬಿದ್ದ ಅಕ್ಷರ ಭೂಮಿಗೆ ಬಿದ್ದ ಬೀಜ ಇಂದಲ್ಲ ನಾಳೆ ಫಲ ಕೊಡುವ ಅಂಶಗಳಾಗಿವೆ.

17. 'ಶಿವಾನುಭವ ಶಬ್ದಕೋಶ' ಪುಸ್ತಕವನ್ನು ಬರೆದವರು ಯಾರು?

ಉ: 'ಶಿವಾನುಭವ ಶಬ್ದಕೋಶ' ಪುಸ್ತಕವನ್ನು ಬರೆದವರು ಫ.ಗು.ಹಳಕಟ್ಟಿಯವರು.

18. ಮನೆಮಂಚಮ್ಮನ ಕತೆ ಹೇಳಿದ ಕವಿ ಯಾರು?

ಉ: ಕವಿ ಸಿದ್ದಲಿಂಗಯ್ಯನವರು ಮನೆಮಂಚಮ್ಮನ ಕತೆ ಹೇಳಿದರು.

19. ವಚನಕಾರರಿಗೆ ಯಾವುದು ದೇವರಾಗಿತ್ತು?

ಉ: ವಚನಕಾರರಿಗೆ ಅವರವರ ಪ್ರಜ್ಞೆಯೇ ದೇವರಾಗಿತ್ತು.

20. ಹಸಿದು ಮಲಗಿದ್ದ ಹುಲಿ ಏನೆಂದು ಯೋಚಿಸಿತು?

ಉ: ವಿಧಿಯು ಆಹಾರಕ್ಕಾಗಿ ಏನನ್ನು ಒದಗಿಸುವುದೋ ಎಂದು ಹಸಿದು ಮಲಗಿದ್ದ ಹುಲಿಯು ಯೋಚಿಸಿತು.

21. ಹುಲಿಗೆ ಪರಮಾನಂದವಾಗಲು ಕಾರಣವೇನು?

ಉ: ಶಾನುಭೋಗರ ದುಂಡುದುಂಡಾದ ಶರೀರವನ್ನು ನೋಡಿ ಹುಲಿಗೆ ಪರಮಾನಂದವಾಯಿತು.

22. ಭಗವದ್ಗೀತೆಯನ್ನು ರಚಿಸಿದವರು ಯಾರು?

ಉ: ಮಹರ್ಷಿ ವೇದವ್ಯಾಸರು ಭಗವದ್ಗೀತೆಯನ್ನು ರಚಿಸಿದರು.

23. ಶಾನುಭೋಗರು ಚಿಕ್ಕನಾಯಕನಹಳ್ಳಿಗೆ ಏಕೆ ಹೋಗಿದ್ದರು?

ಉ: ಇರಸಾಲಿಗಾಗಿ ಶಾನುಭೋಗರು ಚಿಕ್ಕನಾಯಕನಹಳ್ಳಿಗೆ ಹೋಗಿದ್ದರು.

24. ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಯಾವ ಆರೋಪವನ್ನು ಹೊರಿಸಿದನು?

ಉ: ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಹೊನ್ನಿನ ಕಳ್ಳತನದ ಆರೋಪವನ್ನು ಹೊರಿಸಿದನು.

25. ಧರ್ಮಾಧಿಕರಣರು ಏಕೆ ವಿಸ್ಮಯ ಹೊಂದಿದರು?

ಉ: 'ಹೊನ್ನನ್ನು ಇಟ್ಟದ್ದಕ್ಕೆ ವಟವೃಕ್ಷವೇ ಸಾಕ್ಷಿ' ಎಂದು ದುಷ್ಟಬುದ್ಧಿಯು ಹೇಳಿದುದನ್ನು ಕೇಳಿ ಧರ್ಮಾಧಿಕರಣರು ವಿಸ್ಮಯ ಹೊಂದಿದರು.

26. ದುಷ್ಟಬುದ್ಧಿಯ ತಂದೆಯ ಹೆಸರೇನು?

ಉ: ದುಷ್ಟಬುದ್ಧಿಯ ತಂದೆಯ ಹೆಸರು ಪ್ರೇಮಮತಿ.

27. ಧರ್ಮಬುದ್ಧಿಯು ತನ್ನ ಬೆಳಗಿನ ಹೊತ್ತನ್ನು ಹೇಗೆ ಕಳೆದನು?

ಉ: ಧರ್ಮಬುದ್ಧಿಯು ತನ್ನ ಬೆಳಗಿನ ಹೊತ್ತನ್ನು ದೇವರು, ಗುರುಗಳು, ದ್ವಿಜರನ್ನು ಪೂಜಿಸುತ್ತ ಬೆಳಗಿನ ಹೊತ್ತನ್ನು ಕಳೆದನು.

28. ಸುಕುಮಾರಸ್ವಾಮಿಯ ತಂದೆ ತಾಯಿಗಳ ಹೆಸರೇನು?

ಉ: ಸುಕುಮಾರಸ್ವಾಮಿಯ ತಂದೆ ಸೂರದತ್ತ ತಾಯಿ ಯಶೋಭದ್ರೆ.

29. ನೈಮಿತ್ತಿಕನು ಸುಕುಮಾರಸ್ವಾಮಿಯ ಬಗ್ಗೆ ಏನು ಹೇಳಿದನು?
ಉ: ಸುಕುಮಾರಸ್ವಾಮಿಯು ಎಂದು ಋಷಿಗಳನ್ನು ನೋಡುವನೋ ಅಂದು ತಪಸ್ಸಿಗೆ ಹೋಗುವನು ಎಂದು ನೈಮಿತ್ತಿಕನು ಹೇಳಿದನು.
30. ಅರಸ ವೃಷಭಾಂಕನ ಉಂಗುರ ಯಾವಾಗ ಕೆಳಕ್ಕೆ ಬಿದ್ದಿತು?
ಉ: ಅರಸ ವೃಷಭಾಂಕನ ಉಂಗುರ ಸ್ನಾನ ಮಾಡುವಾಗ ಕೆಳಕ್ಕೆ ಬಿದ್ದಿತು.
31. ನದೀಜಲಗಳು ಏನಾಗಿವೆ?
ಉ: ನದೀಜಲಗಳು ಇಂದು ಕಲುಷಿತವಾಗಿವೆ.
32. ಕಾಡುಮೇಡುಗಳ ಸ್ಥಿತಿ ಹೇಗಿದೆ?
ಉ: ಕಾಸುಮೇಡುಗಳು ಬರಡಾಗಿವೆ.
33. ಮರಗಳೆಲ್ಲವೂ ಏನಾಗಬೇಕೆಂದು ಕವಿ ಅಂದುಕೊಂಡಿದ್ದಾರೆ?
ಉ: ಮತಗಳೆಲ್ಲವೂ ಪಥಗಳಾಗಬೇಕೆಂದು ಎಂದು ಕವಿ ಹೇಳಿದ್ದಾರೆ.
34. ಹಕ್ಕಿಯ ಗರಿಯಲ್ಲಿ ಯಾವ ಬಣ್ಣಗಳಿವೆ?
ಉ: ಹಕ್ಕಿಯ ಗರಿಯಲ್ಲಿ ಕರಿ, ಬಿಳಿ, ಕೆಂಪು, ಹೊನ್ನಿನ ಹೊಳೆಯುವ ಬಣ್ಣಗಳಿವೆ.
35. ಹಕ್ಕಿಯು ಯಾರ ನೆತ್ತಿಯನ್ನು ಕುಕ್ಕಿದೆ?
ಉ: ಹಕ್ಕಿಯು ಸಾರ್ವಭೌಮರ ನೆತ್ತಿಯನ್ನು ಕುಕ್ಕಿದೆ.
36. ಹಕ್ಕಿಯು ಯಾವುದರ ಸಂಕೇತವಾಗಿದೆ?
ಉ: ಹಕ್ಕಿಯು ಕಾಲದ ಸಂಕೇತವಾಗಿದೆ.
37. ಹಕ್ಕಿಯ ಕಣ್ಣುಗಳು ಯಾವುವು?
ಉ: ಸೂರ್ಯಚಂದ್ರರು ಹಕ್ಕಿಯ ಕಣ್ಣುಗಳು.
38. ಕುಂಪಣಿ ಸರಕಾರ ಹೊರಡಿಸಿದ ಆದೇಶ ಏನು?
ಉ: 'ನಿಶ್ಶಸ್ತ್ರೀಕರಣ' ಕುಂಪಣಿ ಸರಕಾರ ಹೊರಡಿಸಿದ ಆದೇಶ.
39. ಹಲಗಲಿಯ ನಾಲ್ವರು ಪ್ರಮುಖರು ಯಾರು?
ಉ: ರಾಮ, ಬಾಲ, ಭೀಮ ಮತ್ತು ಹನುಮರು ಪ್ರಮುಖರು
40. ವಿಲಾತಿಯ ಕುಂಪಣಿ ಸರಕಾರ ಹೊರಡಿಸಿದ ಹುಕುಮ ಏನು?
ಉ: 'ಎಲ್ಲ ಜನರಿಗೆ ಜೋರ ಮಾಡಿ ಕಸಿದುಕೊಳ್ಳಿರಿ ಹತಾರ' ಎಂದು ಹುಕುಮನ್ನು ಕುಂಪಣಿ ಹೊರಡಿಸಿತು.
41. ಅಶ್ವಿನಿ ದೇವತೆಗಳ ವರಬಲದಿಂದ ಜನಿಸಿದವರು ಯಾರು?
ಉ: ನಕುಲ ಸಹದೇವರು ಅಶ್ವಿನಿ ದೇವತೆಗಳ ವರದಿಂದ ಜನಿಸಿದರು.
42. ಇನತನೂಜ ಯಾರು?
ಉ: ಇನತನೂಜ ಎಂದರೆ ಕರ್ಣ (ಸೂರ್ಯನ ಮಗ)
43. ಕೃಷ್ಣನು ಕರ್ಣನಲ್ಲಿ ಏನನ್ನು ಬಿತ್ತಿದನು?
ಉ: ಕೃಷ್ಣನು ಕರ್ಣನ ಜನ್ಮರಹಸ್ಯ ಹೇಳಿ ಭಯವನ್ನು ಬಿತ್ತಿದನು.
44. ಕವಿಯು ನೋಡಿದ ಅಡಕೆಯ ತೋಟ ಎಲ್ಲಿದೆ?
ಉ: ಕವಿಯು ನೋಡಿದ ಅಡಕೆಯ ತೋಟ ವನದ ಅಂಚಿನಲ್ಲಿದೆ.
45. ಕವಿಗೆ ಹುಲ್ಲಿನ ಹಾಸು ಯಾವ ರೀತಿ ಕಂಡಿದೆ?
ಉ: ಕವಿಗೆ ಹುಲ್ಲಿನ ಹಾಸು ಮಕಮಲ್ಲಿನ ಹೊಸಪಚ್ಚೆಯ ಜಮಖಾನದ ರೀತಿ ಕಂಡಿದೆ.
46. ಕುವೆಂಪು ಅವರ ಆತ್ಮವು ಯಾವುದರಲ್ಲಿ ಸ್ನಾನ ಮಾಡಿದೆ?
ಉ: ಕುವೆಂಪು ಅವರ ಆತ್ಮವು ಹಸುರಿನ ರಸಪಾನ ಸ್ನಾನಮಾಡಿದೆ.
47. ಅಂತಕಾತ್ಮಜ ಎಂದರೆ ಯಾರು?
ಉ: ಅಂತಕಾತ್ಮಜ ಎಂದರೆ ಧರ್ಮರಾಯ / ಯುಧಿಷ್ಠಿರ
48. ಛಲವನ್ನೇ ಮೆರೆಯುವುದಾಗಿ ಯಾರು ನಿರ್ಧರಿಸಿದರು?
ಉ: ಛಲವನ್ನೇ ಮೆರೆಯುವುದಾಗಿ ದುರ್ಯೋಧನ ನಿರ್ಧರಿಸಿದನು.
49. ಯಾರಿಬ್ಬರನ್ನು ಕೊಂದ ಬಳಿಕ ಸಂಧಿ ಮಾಡಿಕೊಳ್ಳುವುದಾಗಿ ದುರ್ಯೋಧನ ಹೇಳುತ್ತಾನೆ?
ಉ: ಅರ್ಜುನ ಮತ್ತು ಭೀಮರನ್ನು ಕೊಂದ ಬಳಿಕ ಸಂಧಿ ಮಾಡಿಕೊಳ್ಳುವುದಾಗಿ ದುರ್ಯೋಧನ ಹೇಳುತ್ತಾನೆ.
50. ಯಜ್ಞಾಶ್ವವನ್ನು ಕಟ್ಟಿದವರು ಯಾರು?
ಉ: ಯಜ್ಞಾಶ್ವವನ್ನು ಕಟ್ಟಿದವನು ಲವ.
51. ಮುನಿಸುತರು ಹೆದರಲು ಕಾರಣವೇನು?
ಉ: ಯಜ್ಞಾಶ್ವವನ್ನು ಲವನು ಕಟ್ಟಿದ್ದರಿಂದ ಮುನಿಸುತರು ಹೆದರಿದರು.
52. ಲವನು ಕುದುರೆಯನ್ನು ಯಾವುದರಿಂದ ಬಾಳೆಗಿಡಕ್ಕೆ ಕಟ್ಟಿದನು?
ಉ: ಲವನು ಕುದುರೆಯನ್ನು ತನ್ನ ಉತ್ತರೀಯದಿಂದ ಬಾಳೆಗಿಡಕ್ಕೆ ಕಟ್ಟಿದನು.
53. ವಾಲ್ಮೀಕಿ ಮಹರ್ಷಿಗಳು ಎಲ್ಲಿಗೆ ಹೋಗಿದ್ದರು?
ಉ: ವಾಲ್ಮೀಕಿ ಮಹರ್ಷಿಗಳು ವರುಣನ ಲೋಕಕ್ಕೆ ಹೋಗಿದ್ದರು.
54. ದ್ರೋಣನು ಪರಶುರಾಮನಲ್ಲಿಗೆ ಏಕೆ ಬಂದರು?
ಉ: ದ್ರೋಣನು ಪರಶುರಾಮನಲ್ಲಿಗೆ ದ್ರವ್ಯಾರ್ಥಿಯಾಗಿ ಬಂದನು.
55. ಪರಶುರಾಮನು ದ್ರೋಣನಿಗೆ ಕೊಟ್ಟ ಪ್ರಧಾನ ಅಸ್ತ್ರಗಳು ಯಾವುವು?
ಉ: ವರುಣ, ವಾಯುವ್ಯ, ಆಗ್ನೇಯ, ಇಂದ್ರಾದಿ ಪ್ರಧಾನ ಅಸ್ತ್ರಗಳನ್ನು ಕೊಟ್ಟನು.
56. ಪರಶುರಾಮನು ಯಾರ್ಯಾರಿಗೆ ಏನೇನು ದಾನ ಮಾಡಿದನು?
ಉ: ಪರಶುರಾಮನು ಒಡವೆಯನ್ನು ಬೇಡಿದವರಿಗೆ ಹಾಗೂ ಭೂಮಿಯನ್ನು ಗುರುಗಳಿಗೆ ನೀಡಿದನು.
57. ಪುಟ್ಟ ಪೋರಿ ಏನು ಮಾಡುತ್ತಿದ್ದಾಳೆ?
ಉ: ಪುಟ್ಟ ಪೋರಿ ಮುಸುರೆ ತಿಕ್ಕುತ್ತಿದ್ದಾಳೆ.
58. ಯಾರಿಗೆ ವಸಂತ ಮುಖ ತೋರಲಿಲ್ಲ?
ಉ: ಕಮ್ಮಾರ, ಕುಂಬಾರ, ನೇಕಾರ, ಕೇರಿಯ ಮಾರ ಹಾಗೂ ಪುಟ್ಟಪೋರಿಗೆ ವಸಂತ ಮುಖ ತೋರಲಿಲ್ಲ.
59. ವಿವೇಕಾನಂದರು ಯಾವುದಕ್ಕೆ ಮೊದಲನೆ ಆದ್ಯತೆ ನೀಡಬೇಕೆಂದಿದ್ದಾರೆ?
ಉ: ಸ್ವಾಮಿ ವಿವೇಕಾನಂದರು ಬಡಜನರ ಹೊಟ್ಟೆಯ ಹಸಿವನ್ನು ಹಿಂಗಿಸುವುದಕ್ಕೆ ಮೊದಲ ಆದ್ಯತೆ ನೀಡಬೇಕೆಂದಿದ್ದಾರೆ.
60. ಸರ್ವಧರ್ಮಸಮ್ಮೇಳನವು ಎಲ್ಲಿ ನಡೆಯಿತು?
ಉ: ಅಮೇರಿಕದ ಚಿಕಾಗೋದಲ್ಲಿ ಸರ್ವಧರ್ಮ ಸಮ್ಮೇಳನ ನಡೆಯಿತು
61. ವಿವೇಕಾನಂದರು ಶೂದ್ರವರ್ಗಕ್ಕೆ ಏನೆಂದು ಕರೆಕೊಡುತ್ತಾರೆ?
ಉ: ತನ್ನ ಊಳಿಗ ಸ್ವಭಾವವನ್ನು ಬಿಟ್ಟುಬರಲು ಕರೆಕೊಡುತ್ತಾರೆ.
62. ಇಳೆಗೆ ಯಾವ ಸಂಭ್ರಮ ಬಂದಿದೆ?
ಉ: ಇಳೆಗೆ ಕಡಲು ಉಕ್ಕಿ ಹರಿಯುವ ಸಂಭ್ರಮ ಬಂದಿದೆ.
63. ಬಾಲರವಿ ಎಲ್ಲಿ ಸೊರಗಿದ್ದಾನೆ?
ಉ: ಬಾಲರವಿ ತೂತು ಬಿದ್ದ ಅಮ್ಮನ ಸೀರೆಯಲ್ಲಿ ಸೊರಗಿದ್ದಾನೆ.
64. ಭಗತ್‌ಸಿಂಗ್‌ನ ಸಹಚರರು ಯಾರು?
ಉ: ಸುಖ್‌ದೇವ್, ರಾಜ್‌ಗುರು, ಭಟುಕೇಶ್ವರ ದತ್ತರು ಭಗತ್ ಸಿಂಗ್‌ನ ಸಹಚರರು.
65. ಭಗತ್‌ಸಿಂಗ್ ಜಲಿಯನ್ ವಾಲಾಬಾಗ್‌ಗೆ ಏಕೆ ಹೋಗಿದ್ದನು?
ಉ: ಜಲಿಯನ್ ವಾಲಾಬಾಗ್ ಹತ್ಯಾಕಾಂಡದಲ್ಲಿ ಪ್ರಾಣ ಕಳೆದುಕೊಂಡಿದವರಿಗೆ ನಮನ ಸಲ್ಲಿಸಲು ಹೋಗಿದ್ದನು.

## ಈ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ:

### ಗದ್ಯಭಾಗ:

**1. ರಾಹಿಲನು ದೀರ್ಘವಾದ ನಿಟ್ಟುಸಿರು ಬಿಡಲು ಕಾರಣವೇನು?**

ಉ: ರಾಹಿಲನು ಕುಳಿತಿದ್ದ ವಿಮಾನ ಸಮುದ್ರದಲ್ಲಿ ಬಿದ್ದಾಗ ಈಜಲು ತೊಂದರೆಯಾಗಿ ಸೋತನು. ಆಗ ಮಿಂಚಿದ ಬೆಳಕಿನಲಲಿ ಹತ್ತಿರದಲ್ಲಿ ತೀರವಿರುವುದು ಗೋಚರವಾಯಿತು. ಅವನ ದೇಹದಲ್ಲಿ ಹೊಸ ರಕ್ತ ಸಂಚಾರವಾದಂತಾಗಿ ತನ್ನೆಲ್ಲಾ ಶಕ್ತಿಯನ್ನು ಒಟ್ಟುಗೂಡಿಸಿ ಬಲವಾಗಿ ಎರಡೂ ಕೈಗಳಿಂದಲೂ ನೀರನ್ನು ಹಿಂದಕ್ಕೆ ತಳ್ಳುತ್ತಾ ದಡ ಸೇರಿದಾಗ ರಾಹಿಲನು ದೀರ್ಘವಾದ ನಿಟ್ಟುಸಿರು ಬಿಟ್ಟನು.

**2. ಮಹಿಳೆಯ ಆರ್ತನಾದ ಕೇಳಿ ರಾಹಿಲನ ಮನದಲ್ಲಿ ಮೂಡಿದ ಪ್ರಶ್ನೆಗಳಾವುವು?**

ಉ: ಮಹಿಳೆಯ ಆರ್ತನಾದ ಕೇಳಿ ರಾಹಿಲನ ಮನದಲ್ಲಿ ಆ ಮಹಿಳೆ ಯಾವ ರೀತಿಯ ಅಪಾಯದಲ್ಲಿ ಸಿಲುಕಿದ್ದಾಳೆ? ಆ ಮನೆಯೊಳಗೆ ಏನು ಸಂಭವಿಸುತ್ತಿದೆ? ತಾನೀಗ ಈ ಕದವನ್ನು ತಟ್ಟಿದರೆ ಪರಿಣಾಮವೇನಾಗ ಬಹುದು? ಆ ಮನೆಯಿಂದ ಒಂದೇ ಒಂದು ಬೆಳಕಿನ ಕಿರಣವೂ ಹೊರಗಡೆಗೆ ಹಾಯುತ್ತಿರಲಿಲ್ಲ. ಗಡಿ ಪ್ರದೇಶದಲ್ಲಿ ವಿಮಾನ ದಾಳಿಯಿಂದ ರಕ್ಷಿಸಿಕೊಳ್ಳಲು 'ಬ್ಲಾಕ್ ಔಟ್' ನಿಯಮ ಪಾಲಿಸಲಾಗುತ್ತಿದೆ. ಇಂತಹ ಈ ಸಮಯದಲ್ಲಿ ಆ ಮನೆಯೊಳಗೆ ಯಾವ ರೀತಿಯ ಕ್ರೌರ್ಯ ನಡೆಯುತ್ತಿದೆ? ಎಂಬ ಪ್ರಶ್ನೆಗಳು ಮೂಡಿದವು.

**3. ನಿರ್ಜೀವಾಗಿರುವ ಮಗುವನ್ನು ನೋಡಿ ಮುದುಕಿ ನಿರಾಶೆಯಿಂದ ಹೇಳಿದ್ದೇನು?**

ಉ: ನಿರ್ಜೀವಾಗಿರುವ ಮಗುವನ್ನು ನೋಡಿ ಮುದುಕಿಯು "ಇಷ್ಟು ವರ್ಷಗಳಿಂದಲೂ ಹಂಬಲಿಸಿ ಹುಟ್ಟಿದ ಮಗು ಕೊನೆಗೂ ದಕ್ಕಲಿಲ್ಲವಲ್ಲ? ಈ ಯುದ್ಧವಲ್ಲದೆ ಹೋಗಿದ್ದರೆ ನನ್ನ ಮಗುವನ್ನು ಹೇಗಾದರೂ ಬದುಕಿಸಿಕೊಳ್ಳುತ್ತಿದ್ದೆವಲ್ಲ ದೇವರೇ? ಈ ಮನುಷ್ಯರಿಗೆ ಎಂತಹ ಬುದ್ಧಿ ಕೊಡುತ್ತೀಯಾ?" ಎಂದು ನಿರಾಶೆಯಿಂದ ಹೇಳಿದಳು.

**4. ಶಬರಿಯು ರಾಮನಿಗಾಗಿ ಯಾವ ರೀತಿ ಹಂಬಲಿಸುತ್ತಿದ್ದಳು?**

ಉ: ಶಬರಿಯು ರಾಮನಿಗಾಗಿ ಹಂಬಲಿಸುತ್ತಾ "ರಾಮನು ಬರದೇ ನನಗೇನೂ ತೋರುತ್ತಿಲ್ಲ. ಅವನು ಸವಿಯದ ಹಣ್ಣುಗಳನ್ನು ಏನು ಮಾಡಲಿ? ಮಧುಪರ್ಕವನ್ನು ಯಾರಿಗೆ ನೀಡಲಿ? ಬಾ ರಾಮ ಬಾ ರಾಮ, ನನ್ನ ಮನದಿರುಳಿನ ಚಂದ್ರನೇ, ತೆಗೆದುಕೋ ಹಣ್ಣುಗಳನ್ನು ಹೂಗಳನ್ನು ತೆಗೆದುಕೋ ನೀನು ಬಾರದೇ ನನಗೇನು ಸೇರುವುದಿಲ್ಲ ಎಂದು ಹಂಬಲಿಸುತ್ತಿದ್ದಳು?

**5. ಶಬರಿಯು ರಾಮಲಕ್ಷ್ಮಣರನ್ನು ಉಪಚರಿಸಿದ ರೀತಿಯನ್ನು ವಿವರಿಸಿ.**

ಉ: ಶಬರಿಯು ರಾಮಲಕ್ಷ್ಮಣರನ್ನು ಕಂಡು ಬೆರಗಾಗಿ, ಹತ್ತಿರಕ್ಕೆ ಬಂದು, ಮೈಯನ್ನು ಮುಟ್ಟಿ, ಕಾಲಿಗೆ ಬಿದ್ದು ನಮಸ್ಕರಿಸಿ, ಕೈಗಳನ್ನು ಕಣ್ಣಿಗೊತ್ತಿ ಕೊಂಡಳು. ಬಗೆಬಗೆಯ ಸುವಾಸನೆಯುಳ್ಳ ಹೂಮಾಲೆಯನ್ನು ಕೊರಳಿಗೆ ಹಾಕಿ ಸಂತಸಪಟ್ಟಳು. "ಜಗದಲ್ಲಿ ಇದರಂತ ರುಚಿಯಾದ ಹಣ್ಣೇ ಇಲ್ಲ. ನಿಮಗೆಂದೆ ತಂದೆನು" ಎಂದು ಹೇಳುತ ಸವಿಯಾದ ಹಣ್ಣುಗಳನ್ನು ನೀಡಿ ಉಪಚರಿಸಿದಳು.

**6. ರಾಮನ ಸ್ವಾಗತಕ್ಕಾಗಿ ಶಬರಿ ಮಾಡಿಕೊಂಡಿದ್ದ ಸಿದ್ಧತೆಗಳೇನು?**

ಉ: ರಾಮನ ಸ್ವಾಗತಕ್ಕಾಗಿ ಶಬರಿಯು ಆರಿಸಿ ತಂದ ಸವಿಯಾದ ಬಗೆಬಗೆಯ ಹಣ್ಣುಗಳನ್ನು, ಜೇನುತುಪ್ಪ ಅಧಿಕವಾಗಿರುವ ಮಧುಪರ್ಕವೆಂಬ ಪಾನೀಯವನ್ನು, ಸುವಾಸನೆಯಿಂದ ಕೂಡಿದ ಬಾಡದ ಹೂವುಗಳನ್ನು ಸಂಗ್ರಹಿಸಿ ಸಿದ್ಧಮಾಡಿಕೊಂಡಿದ್ದಳು.

**7. ಲಂಡನ್ನಿನ ಹೆಣ್ಣು ಮಕ್ಕಳು ಯಾವ ಯಾವ ಕೆಲಸದಲ್ಲಿ ನಿಯುಕ್ತರಾಗಿರುತ್ತಾರೆ?**

ಉ: ಲಂಡನ್ನಿನ ಯಾವುದಾದರೊಂದು ದೊಡ್ಡ ಅಂಗಡಿಗೆ ಹೋದರೆ ಅಲ್ಲಿಯ ಟೈಪಿಸ್ಟ್ ಕಾರಕೂನ, ಒಬ್ಬ ಹೆಣ್ಣು ಮಗಳು. ಸಿನಿಮಾ ಗೃಹದಲ್ಲಿ ನಿಮ್ಮ ಜಾಗವನ್ನು ಹುಡುಕಿಕೊಡುವವರು ಹೆಣ್ಣು! ಕಾಲೇಜಿನಲ್ಲಿ ಸಹ ವಿದ್ಯಾರ್ಥಿನಿಯರ ಅನುಕೂಲಕ್ಕಾಗಿ ಸಿಪಾಯಿಣಿಯರನ್ನು ಇಟ್ಟಿದ್ದಾರೆ!

**8. ಟೊಪ್ಪಿಗೆಯ ವಿಶೇಷತೆಯನ್ನು ಲೇಖಕರು ಹೇಗೆ ದಾಖಲಿಸಿದ್ದಾರೆ?**

ಉ: ಲಂಡನ್ನಿನಲ್ಲಿ ಹೆಣ್ಣುಮಕ್ಕಳು ಧರಿಸುವ ಟೊಪ್ಪಿಗೆಯ ವಿಶೇಷತೆಯನ್ನು ತಿಳಿಸುತ್ತಾ ಲೇಖಕರು "ಒಂದು ಟೊಪ್ಪಿಗೆಯಂತೆ ಇನ್ನೊಂದಿರುವುದಿಲ್ಲ. ಸಿಕ್ಕಿಸಿದ ಪುಚ್ಚವಾದರೂ ಕನಿಷ್ಠಪಕ್ಷಕ್ಕೆ ಬೇರೆಯಾಗಿರುತ್ತದೆ! ಕೋಟ್ಯಾವಧಿ ಟೊಪ್ಪಿಗೆಗಳನ್ನು ಬೇಕಾದರೆ ಪರೀಕ್ಷಿಸಿ ಇದನ್ನು ಮನಗಾಣಬಹುದು. ಮನುಷ್ಯನಂತೆ ಟೊಪ್ಪಿಗೆಯಲ್ಲವೆ? ಒಬ್ಬ ಮನುಷ್ಯಳಂತೆ ಇನ್ನೊಬ್ಬಳಿಲ್ಲ." ಎಂದು ದಾಖಲಿಸಿದ್ದಾರೆ.

**9. ಸಾಮ್ರಾಟರ ರಾಜ್ಯಾಭಿಷೇಕವಾಗುವ ಸಿಂಹಾಸನದ ಮೇಲಿರುವ ಕಲ್ಲುಪಾಟಿಯ ವಿಶೇಷತೆಯೇನು?**

ಉ: ಸಾಮ್ರಾಟರ ರಾಜ್ಯಾಭಿಷೇಕವಾಗುವಾಗ ಅವರ ಸಿಂಹಾಸನದ ಮೇಲೆ ಒಂದು ಕಲ್ಲು ಪಾಟಿಯನ್ನು ಹಾಕುತ್ತಾರೆ. ಪಟ್ಟಾಭಿಷೇಕವಾಗುವಾಗ ಮಾತ್ರ ಸಾಮ್ರಾಟರು ಇದರ ಮೇಲೆ ಕೂಡಬೇಕು. ಈ ಶಿಲೆಯನ್ನು ಒಳಗೊಂಡ ಸಿಂಹಾಸನವು ವೆಸ್ಟ್‌ಮಿನ್‌ಸ್ಟರ್ ಮಂದಿರದಲ್ಲಿಯ ಒಂದು ಭಾಗದಲ್ಲಿದೆ. 'ಸ್ಟೋನ್ ಆಫ್ ಸ್ಕೋನ್' ಎಂದು ಇದರ ಹೆಸರು. 3ನೇ ಎಡ್ವರ್ಡನು ಸ್ಕಾಟ್‌ಲೆಂಡಿನ ಅರಸರಿಂದ ಇದನ್ನು ಕಿತ್ತುಕೊಂಡು ಬಂದಂತೆ ಕಾಣುತ್ತದೆ. ಅಂದಿನಿಂದ ಎಲ್ಲ ಸಾಮ್ರಾಟರ ಅಭಿಷೇಕವು ಈ ಕಲ್ಲಿನ ಮೇಲೆಯೇ ಆಗಿದೆ.

**10. ನಾಲ್ವಡಿ ಕೃಷ್ಣರಾಜ ಒಡೆಯರು ಒಬ್ಬ ಸಮರ್ಥ ಆಡಳಿತಗಾರರಾಗುವಲ್ಲಿ ತಾಯಿಯವರ ಪಾತ್ರವೇನು?**

ಉ: ನಾಲ್ವಡಿ ಕೃಷ್ಣರಾಜ ಒಡೆಯರು ಮೈಸೂರು ಸಂಸ್ಥಾನದ 24ನೇ ರಾಜನಾಗಿ 1895ರಲ್ಲಿ ಪಟಾಭಿಷಿಕ್ತರಾದರು. ಅವರು ಕೇವಲ 10 ವರ್ಷದ ಬಾಲಕರಾಗಿದ್ದುದರಿಂದ ಅವರ ತಾಯಿ ಮಹಾರಾಣಿ ವಾಣಿವಿಲಾಸರವರು ರೀಜೆಂಟರಾಗಿ ಆಡಳಿತ ನಿರ್ವಹಣೆ ಮಾಡಿದರು. ರಾಜಕುಮಾರನಿಗೆ ಸೂಕ್ತ ವಿದ್ಯಾಭ್ಯಾಸ, ಆಡಳಿತ ತರಬೇತಿ ಇವುಗಳನ್ನು ತೀವ್ರ ನಿಗಾವಹಿಸಿ ನಡೆಸಿದುದರ ಪರಿಣಾಮ ಯುವರಾಜರು ಒಬ್ಬ ಸಮರ್ಥ ಆಡಳಿಗಾರರಾದರು.

**11. ನೆಹರೂ ಅವರು ಸರ್ ಎಂ. ವಿಶ್ವೇಶ್ವರಯ್ಯ ಅವರ ಬಗ್ಗೆ ಏನೆಂದು ಹೇಳಿದ್ದಾರೆ?**

ಉ: ನೆಹರೂ ಅವರು ಸರ್ ಎಂ. ವಿಶ್ವೇಶ್ವರಯ್ಯ ಅವರ ಬಗ್ಗೆ "ದುರದೃಷ್ಟವಶಾತ್ ಭಾರತೀಯರಾದ ನಾವು ಹೆಚ್ಚು ಮಾತನಾಡುವವರು ಮತ್ತು ನುಡಿದಂತೆ ನಡೆಯಲಾರದವರೆಂಬ ದೂಷಣೆಗೆ ಒಳಗಾಗಿದ್ದೇವೆ. ತಾವು ಈ ಮಾತಿಗೆ ಬಹುದೊಡ್ಡ ರೀತಿಯಲ್ಲಿ ಹೊರತಾಗಿದ್ದೀರಿ. ತಾವು ಕಡಿಮೆ ಮಾತನಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದೀರಿ. ಅದನ್ನು ನಾವು ತಮ್ಮಿಂದ ಕಲಿಯೋಣ" ಹೇಳಿದ್ದಾರೆ.

**12. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ 'ಪ್ರಜಾಪ್ರತಿನಿಧಿ ಸಭೆ'ಯು ನಿಜವಾದ ಜನಪ್ರತಿನಿಧಿ ಸಭೆಯಾಗಿ ಹೇಗೆ ರೂಪುಗೊಂಡಿತು?**

ಉ: 1923ರಲ್ಲಿ ಹೊಸ ಕಾನೂನನ್ನು ಜಾರಿಗೆ ತಂದು ಪ್ರಜಾಪ್ರತಿನಿಧಿ ಸಭೆಯನ್ನು ಶಾಸನಬದ್ಧ ಸಂಸ್ಥೆಯನ್ನಾಗಿ ಮಾರ್ಪಡಿಸಿದರು. ಈ ಸಭೆಯು ವರ್ಷಕ್ಕೆ ಎರಡು ಬಾರಿ ಸಮಾವೇಶಗೊಂಡು ಕಲಾಪಗಳನ್ನು ನಡೆಸುತ್ತಿತ್ತು. ಅಲ್ಲಿ ವಾರ್ಷಿಕ ಆಯವ್ಯಯ ಪರಿಶೀಲನೆ ಪ್ರಶ್ನೋತ್ತರಗಳು, ಠರಾವುಗಳು ಮುಂತಾದ ಸಂಸದೀಯ

ಮಾದರಿಯ ನಡಾವಳಿಗಳು ನಡೆಯುತ್ತಿದ್ದವು. ಇಲ್ಲಿನ ಪ್ರತಿನಿಧಿಗಳು ಜನರಿಂದ ಆಯ್ಕೆಯಾದವರಾಗಿದ್ದರು. ಹೀಗೆ ನಿವಾದ ಜನಪ್ರತಿನಿಧಿ ಸಭೆಯಾಗಿ ರೂಪುಗೊಂಡಿತು.

**13. ಶಿಕ್ಷಣವೇ ಸಂಜೀವಿನಿ ಎಂಬುದನ್ನರಿತಿದ್ದ ವಿಶ್ವೇಶ್ವರಯ್ಯನವರು ಜಾರಿಗೆ ತಂದ ವಿವಿಧ ಯೋಜನೆಗಳಾವುವು?**

ಉ: ವಿಶ್ವೇಶ್ವರಯ್ಯನವರು ಶಿಕ್ಷಣವು ಸಂಜೀವಿನಿ ಎಂಬುದನ್ನರಿತು ಶಿಕ್ಷಣದ ವಿವಿಧ ಯೋಜನೆಗಳನ್ನು ರೂಪಿಸಿದರು. 1913ರಲ್ಲಿ ಪ್ರಾಥಮಿಕ ಶಿಕ್ಷಣ ನಿಬಂಧನೆಯನ್ನು ಜಾರಿಗೆ ತಂದರು. ಪ್ರೌಢಶಿಕ್ಷಣ ಶಾಲೆಯ ಪರೀಕ್ಷೆಯನ್ನು ಮದ್ರಾಸ್ ವಿಶ್ವವಿದ್ಯಾನಿಲಯದ ನಿಯಂತ್ರಣದಿಂದ ಸಂಸ್ಥಾನವೇ ನಡೆಸುವ ಯೋಜನೆಯನ್ನು ಜಾರಿಗೊಳಿಸಿದರು. ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು, ಎಲ್ಲರ ಆಜನ್ಮಸಿದ್ಧ ಹಕ್ಕಾಗಬೇಕು ಎಂದು ತಾಂತ್ರಿಕ ವೃತ್ತಿಪರ ಶಿಕ್ಷಣಕ್ಕೆ ಆದ್ಯತೆ ನೀಡಿದರು.

**14. ಕವಿ ಸಿದ್ಧಲಿಂಗಯ್ಯ ಹೇಳಿದ ಕತೆಯಲ್ಲಿನ ಗ್ರಾಮದೇವತೆ ಮನೆ ಮಂಚಮ್ಮ ಹೇಗಾದಳು?**

ಉ: ಸಿದ್ಧಲಿಂಗಯ್ಯನವರು ಹೇಳಿದ ಕತೆಯ ಗ್ರಾಮದ ಜನರೆಲ್ಲಾ ಸೇರಿ ಗ್ರಾಮದೇವತೆಗೆ ಗುಡಿಕಟ್ಟಲು ಆರಂಭಿಸುತ್ತಾರೆ. ಚಾವಣಿ ಮಟ್ಟಕ್ಕೆ ಬಂದಾಗ ಒಬ್ಬನ ಮೈಮೇಲೆ ಬಂದು ಎಲ್ಲರಿಗೂ ಮನೆ ಆಗುವವರೆಗೆ ನನಗೂ ಮನೆ ಬೇಡ ಎನ್ನುತ್ತಾಳೆ. ಹೀಗೆ ಚಾವಣಿ ಇಲ್ಲದ ಗುಡಿಯಲ್ಲಿ ಇಂದಿಗೂ ಪೂಜಿತಳಾಗುತ್ತಿದ್ದಾಳೆ. ಹೀಗೆ ಗ್ರಾಮದೇವತೆ ಮನೆ ಮಂಚಮ್ಮಳಾದಳು.

**15. ವಚನಕಾರರ ದೃಷ್ಟಿಯಲ್ಲಿ ಅರಿವು ಎಂದರೆ ಏನು? ವಿವರಿಸಿ.**

ಉ: ವಚನಕಾರರ ದೃಷ್ಟಿಯಲ್ಲಿ ಅರಿವು ಅಂದರೆ 'ತನ್ನಷ್ಟಕ್ಕೆ ತಾನು ಇರುವ ಕೇವಲ ತಿಳಿವಳಿಕೆ, ಜ್ಞಾನ ಮಾತ್ರ ಅಲ್ಲ; ಅದು ಕ್ರಿಯೆಯ ಅನುಭವದಿಂದ ಒಡಮೂಡುವುದು. ಅದು ಕೇಳಿ ತಿಳಿದಿದ್ದಲ್ಲ. ಕ್ರಿಯೆಯಲ್ಲಿ ಮೂಡಿದ ತಿಳಿವಳಿಕೆ, ಅದು ತರ್ಕವಲ್ಲ. ನಡೆಯಿಂದ ನುಡಿ ಹುಟ್ಟಿದರೆ ಅದು ಅರಿವು.' ಅಂದರೆ ಜ್ಞಾನ–ನಡೆ–ನುಡಿ–ಕ್ರಿಯೆಯಿಂದ ಏಕರೂಪವಾಗಿ ಒಡಮೂಡಿದ ತಿಳಿವಳಿಕೆಯೇ ಅರಿವು ಎಂಬುದು ಅವರ ಅಭಿಮತ.

**16. ಅಶೋಕ ಪೈ ಅವರು ಹೇಳಿದ ಸಂಶೋಧನಾ ಸತ್ಯವೇನು?**

ಉ: ಕೆಲವು ಜನ ಒಂದು ಕೊಠಡಿಯಲ್ಲಿ ಕುಳಿತು ಟೆಲಿವಿಷನ್ ನೋಡುತ್ತಿರುವಾಗ, ಇನ್ನೊಂದಿಷ್ಟು ಜನ ಇದರ ಅರಿವಿಲ್ಲದೆ ಇನ್ನೊಂದು ಪಕ್ಕದ ಕೊಠಡಿಯಲ್ಲಿ ಏನೋ ಮಾತುಕತೆ ಆಡುತ್ತ ತಮ್ಮಷ್ಟಕ್ಕೆ ತಾವು ಇರುವಾಗ, ಟೆಲಿವಿಷನ್‌ನಲ್ಲಿ ಯಾವುದಾದರೂ ಕೊಲೆ ದೃಶ್ಯ ಬಂದಾಗ ಇಲ್ಲಿ ಇದನ್ನು ನೋಡುತ್ತಿದ್ದವರ ದುಃಖದ ಭಾವನೆಯು ಇದನ್ನು ನೋಡದೆ ಇರುವ ಪಕ್ಕದ ಕೊಠಡಿಯಲ್ಲಿ ಇರುವವರ ಮನಸ್ಸಿಗೂ ಮುಟ್ಟಿ ಅವರ ಮನಸ್ಸು ಸ್ವಲ್ಪಮಟ್ಟಿಗೆ ದುಗುಡಗೊಳ್ಳುತ್ತದೆ. ಅದೇ ಟೆಲಿವಿಷನ್‌ನಲ್ಲಿ ನೃತ್ಯದೃಶ್ಯ ಬಂದಾಗ ಅದನ್ನು ನೋಡುತ್ತಿರುವವರ ಖುಷಿ ಭಾವನೆಯು ಪಕ್ಕದ ಕೊಠಡಿಯಲ್ಲಿ ಇದನ್ನು ನೋಡದೆ ಇದ್ದವರ ಮನಸ್ಸಿನ ಮೇಲೂ ಪರಿಣಾಮ ಬೀರಿ ಸ್ವಲ್ಪಮಟ್ಟಿಗೆ ಸಂತೋಷದ ಭಾವನೆ ಉಂಟಾಗುತ್ತದೆ. ಇದು ಅಶೋಕ ಪೈ ಅವರು ಹೇಳಿದ ಸಂಶೋಧನಾ ಸತ್ಯ.

**17. ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದ ಘಟನೆಗಳನ್ನು ವಿವರಿಸಿ.**

ಉ: ಚಿಕ್ಕನಾಯಕನಹಳ್ಳಿಗೆ ತೆಂಗಿನಕಾಯಿ ತುಂಬಿಕೊಂಡು ಹೋಗಿದ್ದ ರೈತರ ಗಾಡಿಯ ಎತ್ತುಗಳು ಮುಂದೆ ಹೋಗದೆ ನಿಂತವು. ಹುಲಿಯ ಗರ್ಜನೆ ಕೇಳಿಸಿತು. ಎತ್ತುಗಳ ಗಂಟೆಯ ಸದ್ದನ್ನು ಕೇಳಿದ ಹುಲಿಯು ಕೆಲವು ನಿಮಿಷ ತಡೆದು ರೈತರ ಮಾತು ಕೇಳಿಬಂದ ಮೇಲೆ ನಿರಾಶೆಯಿಂದ ಪಲಾಯನಮಾಡಿತು. ಅನಂತರ ರೈತರು ತಮ್ಮಲ್ಲಿದ್ದ ಕೋವಿಯಿಂದ ಒಂದೆರಡು ತೋಟಾ ಹಾರಿಸಿ, ಸಾಧ್ಯವಾದಷ್ಟು ಗಲಭೆ ಮಾಡುತ್ತಾ ತೆಂಗಿನ ಗರಿಯ ಪಂಜು ಹೊತ್ತಿಸಿಕೊಂಡು ಜಾಗರೂಕತೆಯಿಂದ ಮುಂದೆ ಬಂದರು. ಮೂರ್ಛೆಯಲ್ಲಿ ಬಿದ್ದಿದ್ದ ಶಾನುಭೋಗರನ್ನು ಕಂಡು, ಮುಖದ ಮೇಲೆ ನೀರೆರಚಿ ಎಚ್ಚರಿಸಿದರು.

**18. ಮದಲಿಂಗನ ಕಣಿವೆಯಲ್ಲಿ ಬರುವಾಗ ಶಾನುಭೋಗರು ಕಾಲು ಮತ್ತಷ್ಟು ಚುರುಕಾಗಲು ಕಾರಣವೇನು?**

ಉ: ಶಾನುಭೋಗರು ಇರಸಾಲಿಗೆ ಚಿಕ್ಕನಾಯಕನಹಳ್ಳಿಗೆ ಹೋಗಿದ್ದರು. ಸ್ನೇಹಿತರನ್ನು ನೋಡಿಕೊಂಡು ಹೊರಡುವ ವೇಳೆಗೆ ಸಂಜೆ ಆರು ಗಂಟೆಯಾಯಿತು. ಮದಲಿಂಗನ ಕಣಿವೆ ದಾಟಿ ಹಳ್ಳಿಗೆ ಬರಬೇಕಾಗಿತ್ತು. ಕಾಡು ದಾರಿ, ಬೆಳದಿಂಗಳ ರಾತ್ರಿ ಸ್ವಲ್ಪ ದೊಡ್ಡ ಹೆಜ್ಜೆ ಹಾಕಿದರೆ ಊಟದ ಹೊತ್ತಿಗೆ ಊರು ಸೇರಿಕೊಳ್ಳಬಹುದು ಎಂದುಕೊಂಡು ಬೇಗ ಬೇಗ ನಡೆದರು. ಕಣಿವೆಗೆ ಬರುವ ವೇಳೆಗೆ ರಾತ್ರಿಯಾಗಿದ್ದರಿಂದ ಹಸಿವಿನ ಜೊತೆಗೆ ಭಯವೂ ಸೇರಿ ಅವರ ಕಾಲು ಮತ್ತಷ್ಟು ಚುರುಕಾಯಿತು.

**19. ಹುಲಿಯು ಹಿಂದಿನಿಂದ ಹಾರಿ ಶಾನುಭೋಗರನ್ನು ಕೊಲ್ಲದಿರಲು ಕಾರಣವೇನು?**

ಉ: ಹಸಿದಿದ್ದ ಹುಲಿಗೆ ದುಂಡುದುಂಡಾದ ಶಾನುಭೋಗರ ಶರೀರವನ್ನು ನೋಡಿ ಪರಮಾನಂದವಾಯಿತು. ಭಾರತದ ಹುಲಿಗಳು ಶತೃವನ್ನಾದರೂ ಸರಿಯೇ ಹಿಂದಿನಿಂದ ಹಾರಿ ಕೊಲ್ಲುವುದಿಲ್ಲ. ಆ ಶಾನುಭೋಗರು ಹುಲಿಗೆ ಅಭಿಮುಖರಾಗಿರದೆ ಅದರ ಕಡೆಗೆ ಬೆನ್ನು ತಿರುಗಿಸಿ ನಡೆಯುತ್ತಿದ್ದರು. ಬೆನ್ನು ತಿರುಗಿಸಿರುವಾಗ ಕೊಲ್ಲುವುದು ಹುಲಿಯ ಧರ್ಮವಲ್ಲ. ಆದ್ದರಿಂದ ಹುಲಿಯು ಶಾನುಭೋಗರನ್ನು ಹಿಂದಿನಿಂದ ಹಾರಿ ಕೊಲ್ಲಲಿಲ್ಲ.

**20. ಧರ್ಮಬುದ್ಧಿಯು ಹೊನ್ನನ್ನು ಹಂಚಿಕೊಳ್ಳೋಣ ಎಂದಾಗ ದುಷ್ಟಬುದ್ಧಿಯು ಏನು ಹೇಳಿದನು?**

ಉ: ಅರ್ಧರಾತ್ರಿಯಲ್ಲಿ ಧರ್ಮಬುದ್ಧಿಯು ದುರ್ಬುದ್ಧಿಯಾದ ದುಷ್ಟಬುದ್ಧಿಯನ್ನು ಕರೆದು, "ಚಿನ್ನವನ್ನು ಹಂಚಿಕೊಳ್ಳೋಣ" ಎಂದಾಗ ದುಷ್ಟಬುದ್ಧಿಯು ಪಾಪಬುದ್ಧಿಯವನಾಗಿ "ನಾವು ಈ ಹೊನ್ನನ್ನು ಹಂಚಿಕೊಂಡು ಮನೆಯಲ್ಲಿ ಸ್ವೇಚ್ಛೆಯಿಂದ ಇರುವವರಲ್ಲ. ಮತ್ತೆ ವ್ಯಾಪಾರಕ್ಕೆ ಹೋಗಬೇಕಾಗುತ್ತದೆ. ಆಕಾರಣದಿಂದ ನಿನಗೂ ನನಗೂ ಖರ್ಚಿಗೆ ತಕ್ಕಷ್ಟು ಹೊನ್ನನ್ನು ತೆಗೆದುಕೊಂಡು, ಉಳಿದ ಹೊನ್ನೆಲ್ಲವನ್ನು ಇಲ್ಲೆಯೇ ಇಟ್ಟು ಬಿಡೋಣ" ಎಂದು ಸಲಹೆಯಿತ್ತನು.

**21.ದುಷ್ಟಬುದ್ಧಿಯು ತನ್ನ ತಂದೆಗೆ ಏಕಾಂತದಲ್ಲಿ ಏನೆಂದು ಹೇಳಿದನು?**

ದುಷ್ಟಬುದ್ಧಿಯು ತನ್ನ ತಂದೆಯ ಕೈ ಹಿಡಿದು, ಏಕಾಂತ ಸ್ಥಳಕ್ಕೆ ಕರೆದುಕೊಂಡು ಹೋಗಿ "ನಿನ್ನ ಒಂದು ಮಾತಿನಿಂದ ನಮ್ಮ ಕಷ್ಟಗಳೆಲ್ಲವೂ ಪರಿಹಾರವಾಗಿ, ಹಲವು ಕಾಲ ಹಸಿಯದೆ ಊಟಮಾಡಿ ಬಾಳುವಂತಹ ಸಾಧನೆಯನ್ನು ಮಾಡಬಹುದು. ನೀನು ಆ ಮರದ ಪೊಟರೆಯಲ್ಲಿ ಅಡಗಿದ್ದು, ಧರ್ಮಬುದ್ಧಿಯೇ ಹೊನ್ನು ತೆಗೆದುಕೊಂಡು ಹೋದನೆಂದು ಹೇಳು" ಎಂದು ಹೇಳಿದನು.

**22. ಧರ್ಮಾಧಿಕರಣರು ವಟವೃಕ್ಷಕ್ಕೆ ಏನು ಹೇಳಿದರು?**

ಉ: ಧರ್ಮಾಧಿಕರಣರು ವಟವೃಕ್ಷಕ್ಕೆ "ನೀನಾದರೋ ಯಕ್ಷಾದಿ ದಿವ್ಯ ದೇವತೆಗಳು ವಾಸ ಮಾಡುವಂತಹ ಮತ್ತು ಅವರ ಸೇವೆಯನ್ನು ಮಾಡುವಂತಹವನು ಆಗಿದ್ದೀಯಾ, ಆ ಕಾರಣದಿಂದ ನಿನ್ನನ್ನು ಸಾಕ್ಷಿ ಮಾಡಿ ಕೇಳುತ್ತಿದ್ದೇವೆ, ನೀನು ತಪ್ಪದೆ ಸಾಕ್ಷಿಯನ್ನು ನುಡಿ" ಎಂದು ಹೇಳಿದರು.

**23. ಅರಸ ವೃಷಭಾಂಕನು ಆಶ್ಚರ್ಯಗೊಳ್ಳಲು ಕಾರಣವೇನು?**

**ಉ:** ಒಮ್ಮೆ ಒಬ್ಬ ವರ್ತಕನು ಲಕ್ಷದೀನಾರ (ಚಿನ್ನದ ನಾಣ್ಯ)ಗಳ ಬೆಲೆಬಾಳುವ ರತ್ನಗಂಬಳಿಗಳನ್ನು ಮಾರಲು ಉಜ್ಜಯಿನಿಗೆ ತೆಗೆದುಕೊಂಡು ಬಂದಿದ್ದಾಗ ಆ ಪಟ್ಟಣವನ್ನಾಳುವ ವೃಷಭಾಂಕನೆಂಬ ರಾಜ ಮತ್ತು ಮಹಾರಾಣಿ ಅವುಗಳ ಬೆಲೆ ಹೆಚ್ಚಾಯಿತೆಂದು ಕ್ರಯಕ್ಕೆ ಕೊಳ್ಳಲಿಲ್ಲ. ಆದರೆ ಸುಕುಮಾರ ಸ್ವಾಮಿಯ ತಾಯಿ ಅಷ್ಟೂ ಬೆಲೆಕೊಟ್ಟು ಖರೀದಿಸಿ ಅವುಗಳನ್ನು ಮೂವತ್ತೆರಡು ತುಂಡುಗಳನ್ನಾಗಿ

ಮಾಡಿ ಸೊಸೆಯಂದಿರಿಗೆ ಪಾದುಕೆಗಳಿಗೆ ಸಿಕ್ಕಿಸಿಕೊಳ್ಳಲು ಕೊಟ್ಟಳು. ಈ ಸಂಗತಿಯನ್ನು ತಿಳಿದು ರಾಜನು ಆಶ್ಚರ್ಯಪಟ್ಟನು.

**24. ವೃಷಭಾಂಕನು ಸುಕುಮಾರಸ್ವಾಮಿಗೆ ವ್ಯಾದಿಯಿದೆ ಎಂದುಕೊಳ್ಳಲು ಕಾರಣವೇನು?**

ಉ: ವೃಷಭಾಂಕನು ಸುಕುಮಾರ ಸ್ವಾಮಿಯ ಮನೆಗೆ ಆಗಮಿಸಿದಾಗ, ಸ್ವಜನರೂ ಸೇವಕರೂ ಬಿಳಿ ಸಾಸುವೆಗಳನ್ನು ಮಂಗಳಕರವೆಂದು ಇಬ್ಬರಿಗೂ ಮಂತ್ರಾಕ್ಷತೆಯನ್ನು ಹಾಕಿದರು. ಆ ಬಿಳಿ ಸಾಸವೆಕಾಳುಗಳು ಸುಕುಮಾರಸ್ವಾಮಿ ಕುಳಿತಿದ್ದ ಆಸನದಲ್ಲಿ ಒತ್ತುತ್ತಿದುದರಿಂದ ಸೊಂಟವನ್ನು ಅತ್ತಿತ್ತ ಹೊರಳಾಡಿಸುತ್ತಿದ್ದುದನ್ನೂ ದೀಪ ನೋಡಿದಾಗ ಅವನಗೆ ಕಣ್ಣೀರು ಸುರಿಯುತ್ತಿತ್ತು. ಅಲ್ಲದೆ ಊಟಮಾಡುವಾಗ ಸುಕುಮಾರಸ್ವಾಮಿ ಆಹಾರದ ಅರ್ಧಾಂಶವನ್ನು ನುಂಗುತ್ತಾ ಇನ್ನುಳಿದ ಅರ್ಧಾಂಶ ಆಹಾರವನ್ನು ಉಗುಳುತ್ತಿದ್ದನು. ಅದನ್ನು ಅರಸನು ನೋಡಿ ಸುಕುಮಾರಸ್ವಾಮಿಗೆ ವ್ಯಾದಿಯಿದೆ ಎಂದು ಭಾವಿಸಿದನು.

**25. ಸುಕುಮಾರಸ್ವಾಮಿಯ ವ್ಯಾದಿಗೆ ಮದ್ದನ್ನು ಏಕೆ ಮಾಡಿಸಿಲ್ಲ ಎಂದು ಅರಸನು ಕೇಳಿದಾಗ ತಾಯಿ ಯಶೋಭದ್ರೆಯು ಏನೆಂದು ಹೇಳಿದಳು?**

**ಉ:** ಅರಸ ವೃಷಭಾಂಕನು ಯಶೋಭದ್ರೆಯನ್ನು ಕುರಿತು "ಸುಕುಮಾರನಿಗೆ ಸೊಂಟದ ರೋಗಕ್ಕೂ ಕಣ್ಣೀರು ಸುರಿಯುವುದಕ್ಕೂ ಊಟ ಸೇರದಿರುವುದಕ್ಕೂ ಏಕೆ ಔಷಧ ಮಾಡಿಸಿಲ್ಲ?" ಎಂದು ಕೇಳಿದಾಗ ಅವಳು "ಒಡೆಯರೇ, ಇವು ರೋಗಗಳಲ್ಲ. ಮಂತ್ರಾಕ್ಷತೆಯಾಗಿ ಹಾಕಿದ ಬಿಳಿ ಸಾಸವೆಗಳು ಒತ್ತಿದುದರಿಂದ ಸಹಿಸದಾದನು. ಅವನು ಯಾವಾಗಲೂ ಮಾಣಿಕ್ಯ ರತ್ನದ ಬೆಳಕಿನಲ್ಲಿ ಇರುವುದರಿಂದ ದೀಪದ ಬೆಳಕನ್ನು ಸಹಿಸಲಾರದೆ ಅವನ ಕಣ್ಣಿನಲ್ಲಿ ನೀರು ಬರುತ್ತಿತ್ತು. ನೀವು ಬಂದ ಸಂದರ್ಭದಲ್ಲಿ ತಾವರೆ ನೈದಿಲೆ ಹೂಗಳ ಸುವಾಸನೆಯಿಂದ ಕೂಡಿದ ಅಕ್ಕಿಯೊಂದಿಗೆ ಬೇರೆ ಅಕ್ಕಿಯನ್ನು ಮಿಶ್ರಮಾಡಿ ಬೇಯಿಸಿದ ಅನ್ನವನ್ನು ಬಡಿಸಿದ್ದರಿಂದ ಅವನು ಸುವಾಸನೆಯ ಅಕ್ಕಿಯ ಅನ್ನವನ್ನು ನುಂಗುತ್ತಿದ್ದನು, ಉಳಿದ ಅನ್ನವನ್ನು ಉಗುಳುತ್ತಿದ್ದನು. ಆದುದರಿಂದಲೇ ಇವನಿಗೆ ಈ ಅವಸ್ಥೆಗಳಾಗಿವೆ" ಎಂದು ಹೇಳಿದಳು. ಅದನ್ನು ಕೇಳಿ ಅರಸನು ಆಶ್ಚರ್ಯಪಟ್ಟನು.

**ಪದ್ಯಭಾಗ:**

**1. ಹಡಗನ್ನು ಯಾವುದರ ಬೆಳಕಿನಲ್ಲಿ ಮುನ್ನಡೆಸಬೇಕಿದೆ?**

ಉ: ನಮ್ಮ ಬದುಕಿನ ಸುತ್ತಮುತ್ತಲು ಕವಿದಿರುವ ಕತ್ತಲೆಯನ್ನು ಕಳೆಯಲು ಪ್ರೀತಿಯೆಂಬ ಹಣತೆಯನ್ನು ಹಚ್ಚಬೇಕು. ಸಂಸಾರ ಸಾಗರದಲ್ಲಿ ಬಿರುಗಾಳಿಗೆ ಸಿಲುಕಿ ಹೊಯ್ದಾಡುತ್ತಿರುವ ಬದುಕೆಂಬ ಹಡಗನ್ನು ಜ್ಞಾನದೀವಿಗೆಯ ಮೂಲಕ ಎಚ್ಚರಿಕೆಯಿಂದ ಮುನ್ನಡೆಸಬೇಕಿದೆ.

**2. ಕಾಡುಗಳಿಗೆ ಹೇಗೆ ಮುಟ್ಟಬೇಕಿದೆ?**

ಉ: ಋತುಗಳ ರಾಜನಾದ ವಸಂತನು ಬರಡಾಗಿರುವ ಕಾಡುಗಳು ಹಚ್ಚಹಸಿರಿನಿಂದ ಕಂಗೊಳಿಸುವಂತೆ ಮುಟ್ಟಬೇಕಿದೆ.ವಸಂತನ ಆಗಮನದಿಂದ ಬರಡಾಗಿರುವ ಕಾಡಿನಲ್ಲಿ ಮರಗಿಡಗಳು ಚಿಗುರಿ ಪ್ರಕೃತಿಗೆ ನವಚೈತನ್ಯ ಮೂಡಬೇಕಿದೆ ಎಂಬುದು ಕವಿಯ ಆಶಯವಾಗಿದೆ.

**3. ಹೊಸ ಭರವಸೆಗಳನ್ನು ಮೂಡಿಸಿ ಯಾವುದರ ನಡುವೆ ಸೇತುವೆಯಾಗಬೇಕಿದೆ?**

ಉ: ಭಾಷೆ, ಜಾತಿ, ಮತಧರ್ಮಗಳ ಭೇದಭಾವದಿಂದ ಮನುಜರ ನಡುವೆ ಅಡ್ಡಗೋಡೆಗಳು ನಿರ್ಮಾಣವಾಗಿವೆ. ಸ್ನೇಹ, ಪ್ರೀತಿ, ನಂಬಿಕೆಯ ಮೂಲಕ ಮನುಜರ ನಡುವಿನ ಈ ಅಡ್ಡಗೋಡೆಗಳನ್ನು ಕೆಡವಬೇಕು. ಬದುಕಿನಲ್ಲಿ ಹೊಸ ಭರವಸೆಗಳನ್ನು ಮೂಡಿಸಿ ಮನುಜ ಮನುಜರ ನಡುವೆ ಸೇತುವೆಯಾಗಬೇಕಿದೆ.

**4. ನಾಳಿನ ಕನಸನ್ನು ಬಿತ್ತಬೇಕಾದರೆ ನಾವು ಹೇಗೆ ಬದುಕಬೇಕು?**

ಉ: ಎಲ್ಲ ಮತಧರ್ಮಗಳು ದಾರಿ ತೋರಿಸುವ ದೀಪಗಳಾಗಿರುವುದರಿಂದ ಎಲ್ಲಾ ಮತಗಳನ್ನು ಪುರಸ್ಕರಿಸುವ ಎಚ್ಚರಿಕೆಯಲ್ಲಿ ನಾವು ಬದುಕಬೇಕು.ಭಯ ಮತ್ತು ಸಂಶಯಗಳಿಂದ ಮಸುಕಾಗಿರುವ ಮನದ ಕಣ್ಣಿನಲ್ಲಿ ಭವಿಷ್ಯದ ಕನಸ್ಸನ್ನು ಬಿತ್ತುತ್ತ ಬದುಕು ನಡೆಸಬೇಕು.

**5. ಸಂಕಲ್ಪ ಪದ್ಯಭಾಗದಿಂದ ನಮಗೆ ತಿಳಿದು ಬರುವ ಅಂಶಗಳಾವುವು?**

ಉ: ನಾವು ಜೀವನದಲ್ಲಿ ಯಾವಾಗಲೂ ಧನಾತ್ಮಕ ಭಾವನೆಗಳನ್ನು ರೂಢಿಸಿಕೊಳ್ಳಬೇಕು. ಯಾವುದೇ ರೀತಿಯ ಸವಾಲುಗಳು ಎದುರಾದರೂ ಆತ್ಮವಿಶ್ವಾಸದ ಸಂಕಲ್ಪ ನಿಷ್ಠೆಯಿಂದ ಕ್ರಿಯಾಶೀಲರಾಗಬೇಕು. ಭೇದ–ಭಾವಗಳನ್ನು ಹೋಗಲಾಡಿಸಬೇಕು. ಭಯ ಮತ್ತು ಅನುಮಾನಗಳಿಂದ ಆವರಿಸಲ್ಪಟ್ಟ ಸಮಾಜವನ್ನು ದೃಢನಿಷ್ಠೆಯಿಂದ ಸದೃಢಗೊಳಿಸಬೇಕು. ಸ್ವಾಸ್ಥ್ಯನೆಲೆಯಾಗಿರುವ ಹಣತೆಯನ್ನು ಹಚ್ಚಿ ಅಜ್ಞಾನವೆಂಬ ಕತ್ತಲೆಯನ್ನು ದೂರವಾಗಿಸ ಬೇಕೆಂಬ ಅಂಶಗಳು ಸಂಕಲ್ಪ ಪದ್ಯಭಾಗದಿಂದ ತಿಳಿದುಬರುತ್ತವೆ.

**6. ಹಕ್ಕಿಯ ಹಾರಾಟವನ್ನು ಆಕಾಶಕ್ಕೆ ಹೇಗೆ ಹೋಲಿಸಿದ್ದಾರೆ?**

ತರತಮರಹಿತ ಸಮದೃಷ್ಟಿಯಿಂದ ಕೂಡಿದ ನೀಲಮೇಘಮಂಡಲ – ಸಮಬಣ್ಣ ಎಂದು ಹೇಳಿ ಕಾಲದ ದೈತ್ಯತೆಯನ್ನು ಸಂಕೇತಿಸುವ ಕವಿ ಮುಗಿಲಿಗೆ ರೆಕ್ಕೆಗಳು ಮೂಡಿ ಇಡೀ ಆಕಾಶವೇ ಹಾರಿದಂತೆ ಆಗುತ್ತದೆ ಎನ್ನುತ್ತಾರೆ. ನಕ್ಷತ್ರ ಮಾಲೆಯನ್ನು ಧರಿಸಿಕೊಂಡು, ಸೂರ್ಯ ಚಂದ್ರರನ್ನು ಕಣ್ಣಾಗಿಸಿಕೊಂಡು ಹಕ್ಕಿಯು ಹಾರಾಡುತ್ತಿರುವ ನೋಟ ಅದ್ಬುತವಾದುದು ಎಂದು ಕವಿ ಬೇಂದ್ರೆ ವರ್ಣಿಸುತ್ತಾರೆ.

**7. ಹೊಸಗಾಲದ ಹಸುಮಕ್ಕಳನ್ನು ಹಕ್ಕಿ ಹೇಗೆ ಹರಸಿದೆ?**

ಉ: ಹಕ್ಕಿಯು(ಕಾಲಪಕ್ಷಿಯು) ಯುಗಯುಗಗಳ ಆಗುಹೋಗುಗಳನ್ನು ಹಿಂದಕ್ಕೆ ತಳ್ಳುತ್ತ, ಹೊಸ ಮನ್ವಂತರದ ಪರಿವರ್ತನೆಗೆ/ ಪ್ರಗತಿಗೆ ಕಾರಣವಾಗಿದೆ. ಹಕ್ಕಿಯು (ಕಾಲಪಕ್ಷಿಯು) ತನ್ನ ರೆಕ್ಕೆಗಳನ್ನು ಬೀಸುವ ಮೂಲಕ ಭೂಮಂಡಲದ ಜೀವಿಗಳಿಗೆ ಚೈತನ್ಯ ನೀಡಿ, ಹೊಸಗಾಲದ ಹಸುಮಕ್ಕಳನ್ನು ಹರಸಿ, ಉತ್ತಮ ಭವಿಷ್ಯಕ್ಕಾಗಿ ಶುಭ ಹಾರೈಸುತ್ತಿದೆ ಎಂದು ಕವಿಗಳು ವರ್ಣಿಸುತ್ತಾರೆ.

**8. ಹಕ್ಕಿಯು ಯಾವ ಮೇರೆ ಮೀರಿ, ನೀರನು ಹೀರಿದೆ?**

ಉ: ಹಕ್ಕಿಯು ಬೆಳ್ಳಿಯ ಹಳ್ಳಿಯ ಮೇರೆಯನ್ನು ಅಂದರೆ ನಕ್ಷತ್ರಗಳ ಗಡಿಯನ್ನು ಮೀರಿ ತಿಂಗಳಿನೂರಿನ (ಚಂದ್ರ ಲೋಕದ) ನೀರನ್ನು ಹೀರಿದೆ. ಕವಿ ಇಲ್ಲಿ ಕಾಲವು ಬಹು ವೇಗವಾಗಿ ಮುಂದುವರೆಯುತ್ತಿದ್ದು ವಿಜ್ಞಾನ ಬೆಳೆದು ಭೂಮಂಡಲದ ಆಚೆಗೆ ಚಂದ್ರಲೋಕಕ್ಕೂ ಹೋಗಿರುವುದನ್ನು 'ತಿಂಗಳೊನೂರಿನ ನೀರನ್ನು ಹೀರಿ' ಎಂದಿದ್ದಾರೆ.

9. ಕಾಲವೆಂಬ ಹಕ್ಕಿಯ ಆಕಾರವನ್ನು ಕುರಿತು ಬರೆಯಿರಿ:

ಉ: ಕಾಲವೆಂಬ ಹಕ್ಕಿಗೆ ಕರಿ, ಬಿಳಿ ಬಣ್ಣದ ಪುಚ್ಚಗಳಿವೆ. ಬಿಳಿ ಹೊಳೆಯುವ ಬಣ್ಣಗಳ ಗರಿಗಳಿವೆ. ಕೆಂಪಾದ ಹೊನ್ನನಂತಹ ಬಣ್ಣಬಣ್ಣಗಳ ರೆಕ್ಕೆಗಳೆರಡೂ ಪಕ್ಕದಲ್ಲಿವೆ. ಇದು ಕಾಲವೆಂಬ ಪಕ್ಷಿಯ ಆಕಾರವಾಗಿದೆ.

10. **ಹಲಗಲಿಯ ಬೇಡರು ದಂಗೆ ಏಳಲು ಕಾರಣವೇನು?**

ಕ್ರಿ.ಶ. 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಬ್ರಿಟಿಷರ ಸರ್ಕಾರದ ಅನುಮತಿ ಇಲ್ಲದೆ ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ ಮತ್ತು ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು ಎಂಬ ಆದೇಶವನ್ನು ನೀಡಿತು. ಈ ಆದೇಶವನ್ನು ವಿರೋಧಿಸಿ ಹಲಗಲಿಯ ಬೇಡರು ಪೂಜೇರಿ ಹನುಮ, ಬ್ಯಾಡರ ಬಾಲ, ಜಡಗ ರಾಮ, ಭೀಮ ಮೊದಲಾದ ವೀರರ ನಾಯಕತ್ವದಲ್ಲಿ ಸಭೆ ಸೇರಿ ತಮ್ಮ ಬದುಕಿನ ಆಧಾರವಾದ ಆಯುಧಗಳನ್ನು ಸರ್ಕಾರಕ್ಕೆ ಹಿಂದಿರುಗಿಸಲು ಒಪ್ಪಲಿಲ್ಲ. ಆದರೆ ಬ್ರಿಟಿಷ್ ಸಿಪಾಯಿಗಳು ಬಂದು ಬಲವಂತವಾಗಿ ಆಯುಧಗಳನ್ನು ಕಸಿದುಕೊಳ್ಳಲು ಪ್ರಾರಂಭಿಸಿದರು. ಇದು ಹಲಗಲಿಯ ಬೇಡರು ದಂಗೆ ಏಳಲು ಕಾರಣವಾಯಿತು.

**11. ಹಲಗಲಿಗೆ ದಂಡು ಬರಲು ಕಾರಣವೇನು?**

ಉ: ಹಲಗಲಿಯ ಬೇಡರಾದ ಪೂಜೇರಿ ಹನುಮ, ಬ್ಯಾಡರ ಬಾಲ, ರಾಮ, ಜಡಗ ಇವರುಗಳು ಬ್ರಿಟಿಷ್ ಸರ್ಕಾರ ಹೊರಡಿಸಿದ್ದ ನಿಶ್ಶಸ್ತ್ರೀಕರಣದ ಆದೇಶವನ್ನು ವಿರೋಧಿಸಿ ತಮ್ಮಲ್ಲಿರುವ ಆಯುಧಗಳನ್ನು ಕೊಡಲು ಒಪ್ಪದೆ ದಂಗೆ ಎದ್ದರು. ಈ ದಂಗೆಯನ್ನು ಹತ್ತಿಕ್ಕಲು ಬಂದ ಕಾರಕೂನನ ಕಪಾಳಕ್ಕೆ ಹೊಡೆದು ಸಿಪಾಯಿಗಳನ್ನು ಹೊಡೆದುರುಳಿಸಿದರು ಇದರಿಂದ ಕೋಪಗೊಂಡ ಕುಂಪಣಿ ಸರ್ಕಾರದ ಅಧಿಕಾರಿಗಳು ಹಲಗಲಿಯ ಬೇಡರ ದಂಗೆಯನ್ನು ಬಗ್ಗುಬಡಿಯಲು ದಂಡನ್ನು ಕರೆಯಿಸಿದರು.

**12. ದಂಡು ಹಲಗಲಿಯ ಮೇಲೆ ಹೇಗೆ ದಾಳಿ ನಡೆಸಿತು?**

ಉ: ನಿಶ್ಶಸ್ತ್ರೀಕರಣದ ಆದೇಶವನ್ನು ವಿರೋಧಿಸಿ ಬ್ರಿಟಿಷ್ ಸರ್ಕಾರದ ವಿರುದ್ಧ ದಂಗೆ ಎದ್ದ ಹಲಗಲಿಯ ಬೇಡರನ್ನು ಬಗ್ಗುಬಡಿಯಲು ಬ್ರಿಟಿಷರ ದಂಡು ಬಂದಿತು. ಬ್ರಿಟಿಷರು ದಂಡಿನ ಸಿಪಾಯಿಗಳು ಹಲಗಲಿಯ ಬೇಡರ ಬೆನ್ನು ಹತ್ತಿ ಕೊಂದರು. ಎದುರಿಗೆ ಸಿಕ್ಕಸಿಕ್ಕವರಿಗೆಲ್ಲ ಕರುಣೆ ಇಲ್ಲದೆ ಗುಂಡು ಹೊಡೆದು ಸಾಯಿಸಿದರು. ಬ್ರಿಟಿಷ್ ಸಿಪಾಯಿಗಳ ಗುಂಡಿಗೆ ಹೆದರಿ ಹಲಗಲಿಯ ಬೇಡರು ಗುಡ್ಡದ ಕಡೆಗೆ ಓಡಿ ತಲೆಮರೆಸಿಕೊಂಡರು.

**13. ಲಾವಣಿಗಳನ್ನು ಏಕೆ ವೀರಗೀತೆಗಳು ಎನ್ನಲಾಗಿದೆ?**

ಉ: ಲಾವಣಿಗಳು ಜನಪದ ಸಾಹಿತ್ಯದ ಒಂದು ವಿಶಿಷ್ಟ ಪ್ರಕಾರ. ಒಂದು ಘಟನೆಯನ್ನು ಆಧರಿಸಿ, ಕಥನಾತ್ಮಕವಾಗಿ ಕಟ್ಟಿದ ಹಾಡನ್ನು ಲಾವಣಿಗಳೆನ್ನುವರು. ಲಾವಣಿಗಳು ಸಾಮಾನ್ಯವಾಗಿ ವೀರತನ ಹಾಗೂ ಸಾಹಸವನ್ನು ವರ್ಣಿಸುವುದರಿಂದ ಅವುಗಳನ್ನು ವೀರಗೀತೆಗಳು ಎನ್ನುವರು.

**14. ಹೆಬಲಕ್ ಸಾಹೇಬನ ಬುದ್ಧಿ ಮಾತಿಗೆ ಜಡಗ ಹೇಳಿದ್ದೇನು?**

ಉ: ಹೆಬಲಕ ಸಾಹೇಬನ ಬುದ್ಧಿಮಾತಿಗೆ ಜಡಗನು, "ಇವರು ಪೂರಾ ಘಾತುಕರಿದ್ದಾರೆ. ಇವರನ್ನು ಹೊಡೆಯಿರಿ, ಇವರು ವಿಶ್ವಾಸಘಾತುಕತನ ಮಾಡಿದರು. ಇವರ ಪಿತೂರಿ ನಮಗೆ ತಿಳಿಯದು, ಇವರು ಮೋಸ ಮಾಡಿ ನಮ್ಮ ದೇಶವನ್ನು ಗೆಲ್ಲುತ್ತಾರೆ. ಮುಂದೆ ಇದೇ ನಮಗೆ ಘೋರವಾಗುತ್ತದೆ ಎಂದು ಹೇಳಿದನು.

**15. ಕೃಷ್ಣನು ಕರ್ಣನ ಮನದಲ್ಲಿ ಯಾವ ರೀತಿಯಲ್ಲಿ ಭಯವನ್ನು ಬಿತ್ತಿದನು?**

ಉ: "ಕರ್ಣ ನಿಮಗೂ ಯಾದವ, ಕೌರವರಿಗೆ ವಂಶ ಗೌರವದಲ್ಲಿ ಭೇದವಿಲ್ಲ, ನೀನು ನಿಜವಾಗಿಯೂ ಭೂಮಿಯ ಒಡೆಯ, ಆದರೆ ನಿನಗೆ ಮನದಲ್ಲಿ ಅದರ ಅರಿವಿಲ್ಲ" ಎಂದು ಹೇಳುತ್ತ ಕೃಷ್ಣನು ಕರ್ಣನ ಕಿವಿಯಲ್ಲಿ ಭಯವನ್ನು ಬಿತ್ತಿದನು.

**16. ಕುಂತಿ, ಮಾದ್ರಿಯರು ಯಾರ್‍ಯಾರ ಅನುಗ್ರಹದಿಂದ ಮಕ್ಕಳನ್ನು ಪಡೆದರು?**

ಕುಂತಿಯು ಯಮಧರ್ಮನ ಅನುಗ್ರಹದಿಂದ ಧರ್ಮರಾಯನನ್ನು, ವಾಯುವಿನ ಅನುಗ್ರಹದಿಂದ ಭೀಮನನ್ನು, ಇಂದ್ರನ ಅನುಗ್ರಹದಿಂದ ಅರ್ಜುನನ್ನು ಪಡೆದಳು. ಮಾದ್ರಿಯು ಅಶ್ವಿನೀದೇವತೆಗಳ ಅನುಗ್ರಹದಿಂದ ನಕುಲ ಸಹದೇವರನ್ನು ಪಡೆದಳು.

**17. ಕೃಷ್ಣನು ಆಮಿಷಗಳನ್ನು ಒಡ್ಡಿದಾಗ ಕರ್ಣನ ಮನದಲ್ಲಿ ಮೂಡಿದ ಭಾವನೆಗಳೇನು?**

**ಉ:** ಕೃಷ್ಣನು ಕರ್ಣನಿಗೆ ಆಮಿಷಗಳನ್ನು ಒಡ್ಡಿದಾಗ ಕೊರಳಸೆರೆ ಹಿಗ್ಗಿದವು, ಕಂಬನಿಯು ರಭಸದಿಂದ ಮುಂದೆ ಬಂದು, ಅಧಿಕವಾಗಿ ಕರ್ಣನು ದುಃಖಗೊಂಡು ಮನದೊಳಗೆ "ಅಯ್ಯೋ, ದುರ್ಯೋಧನನಿಗೆ ಕೇಡಾಯಿತು" ಎಂದನು. ಹರಿಯ ಹಗೆತನವು ಹೊಗೆ ತೋರದೆ ಸುಟ್ಟುಹಾಕುವುದಲ್ಲದೆ ಸುಮ್ಮನೆ ಹೋಗುವುದೆ. ಕೃಷ್ಣನು "ನನ್ನ ವಂಶದ ರಹಸ್ಯವನ್ನು ತಿಳಿಸಿ ನನ್ನನ್ನು ಕೊಂದನು" ಎಂದು ಮನದಲ್ಲಿ ನೊಂದುಕೊಂಡನು.

**18. ಕೃಷ್ಣನು ಕೌರವೇಂದ್ರನನ್ನು ಕೊಂದನು ಎಂದು ಕರ್ಣಹೇಳಲು ಕಾರಣವೇನು?**

**ಉ:** ಕರ್ಣನು ಕೃಷ್ಣನಿಗೆ "ನಾನು ರಾಜ್ಯದ ಸಿರಿಸಂಪತ್ತಿಗೆ ಸೋಲುವವನಲ್ಲ, ಪಾಂಡವರು ಕೌರವರು ಸೇವೆಯನ್ನು ಮಾಡುವುದು ನನಗೆ ಇಷ್ಟವಿಲ್ಲ. ಆದರೆ ನನ್ನನ್ನು ಕಾಪಾಡಿದ ಒಡೆಯನಾದ ದುರ್ಯೋಧನನಿಗೆ ಶತ್ರುಗಳ ಶಿರವನ್ನು ಕಡಿದು ತಂದು ಒಪ್ಪಿಸುವ ಆವೇಶದಲ್ಲಿ ಇದ್ದೆನು. ಆದರೆ ನೀನು ನನ್ನ ಜನ್ಮ ರಹಸ್ಯವನ್ನು ತಿಳಿಸಿ ದುರ್ಯೋಧನನ್ನು ಕೊಂದೆ" ಎಂದನು.

**19. ಯುದ್ಧದ ವಿಚಾರದಲ್ಲಿ ಕರ್ಣನ ತೀರ್ಮಾನವೇನು?**

**ಉ:** ಕರ್ಣನು ಕೃಷ್ಣನನ್ನು ಕುರಿತು "ನಾಳಿನ ಕೌರವರ ಮತ್ತು ಪಾಂಡವರ ಚತುರಂಗ ಬಲದ ನಡುವಿನ ಯುದ್ಧವು ಮೃತ್ಯುದೇವತೆಗೆ ಭೋಜನ ಕೂಟ ಆಗುವುದು. ನಾನು ಕೌರವನ ಉಪಕಾರದ ಋಣ ತೀರಿಸುವಂತೆ ಹೋರಾಡಿ, ಯುದ್ಧರಂಗದಲ್ಲಿ ಲೆಕ್ಕವಿಲ್ಲದಷ್ಟು ವೀರಯೋಧರನ್ನು ಕೊಂದು, ನನ್ನ ಒಡೆಯನಿಗಾಗಿ ಪ್ರಾಣವನ್ನು ಬಿಡುವೆನು. ಸೂರ್ಯನ ಮೇಲಾಣೆ ಪಾಂಡವರನ್ನು ನೋಯಿಸೆನು" ಎಂದನು.

**20. ತೊಡೆ ಸೋಂಕಿನಲ್ಲಿ ಕುಳಿತ ಕೃಷ್ಣ ಕರ್ಣನಿಗೆ ಹೇಳಿದುದೇನು?**

ಉ: ತೊಡೆಸೋಂಕಿನಲ್ಲಿ ಕುಳಿತ ಕೃಷ್ಣ, ಕರ್ಣಾ ನಿಮ್ಮಲ್ಲಿ ಯಾದವರಲ್ಲಿ, ಕೌರವರಲ್ಲಿ ಭೇದವಿಲ್ಲದೆ ಇಲ್ಲ, ತಿಳಿದು ನೋಡಿದರೆ ನಿನ್ನಾಣೆಯಾಗಿಯೂ ತಾರತಮ್ಯವೆಂಬುದು ಇಲ್ಲ, ಈ ಭೂಮಿಗೆಲ್ಲ ನೀನೇ ಒಡೆಯ, ನಿನಗೆ ಅದರ ಅರಿವು ಇಲ್ಲ ತಿಳಿದುಕೋ ಎಂದು ರಾಕ್ಷಸಾಂತಕನಾದಂತಹ ಕೃಷ್ಣ ಕರ್ಣನಿಗೆ ಹೇಳಿದನು.

**21. ಮಾರಿಗೌತಣವಾಯಿತು ನಾಳಿನ ಭಾರತ ಎಂದು ಕರ್ಣನು ಹೇಳಲು ಕಾರಣವೇನು?**

ಉ: ನಾಳಿನ ಮಹಾಭಾರತ ಯುದ್ಧವು ಮಾರಿಗೆ ಔತಣವಾಯಿತು, ಕೌರವನ ಋಣವನ್ನು ತೀರಿಸಲು ರಣಾಂಗಣದಲ್ಲಿ ಕೋಟಿ ಕೋಟಿ ಶೂರರನ್ನು ಸಂಹರಿಸಿದ ನಂತರ ನನ್ನ ಒಡೆಯನಿಗೆ ಈ ಶರೀರವನ್ನು ಬಲಿ ಕೊಡುತ್ತೇನೆ. ನನ್ನ ತಂದೆ ಸೂರ್ಯನಾಣೆಗೂ ವೀರರಾದ ಪಾಂಡವರನ್ನು ನೋಯಿಸೆನು ಎಂದು ಕರ್ಣ ಹೇಳುತ್ತಾನೆ.

**22. ಕವಿಗೆ ಯಾವ್ಯಾವುದರಲ್ಲಿ ಆಗಸದಿಂದ ಬಿಸಿಲವರೆಗೂ ಹಸುರು ಕಾಣುತ್ತಿದೆ?**

**ಉ:** ಕವಿಗೆ ನವರಾತ್ರಿಯಲ್ಲಿ, ಹಸುರಿನಿಂದ ಕಂಗೊಳಿಸುವ ಭೂಮಿಯಲ್ಲಿ, ನೀಲ ಸಮುದ್ರದಲ್ಲಿ ಹಸುರಾದ ಕವಿಯ ಹೃದಯಕ್ಕೆ 'ಆಗಸ, ಮುಗಿಲು, ಗದ್ದೆಯ ಬಯಲು, ಮಲೆ, ಕಣಿವೆ, ಸಂಜೆಯ ಬಿಸಿಲು ಕಾಡಂಚಿನ ಅಡಕೆಯ ತೋಟ, ಹೂವಿನ ಕಂಪಿನಲ್ಲಿ, ಎಲರಿನ ತಂಪಿನಲ್ಲಿ, ಹಕ್ಕಿಯ ಕೊರಲಿನಲ್ಲಿ, ಹೀಗೆ ಆಗಸದಿಂದ ಬಿಸಿಲವರೆಗೂ ಕವಿಗೆ ಹಸುರು ಕಾಣುತ್ತಿದೆ.

**23. ಹಸುರು ಸಕಲೇಂದ್ರಿಯಗಳನ್ನು ವ್ಯಾಪಿಸಿದೆ ಎಂಬುದನ್ನು ಕವಿಯು ಹೇಗೆ ವರ್ಣಿಸಿದ್ದಾರೆ?**

**ಉ:** ಹಸುರಾದ ಭೂಮಿ, ಆಗಸ, ಮುಗಿಲು, ಗದ್ದೆಯ ಬಯಲು, ಮಲೆ, ಕಣಿವೆ, ಸಂಜೆಯ ಬಿಸಿಲು ಕಾಡಂಚಿನ ಅಡಕೆಯ ತೋಟ ಇವೆಲ್ಲಾ **ಕಣ್ಣಿಗೆ** ಗೋಚರವಾದರೆ, ಹೂವಿನ ಕಂಪಿನ ಹಸುರು **ಮೂಗಿಗೆ**, ಎಲರಿನ ತಂಪಿನ ಸ್ಪರ್ಷ **ಚರ್ಮಕ್ಕೆ,** ಹಕ್ಕಿಯ ಕೊರಲಿನ ಚಿಲಿಪಿಲಿ ಗಾನ **ಕಿವಿಗೆ,** ಶ್ಯಾಮಲ ಸಮುದ್ರದ ಹಸುರು ಕವಿಯಾತ್ಮಕ್ಕೆ ರಸಪಾನ ಮಾಡಿದಂತಾದುದು **ನಾಲಗೆಗೆ** ಹೀಗೆ ಪ್ರಕೃತಿಯ ಹಸುರು ಸಕಲ ಇಂದ್ರಿಯಗಳನ್ನೂ ವ್ಯಾಪಿಸಿದೆ ಎಂಬುದನ್ನು ಕವಿ ಕುವೆಂಪು ಅವರು ಅಭೂತಪೂರ್ಣವಾಗಿ ವರ್ಣಿಸಿದ್ದಾರೆ.

24. **ಕವಿಯಾತ್ಮವು ಹಸುರುಗಟ್ಟಲು ಕಾರಣವಾದ ಹಿನ್ನೆಲೆಯ ಅಂಶಗಳೇನು?**

**ಉ:** ಕವಿಯಾತ್ಮವು ಹಸುರುಗಟ್ಟಲು ಆಶ್ವಯುಜ ಮಾಸದ ನವರಾತ್ರಿಯಲ್ಲಿ ವಿಶಾಲವಾದ ಶಾಮಲ ಕಡಲು, ಹಸುರಾಗಸ;

ಹಸುರು ಮುಗಿಲು; ಹಸುರು ಗದ್ದೆಯ ಬಯಲು; ಹಸುರಿನ ಮಲೆ; ಹಸುರು ಕಣಿವೆ; ಸಂಜೆಯ ಬಿಸಿಲು, ಅಶ್ವೀಜದ ಶಾಲಿವನದ ಗಿಳಿಯ ಹಸುರು ಬಣ್ಣದ ನೋಟ; ಕಾಡಂಚಿನಲ್ಲಿ ಫಲಭರಿತ ಅಡಕೆಯ ತೋಟ; ಹುಲ್ಲಿನ ಮಕಮಲ್ಲಿನ ಹೊಸಪಚ್ಚೆಯ ಜಮಖಾನೆ ಪಸರಿಸಿದಂತೆ ಭೂಮಿಯು ಹಸುರುಟ್ಟಿದ್ದು ಹೊಸ ಹೂವಿನ ಕಂಪು; ತಂಗಾಳಿಯ ತಂಪು; ಹಕ್ಕಿಯ ಇಂಪಾದ ಗಾನ; ಎತ್ತೆತ್ತ ನೋಡಿದರೂ ಹಸುರು.. ಹಸುರು.. ಹಸರು.. ಈ ಇವೆಲ್ಲಾ ಕವಿಯಾತ್ಮವು ಹಸುರುಗಟ್ಟಲು ಕಾರಣವಾದ ಹಿನ್ನೆಲೆಯ ಅಂಶಗಳಾದವು.

**25. ಕವಿಯ ದೃಷ್ಟಿಯಲ್ಲಿ ಹಸುರು ಎಲ್ಲೆಲ್ಲಿ ವ್ಯಾಪಿಸಿದೆ?**

ಉ: ಆಗಸದಲ್ಲಿ; ಮುಗಿಲಿನಲ್ಲಿ; ಗದ್ದೆಯ ಬಯಲಿನಲ್ಲಿ; ಬೆಟ್ಟಗುಡ್ಡಗಳಲ್ಲಿ; ಕಣಿವೆಯಲ್ಲಿ; ಸಂಜೆಯ ಬಿಸಿಲಿನಲ್ಲಿ ಹಸುರು ಹರಡಿತ್ತು. ಹಾಗೆಯೇ ಅಶ್ವೀಜ ಮಾಸದಲ್ಲಿ ಬತ್ತದ ಗದ್ದೆಗೆ ಮುತ್ತುವ ಗಿಳಿಗಳ ಹಸುರು ಬಣ್ಣದ ನೋಟ; ಅದರ ಪಕ್ಕದಲ್ಲೇ ಕಾಡಂಚಿನಲ್ಲಿ ಫಲಭರಿತ ಅಡಕೆಯ ತೋಟ; ಹುಲ್ಲಿನ ಮಕಮಲ್ಲಿನ ಹೊಸಪಚ್ಚೆಯ ಜಮಖಾನೆ ಹರಡಿದಂತೆ ಭೂಮಿಯು ಹಸುರಿನಿಂದ ಮೈ ಮುಚ್ಚಿರಲು ಕವಿಗೆ ಬೇರೆ ಬಣ್ಣಗಳೇ ಕಾಣದಾದವು. ಹೊಸ ಹೂವಿನ ಕಂಪು; ತಂಗಾಳಿಯ ತಂಪು; ಹಕ್ಕಿಯ ಇಂಪಾದ ಗಾನ; ಅತ್ತ–ಇತ್ತ–ಎತ್ತ ನೋಡಿದರೂ ಹಸುರು.. ಹಸುರು.. ಹಸರು.. ಇದನ್ನು ನೋಡಿದ ಕವಿಯಾತ್ಮವು ಹಸುರುಗಟ್ಟಿತು.

26. **ತಾನು ಹೋರಾಡುತ್ತಿರುವುದು ನೆಲಕ್ಕಲ್ಲ ಛಲಕ್ಕೆ ಎಂಬುದನ್ನು ದುರ್ಯೋಧನ ಹೇಗೆ ವಿವರಿಸುತ್ತಾನೆ?**

**ಉ:** ದುರ್ಯೋಧನನನನು ಭೀಷ್ಮಾಚಾರ್ಯರಿಗೆ “ನಾನು ಭೂಮಿಗಾಗಿ ಹೋರಾಡುತ್ತಿಲ್ಲ; ಆದರೆ ನನ್ನ ಛಲಕ್ಕಾಗಿ ಪಾಂಡವರೊಡನೆ ಹೋರಾಡುವೆನು. ಈ ಭೂಮಿ ನನಗೆ ಪಾಳು ಭೂಮಿಗೆ ಸಮ. ನನ್ನ ಒಡ ಹುಟ್ಟಿದ ನೂರುಮಂದಿ ಸಹೋದರರು ಯುದ್ಧದಲ್ಲಿ ಹೋರಾಡಿ ಸತ್ತರು. ಸತ್ತವರೇನು ಮತ್ತೆ ಹುಟ್ಟುವುದಿಲ್ಲವೇ? ಆದ್ದರಿಂದ ಪಾಂಡವರೊಡನೆ ಹೋರಾಡಿ ನನ್ನ ಛಲವನ್ನೇ ಮೆರೆಯುತ್ತೇನೆ” ಎಂದು ಹೇಳುತ್ತಾನೆ.

**27. ಈ ನೆಲದೊಡನೆ ತಾನು ಸಹಬಾಳ್ವೆ ಮಾಡುವುದಿಲ್ಲವೆಂದು ದುರ್ಯೋಧನ ಹೇಳುವುದೇಕೆ?**

**ಉ:** ಭೀಷ್ಮಾಚಾರ್ಯರು ಪಾಂಡವರೊಡನೆ ಸಂಧಿ ಮಾಡಿಕೊ ಎಂದು ಸಲಹೆ ಮಾಡಿದಾಗ ದುರ್ಯೋಧನನನು ಅದಕ್ಕೆ ಒಪ್ಪುವುದಿಲ್ಲ. ಅವನು “ನಾನು ಭೂಮಿಗಾಗಿ ಹೋರಾಡುತ್ತಿಲ್ಲ. ಛಲಕ್ಕಾಗಿ ಪಾಂಡವರೊಡನೆ ಹೋರಾಡುವೆನು. ಈ ಭೂಮಿ ನನಗೆ ಪಾಳು ಭೂಮಿಗೆ ಸಮ. ಪ್ರಿಯ ಗೆಳೆಯನಾದ ಕರ್ಣನನ್ನು ಕೊಲ್ಲಿಸಿದ ಈ ಭೂಮಿಯೊಡನೆ ನಾನು ಮತ್ತೆ ಸಹಬಾಳ್ವೆ ಮಾಡುವುದಿಲ್ಲ” ಎನ್ನುತ್ತಾನೆ.

**28. ಪಾರ್ಥ–ಭೀಮರ ಬಗೆಗೆ ದುರ್ಯೋಧನನ ಅಭಿಪ್ರಾಯವೇನು?**

**ಉ:** “ನನ್ನ ಪ್ರೀತಿಯ ಗೆಳೆಯ ಕರ್ಣನನ್ನು, ನನ್ನ ಪ್ರೀತಿಯ ತಮ್ಮನಾದ ದುಶ್ಯಾಸನನನ್ನು ಕೊಂದ ಅರ್ಜುನ–ಭೀಮರು ಬದುಕಿರುವವರೆಗೆ; ನನ್ನ ದೇಹದಲ್ಲಿ ಪ್ರಾಣ ಇರುವವರೆಗೆ; ನಾನು ಸಂಧಿಮಾಡಿಕೊಳ್ಳಲು ಒಪ್ಪುವುದಿಲ್ಲ. ಮೊದಲು ಆ ಇಬ್ಬರನ್ನೂ ಕೊಲ್ಲುವೆನು. ಅವರನ್ನು ಕೊಂದ ಬಳಿಕ ಧರ್ಮರಾಜನೊಡನೆ ಸಂಧಿಮಾಡಿಕೊಳ್ಳುತ್ತೇನೆ” ಎಂಬುದು ಪಾರ್ಥ–ಭೀಮರ ಬಗೆಗೆ ದುರ್ಯೋಧನನ ಅಭಿಪ್ರಾಯವಾಗಿದೆ.

**29. ದುರ್ಯೋಧನ ತನ್ನ ಛಲವನ್ನು ಯಾವ ರೀತಿ ತೀರಿಸಿಕೊಳ್ಳಲು ಇಚ್ಚಿಸುತ್ತಾನೆ?**

ಉ: ಅಜ್ಜಾ! ನಾನು ನೆಲಕ್ಕಾಗಿ ಇರುವೆನೆಂದು ತಿಳಿದಿರೆ, ಇಲ್ಲ ನಾನು ಛಲಕ್ಕಾಗಿ ಇದ್ದೇನೆ. ನನ್ನ ಪಾಲಿಗೆ ಇದು ಪಾಳುಭೂಮಿ, ಪ್ರಿಯಮಿತ್ರನಾದ ಕರ್ಣನನ್ನು ತಮ್ಮನಾದ ದುಶ್ಯಾಸನನ್ನು ಕೊಂದ ಪಾರ್ಥಭೀಮರು ಕೊಂದು ತನ್ನ ಸೇಡನ್ನು ತೀರಿಸಿಕೊಳ್ಳಲು ಇಚ್ಚಿಸುತ್ತಾನೆ.

**30. ವಾಲ್ಮೀಕಿ ಆಶ್ರಮಕ್ಕೆ ಯಜ್ಞಾಶ್ವವು ಬಂದ ಬಗೆಯನ್ನು ವಿವರಿಸಿ.**

ಶ್ರೀರಾಮನು ಮಹರ್ಷಿಗಳ ಆದೇಶದಂತೆ ಅಶ್ವಮೇಧಯಾಗವನ್ನು ಕೈಗೊಂಡು, ಶತ್ರುಘ್ನನ ಬೆಂಗಾವಲಿನಲ್ಲಿ ಯಜ್ಞಾಶ್ವವನ್ನು ಕಳುಹಿಸಿದನು. ರಾಮನ ಆಜ್ಞೆಯಂತೆ ಹೊರಟ ಯಜ್ಞಾಶ್ವವನ್ನು ಭುಜಬಲ ಪರಾಕ್ರಮಿಗಳಾದ ರಾಜರುಗಳು ತಡೆಯಲು ಹೆದರಿ ನಮಸ್ಕರಿಸಿ ಮುಂದೆ ಹೋಗಲು ಬಿಟ್ಟರು. ಹೀಗೆ ಯಜ್ಞಾಶ್ವವು ಭೂಮಿಯಲ್ಲೆಲ್ಲ ಸಂಚರಿಸುತ್ತ ವಾಲ್ಮೀಕಿಯ ಆಶ್ರಮದ ತೋಟದ ಹಸುರಾದ ಹುಲ್ಲನ್ನು ತಿನ್ನಲು ಒಳಹೊಕ್ಕಿತು.

**31. ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ ಏನೆಂದು ಬರೆಯಲಾಗಿತ್ತು?**

ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ “ಭೂಮಂಡಲದಲ್ಲಿ ಕೌಸಲ್ಯೆಯು ಮಗನಾದ ರಾಮನು ಒಬ್ಬನೇ ವೀರನು ಇದು ಅವನ ಯಜ್ಞಕುದುರೆ ಇದನ್ನು ತಡೆಯುವ ಸಾಮರ್ಥ್ಯವುಳ್ಳವರು ಯಾರೇ ಆದರು ತಡೆಯಲಿ” ಎಂದ ಬರೆಯಲಾಗಿತ್ತು.

**32. ಕುದುರೆಯನ್ನುಕಟ್ಟುವ ವಿಚಾರದಲ್ಲಿ ಮುನಿಸುತರಿಗೂ ಲವನಿಗೂ ನಡೆದ ಸಂವಾದವನ್ನು ಬರೆಯಿರಿ.**

ಲವನು ಆಶ್ರಮವನ್ನು ಹೊಕ್ಕ ಯಜ್ಞಾಶ್ವವನ್ನು ತನ್ನ ಉತ್ತರೀಯದಿಂದ ಬಾಳೆಯ ಗಿಡಕ್ಕೆ ಕಟ್ಟಿ ಹಾಕಿದ್ದನ್ನು ಕಂಡು ಹೆದರಿದ ಮುನಿಸುತರು “ಬೇಡಬೇಡ ಅರಸುಗಳ ಕುದುರೆಯನ್ನು ಬಿಡು, ನಮ್ಮನ್ನು ಹೊಡೆಯವರು” ಎಂದು ಹೇಳಿದರು. ಆಗ ಲವನು ನಗುತ “ಬ್ರಾಹ್ಮಣರ ಮಕ್ಕಳು ಹೆದರಿದರೆ. ಜಾನಕಿಯ ಮಗನು ಇದಕ್ಕೆ ಹೆದರುವನೇ, ನೀವು ಹೋಗಿ” ಎಂದು ಶೌರ್ಯದಿಂದ ಹೇಳಿದನು.

**33. ರಘೂದ್ವಹನ ಸೊಲ್ಗೇಳಿ ನೃಪರು ಏನು ಮಾಡುತ್ತಿದ್ದರು?**

ಉ: ರಾವಣನ ವಧೆಯಿಂದ ಬ್ರಹ್ಮಹತ್ಯಾದೋಷ ಬಂದಿರುವುದನ್ನು ಪರಿಹರಿಸಿಕೊಳ್ಳಲು ಮಹರ್ಷಿಗಳ ಆದೇಶದಂತೆ ರಾಮನು ಅಶ್ವಮೇಧಯಾಗವನ್ನು ಕೈಗೊಂಡನು. ಕುದುರೆಯ ಕಾವಲಿಗೆ ಶತ್ರುಘ್ನನನ್ನು ಕಳುಹಿಸುತ್ತಾನೆ. ಯಾವ ಅರಸರೂ ರಾಮನ ಶೌರ್ಯ, ಪರಾಕ್ರಮದ ಬಗ್ಗೆ ಪೂರ್ವಾಗ್ರಹದಿಂದ ಹೆದರಿ ಅಶ್ವಮೇಧದ ಕುದುರೆಯನ್ನು ಕಟ್ಟುವುದಿಲ್ಲ ಬದಲಿಗೆ ಸೋಲನ್ನು ಒಪ್ಪಿಕೊಳ್ಳುತ್ತಿದ್ದರು.

34. **ವಾಲ್ಮೀಕಿ ಆಶ್ರಮಕ್ಕೆ ಯಜ್ಞಾಶ್ವವು ಬಂದ ಬಗೆಯನ್ನು ವಿವರಿಸಿ.**

ಉ: ಶ್ರೀರಾಮನು ಮಹರ್ಷಿಗಳ ಆದೇಶದಂತೆ ಅಶ್ವಮೇಧಯಾಗವನ್ನು ಕೈಗೊಂಡು, ಶತ್ರುಘ್ನನ ಬೆಂಗಾವಲಿನಲ್ಲಿ ಯಜ್ಞಾಶ್ವವನ್ನು ಕಳುಹಿಸಿದನು. ರಾಮನ ಆಜ್ಞೆಯಂತೆ ಹೊರಟ ಯಜ್ಞಾಶ್ವವನ್ನು ಭುಜಬಲ ಪರಾಕ್ರಮಿಗಳಾದ ರಾಜರುಗಳು ತಡೆಯಲು ಹೆದರಿ ನಮಸ್ಕರಿಸಿ ಮುಂದೆ ಹೋಗಲು ಬಿಟ್ಟರು. ಹೀಗೆ ಯಜ್ಞಾಶ್ವವು ಭೂಮಿಯಲ್ಲೆಲ್ಲ ಸಂಚರಿಸುತ್ತ ವಾಲ್ಮೀಕಿಯ ಆಶ್ರಮದ ತೋಟದ ಹಸುರಾದ ಹುಲ್ಲನ್ನು ತಿನ್ನಲು ಒಳಹೊಕ್ಕಿತು.

**35. ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ ಏನೆಂದು ಬರೆಯಲಾಗಿತ್ತು?**

**ಉ:** ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ “ಭೂಮಂಡಲದಲ್ಲಿ ಕೌಸಲ್ಯೆಯು ಮಗನಾದ ರಾಮನು ಒಬ್ಬನೇ ವೀರನು ಇದು ಅವನ ಯಜ್ಞಕುದುರೆ ಇದನ್ನು ತಡೆಯುವ ಸಾಮರ್ಥ್ಯವುಳ್ಳವರು ಯಾರೇ ಆದರು ತಡೆಯಲಿ” ಎಂದ ಬರೆಯಲಾಗಿತ್ತು.

**36. ಕುದುರೆಯನ್ನುಕಟ್ಟುವ ವಿಚಾರದಲ್ಲಿ ಮುನಿಸುತರಿಗೂ ಲವನಿಗೂ ನಡೆದ ಸಂವಾದವನ್ನು ಬರೆಯಿರಿ.**

**ಉ:** ಲವನು ಆಶ್ರಮವನ್ನು ಹೊಕ್ಕ ಯಜ್ಞಾಶ್ವವನ್ನು ತನ್ನ ಉತ್ತರೀಯದಿಂದ ಬಾಳೆಯ ಗಿಡಕ್ಕೆ ಕಟ್ಟಿ ಹಾಕಿದ್ದನ್ನು ಕಂಡು ಹೆದರಿದ ಮುನಿಸುತರು “ಬೇಡಬೇಡ ಅರಸುಗಳ ಕುದುರೆಯನ್ನು ಬಿಡು, ನಮ್ಮನ್ನು ಹೊಡೆಯವರು” ಎಂದು ಹೇಳಿದರು. ಆಗ ಲವನು

ನಗುತ "ಬ್ರಾಹ್ಮಣರ ಮಕ್ಕಳು ಹೆದರಿದರೆ. ಜಾನಕಿಯ ಮಗನು ಇದಕ್ಕೆ ಹೆದರುವನೇ, ನೀವು ಹೋಗಿ" ಎಂದು ಶೌರ್ಯದಿಂದ ಹೇಳಿದನು.

## ಪಠ್ಯಪೂರಕ ಅಧ್ಯಯನ

**1. ಜಾತಿ ವ್ಯವಸ್ಥೆಯ ಬಗ್ಗೆ ವಿವೇಕಾನಂದರ ಅಭಿಪ್ರಾಯವೇನು?**

**ಉತ್ತರ:** ಜಾತಿ ವ್ಯವಸ್ಥೆಯ ಬಗ್ಗೆ ವಿವೇಕಾನಂದರು – "ಜಾತಿ ಎಂಬುದು ಸಮಾಜದ ಒಂದು ಆಂತರಿಕ ಭಾಗವಾಗಿದೆ. ಹಿಂದೆ ಅದು ವಿಕಾಸವಾಗುತ್ತಿತ್ತು. ಈಗ ಅದು ಘನೀಭೂತವಾಗಿದೆ. ಅದರ ದುರ್ಗಂಧದಿಂದ ಭಾರತದ ವಾತಾವರಣವೆಲ್ಲ ತುಂಬಿದೆ" ಎಂದು ಅಭಿಪ್ರಾಯಪಟ್ಟಿದ್ದಾರೆ.

**2. ವಿವೇಕಾನಂದರು ಕೋಮುವಾದದ ಕಟ್ಟಾ ವಿರೋಧಿಯಾಗಿದ್ದರು, ಏಕೆ?**

**ಉತ್ತರ:** ಕೋಮುವಾದವು ಏಕಧರ್ಮ ಮತ್ತು ಏಕಸಂಸ್ಕೃತಿಯೇ ಶ್ರೇಷ್ಠವೆಂದೂ ಅದೇ ಅಂತಿಮವೆಂದೂ ನಂಬುತ್ತ ನಂಬಿಸುತ್ತ, ಪರಮಧರ್ಮ ದ್ವೇಷವನ್ನು ಬಿತ್ತಿ ಬೆಳೆಸುತ್ತದೆ. ಆದ್ದರಿಂದ ವಿವೇಕಾನಂದರು ಕೋಮುವಾದದ ಕಟ್ಟಾ ವಿರೋಧಿಯಾಗಿದ್ದರು.

**3. ವಿವೇಕಾನಂದರು ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ಹೇಳಿದ್ದೇನು?**

**ಉತ್ತರ:** ಚಿಕಾಗೊದ ಸರ್ವಧರ್ಮ ಸಮ್ಮೇಳನದಲ್ಲಿ ಮಾತನಾಡುತ್ತ ಅವರು "ಸ್ವಮತಾಭಿಮಾನ, ಅನ್ಯ ಮತದ್ವೇಷ ಮತ್ತು ಇವುಗಳಿಂದ ಉತ್ಪನ್ನವಾದ ಘೋರ ಧಾರ್ಮಿಕ ದುರಭಿಮಾನಗಳು ಈ ಸುಂದರ ಜಗತ್ತನ್ನು ಆವರಿಸಿಕೊಂಡಿವೆ. ಇಂತಹ ಉಗ್ರ ಧರ್ಮಾಂಧತೆಯ ದೈತ್ಯರಿಲ್ಲದೆ ಇದ್ದರೆ ಮಾನವ ಜನಾಂಗ ಇಂದಿಗಿಂತ ಎಷ್ಟೋ ಮುಂದುವರೆಯುತ್ತಿತ್ತು" ಎಂದು ಹೇಳಿದರು.

**4. ವಸಂತ ಮುಖ ತೋರಲಿಲ್ಲ– ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ?**

**ಉತ್ತರ:** ಮಾವಿನ ಮರಗಳು ಮೈತುಂಬಿ ನಿಂತಿವೆ. ಹಕ್ಕಿಗಳು ರೆಕ್ಕೆ ಬಿಚ್ಚಿ ಹಾರಾಡುತ್ತಿವೆ. ಕೋಗಿಲೆಗಳು ಮನದುಂಬಿ ಇಂಪಾಗಿ ಹಾಡುತ್ತಿವೆ. ಕಡಲು ಉಕ್ಕಿ ಹರಿಯುತ್ತಿದೆ. ಮಲ್ಲಿಗೆ ಹೂವು ಮುಗುಳುನಗೆ ಬೀರಿದೆ. ಹೊಳೆಯುವ ರಂಗೋಲಿಯಲ್ಲಿ ಬಾಲರವಿ ಥಳಥಳಿಸುತ್ತಿದ್ದಾನೆ. ಈ ರೀತಿ 'ವಸಂತ ಮುಖ ತೋರಲಿಲ್ಲ' ಕವನದಲ್ಲಿ ಪ್ರಕೃತಿಯ ಸಂಭ್ರಮ ವ್ಯಕ್ತವಾಗಿದೆ.

**5. ಬಾಲಕ ಭಗತ್‌ಸಿಂಗ್ ಊಟಮಾಡದೆ ಉಪವಾಸವಿದ್ದುದಕ್ಕೆ ಕಾರಣವೇನು?**

**ಉತ್ತರ:** ಏಪ್ರಿಲ್ 13, 1919 ರಂದು ಜಲಿಯನ್ ವಾಲಾಬಾಗ್ ಹತ್ಯಾಕಾಂಡದಲ್ಲಿ ಪ್ರಾಣ ಕಳೆದುಕೊಂಡಿದ್ದವರಿಗೆ ನಮನ ಸಲ್ಲಿಸಲು ಬಾಲಕ ಭಗತ್‌ಸಿಂಗ್ ಹೋಗಿದ್ದನು. ಆಗ ಅಲ್ಲಿದ್ದ ಸ್ವಲ್ಪ ಮಣ್ಣನ್ನು ತೆಗೆದುಕೊಂಡು ಹಣೆಗಿಟ್ಟುಕೊಂಡ. ಇನ್ನಷ್ಟನ್ನು ತನ್ನಲ್ಲಿದ್ದ ಡಬ್ಬಿಯಲ್ಲಿ ಶೇಖರಿಸಿಕೊಂಡು ಹಿಂತಿರುಗಿದ. ಜಲಿಯನ್ ವಾಲಾಬಾಗ್ ಘಟನೆ ಆತನ ಮನಸ್ಸಿನ ಮೇಲೆ ತೀವ್ರವಾದ ಪರಿಣಾಮ ಬೀರಿತ್ತು. ಆದ್ದರಿಂದ ಅವನ ಸಹೋದರಿ ರಾತ್ರಿ ಎಂದಿನಂತೆ ಊಟಕ್ಕೆಬ್ಬಿಸಿದಾಗ ಅವನು ಒಲ್ಲೆನೆಂದು ಮುಖ ತಿರುಗಿಸಿದ.

**6. ಭಗತ್‌ಸಿಂಗ್ ಮತ್ತು ಆತನ ಸಹಚರರಿಗೆ ಗಲ್ಲುಶಿಕ್ಷೆಯಾಗಲು ಕಾರಣವೇನು?**

**ಉತ್ತರ:** ಜಲಿಯನ್ ವಾಲಾಬಾಗಿನ ರಕ್ತಸಿಕ್ತವಾಗಿದ್ದ ಮಣ್ಣನ್ನು ನಿಧಿಯಂತೆ ಕಾಪಾಡಿಕೊಂಡು ಬಂದಿದ್ದ ಬಾಲಕ ಭಗತ್‌ಸಿಂಗ್ ಮುಂದೆ ತನ್ನ ಕ್ರಾಂತಿಕಾರಿ ಗುಂಪಿನ ಸಹಾಯದಿಂದ ಬ್ರಿಟಿಷ್ ಸರ್ಕಾರದ ವಿರುದ್ಧ ತನ್ನ ಸೇಡನ್ನು ತೀರಿಸಿಕೊಳ್ಳುತ್ತಾನೆ. ಇದರ ಫಲವಾಗಿ ಮರಣ ದಂಡನೆಗೆ ಈಡಾದನು.

**7. ವರ್ತಕನ ಮೂವರು ಹೆಣ್ಣು ಮಕ್ಕಳ ಸ್ವಭಾವ ಹೇಗಿತ್ತು?**

**ಉತ್ತರ:** ವರ್ತಕನ ಮೂವರು ಹೆಣ್ಣು ಮಕ್ಕಳಲ್ಲಿ ಹಿರಿಯರಾದ ಇಬ್ಬರು ಬಿಂಕ, ಬಡಿವಾರದ ಹುಡುಗಿಯರು. ಫ್ಯಾಷನ್, ಪಾರ್ಟಿ, ಗೆಳೆಯರೆಂದರೆ ಪಂಚಪ್ರಾಣ. ಆದರೆ ಮೂರನೆಯ ಹುಡುಗಿ ತಂದೆಯಷ್ಟೇ ಮೃದು ಸ್ವಭಾವದವಳಾಗಿದ್ದಳು. ಆಕೆಗೆ ತಂದೆಯ ನೆಮ್ಮದಿ ಮುಖ್ಯ. ರೂಪವತಿಯಾಗಿದ್ದ ಆಕೆಯನ್ನು ಎಲ್ಲರೂ ಸುಂದರಿ ಎಂದೇ ಕರೆಯುತ್ತಿದ್ದರು.

**8. ವರ್ತಕನು ಬಡವನಾಗಲು ಕಾರಣವೇನು?/**
**ವರ್ತಕನಿಗೆ ಹಣಕಾಸಿನ ತೊಂದರೆ ಉಂಟಾಗಲು ಕಾರಣವೇನು?/**
**ವರ್ತಕನು ಹಳ್ಳಿಗೆ ವಲಸೆ ಹೋಗಲು ಕಾರಣವೇನು?**

**ಉತ್ತರ:** ವರ್ತಕನ ವ್ಯಾಪಾರ ಕುಸಿದು ಬಿತ್ತು. ಬರಬೇಕಾಗಿದ್ದ ಹಣ ಬರಲಿಲ್ಲ. ಸರಕುಗಳನ್ನು ತರಲು ದೂರದ ದೇಶಕ್ಕೆ ಪ್ರಯಾಣಿಸಿದ್ದ ಹಡಗುಗಳು ಹಿಂದಿರುಗಲಿಲ್ಲ. ಅವನ ಸಾಲಗಳು ಅವನನ್ನು ಬಾಧಿಸತೊಡಗಿದವು. ಇದ್ದಬದ್ದ ಸ್ಥಿರಾಸ್ತಿ, ಚರಾಸ್ತಿಯನ್ನೆಲ್ಲ ಮಾರಿ ಸಾಲತೀರಿಸಿದನು. ಆದ್ದರಿಂದ ಬಡವನಾದ ಅವನು ತನ್ನ ಹೆಣ್ಣು ಮಕ್ಕಳನ್ನು ಕರೆದುಕೊಂಡು ಹೋಗಿ ಹಳ್ಳಿಯಲ್ಲಿ ನೆಲೆಸಿದನು.

**9. ವರ್ತಕನು ಹಡಗನ್ನು ಸ್ವಾಗತಿಸಲು ನಗರಕ್ಕೆ ಹೊರಟಾಗ ಮೂವರು ಹೆಣ್ಣು ಮಕ್ಕಳು ಏನೇನು ತರಲು ಹೇಳಿದರು?**

**ಉತ್ತರ:** ವರ್ತಕನು ಹಡಗನ್ನು ಸ್ವಾಗತಿಸಲು ನಗರಕ್ಕೆ ಹೊರಟಾಗ ಅವನ ಇಬ್ಬರು ಹಿರಿಯ ಹೆಣ್ಣು ಮಕ್ಕಳು ಬಟ್ಟೆ, ಒಡವೆ, ಅಲಂಕಾರದ ವಸ್ತುಗಳ ಪಟ್ಟಿ ನೀಡಿದರು. ಆದರೆ ಸುಂದರಿ ತನಗೊಂದು ಗುಲಾಬಿ ಹೂಗಳ ಗೊಂಚಲು ತರಬೇಕೆಂದು ಕೇಳಿಕೊಂಡಳು.

**10. ವರ್ತಕನು ನಿರ್ಜನ ಪ್ರದೇಶದಲ್ಲಿ ನೋಡಿದ ಅರಮನೆಯಲ್ಲಿ ಏನು ಮಾಡಿದನು?**

**ಉತ್ತರ:** ವರ್ತಕನು ಅಂಜಿಕೆಯಿಂದ ಅರಮನೆ ಪ್ರವೇಶಿಸಿದನು. ಆ ಅರಮನೆಯ ಒಂದು ಕೋಣೆಯಲ್ಲಿ ಭಕ್ಷ್ಯ ಭೋಜ್ಯಗಳನ್ನು ಇಡಲಾಗಿತ್ತು. ಹಸಿವೆ ತಾಳಲಾರದೆ ಉಂಡ. ಭೋಜನ ಸವಿದು ಹೊರಬಂದ. ಪುಷ್ಪವನದ ಗುಲಾಬಿಗಳನ್ನು ನೋಡಿದ. ತನ್ನ ಮಗಳು ಸುಂದರಿಗಾಗಿ ಒಂದು ಗೊಂಚಲು ಕಿತ್ತುಕೊಂಡ.

**ಹೊಲದಲ್ಲಿ ಹುಟ್ಟಿದ ಉತ್ತರಾಣಿ ಹಾಗೂ ಗರಿಕೆ ಕೊಡುವ ತೊಂದರೆಯನ್ನು ಒಗಟುಗಳು ಹೇಗೆ ವಿವರಿಸುತ್ತವೆ?**

**ಉತ್ತರ:** ಹೊಲದ ಬದುವಿನಲ್ಲಿ ಹುಟ್ಟುವ ಉತ್ತರಾಣಿ ಗಿಡದಲ್ಲಿ ಬೆಳೆಯುವ ಬೀಜಗಳು ಮುಳ್ಳಿನಂತಿದ್ದು ಆ ಗಿಡವಿರುವ ಬದುವಿನಲ್ಲಿ ನಡೆದುಕೊಂಡು ಹೋಗುವವರ ಅದರಲ್ಲೂ ಗ್ರಾಮೀಣ ಮಹಿಳೆಯರ ಸೀರೆಯ ಸೆರಗನ್ನು ಹಿಡಿದುಕೊಳ್ಳುತ್ತವೆ.

ರೈತನಿಗೆ ಬಹಳ ತೊಂದರೆ ಕೊಡುವ ಗರಿಕೆಯನ್ನು ಎಷ್ಟೇ ಉತ್ತರೂ ಹೊಲದಲ್ಲಿ ನಾಶಪಡಿಸಲು ಸಾಧ್ಯವಿಲ್ಲ; ಅದು ಮತ್ತೆ ಚಿಗುರಿಕೊಳ್ಳುತ್ತದೆ. ರೈತನ ಪ್ರಯತ್ನವನ್ನು ಕಂಡು 'ನಿನ್ನದು ವ್ಯರ್ಥ ಪ್ರಯತ್ನ. ನನ್ನನ್ನು ನಾಶಪಡಿಸಲು ನಿನ್ನಿಂದ ಸಾಧ್ಯವಿಲ್ಲ' ವೆಂಬಂತೆ ನಗುತ್ತದೆ ಎಂದು ಒಗಟಿನಲ್ಲಿ ಸ್ವಾರಸ್ಯಕರವಾಗಿ ಹೇಳಲಾಗಿದೆ.

**11. ಒಗಟುಗಳಿಂದ ಶೈಕ್ಷಣಿಕವಾಗಿ ಏನು ಲಾಭ?**

**ಉತ್ತರ:** ಜನಪದ ಒಗಟುಗಳು ಗ್ರಾಮೀಣ ಜನರ ಕಲ್ಪನಾ ಚಾತುರ್ಯಕ್ಕೆ ನಿದರ್ಶನವಾಗಿದ್ದು ಅವುಗಳ ಮೂಲಕ ವಿದ್ಯಾರ್ಥಿಗಳಲ್ಲಿ ಕಲ್ಪನಾಶೀಲತೆ, ಆಲೋಚನಾ ಶಕ್ತಿ ಹಾಗೂ ಸೃಜನಶೀಲತೆ ವೃದ್ಧಿಸುತ್ತದೆ. ಜನಪದ ಬೆಡಗಿನ ಒಗಟುಗಳಲ್ಲಿ ಪ್ರಶ್ನೆಗೆ ಉತ್ತರಿಸುವ ಮತ್ತು ಪದ್ಯದಲ್ಲಿಯೇ ಎದುರಾಳಿಗೆ ಮತ್ತೊಂದು ಒಗಟನ್ನು ಒಡ್ಡುವ ಕ್ರಮ ವೈಶಿಷ್ಟ್ಯಪೂರ್ಣವಾಗಿದ್ದು ಸ್ಪರ್ಧಾತ್ಮಕ ಮನೋಭಾವ ಬೆಳೆಸಲು ಸಹಕಾರಿಯಾಗಿದೆ. ವಿದ್ಯಾರ್ಥಿಗಳು ಹೆಚ್ಚು ಹೆಚ್ಚು ಒಗಟುಗಳನ್ನು ಬಿಡಿಸುವುದರಿಂದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಬುದ್ಧಿ ಕೌಶಲ ಬೆಳೆಯುತ್ತದೆ.

**12. ಬೀಸುವ ಕಲ್ಲನ್ನು ಕುರಿತ ಒಗಟನ್ನು ವಿವರಿಸಿರಿ.**

**ಉತ್ತರ:** ಬೀಸುವ ಕಲ್ಲಿನ ಮೇಲೆ ಮಧ್ಯಭಾಗದಲ್ಲಿರುವ ಬಾಯಿಗೆ ಧಾನ್ಯವನ್ನು ಹಾಕಲಾಗುತ್ತದೆ. ಬೀಸುತ್ತಿದ್ದಂತೆ ಅದು ಕಲ್ಲಿನ ಒಳಗೆ ಹೋಗುತ್ತದೆ. ಅದನ್ನೆ ಒಗಟಿನಲ್ಲಿ 'ಬಾಯಲ್ಲಿ ತಿಂಬೋದು' ಎನ್ನಲಾಗಿದೆ. ಹಾಗೆಯೇ ಅದರಲ್ಲಿ ಬೀಸುವಾಗ ಅದರ ಸುತ್ತ ಹಿಟ್ಟು ಚೆಲ್ಲುತ್ತದೆ, ಇದನ್ನೆ ಕುಕ್ಕುವುದು(ಕಕ್ಕುವುದು) ಎಂದು ಹೇಳಲಾಗಿದೆ.

# ಗದ್ಯ ಲೇಖಕರ ಪರಿಚಯ

| ಕ್ರಸಂ | ಗದ್ಯ ಘಟಕದ ಹೆಸರು | ಲೇಖಕರು | ಆಕರ ಕೃತಿ | ಕಾಲ | ಸ್ಥಳ | ಕೃತಿಗಳು | ಪ್ರಶಸ್ತಿ/ಬಿರುದುಗಳು |
|---|---|---|---|---|---|---|---|
| 1 | ಯುದ್ಧ | ಸಾ.ರಾ.ಅಬೂಬಕ್ಕರ್ | ಚಪ್ಪಲಿಗಳು | ಕ್ರಿ.ಶ.1936 | ಕಾಸರಗೋಡು | ಚಂದ್ರಗಿರಿಯ ತೀರದಲ್ಲಿ, ಖೆಡ್ಡಾ, ಸಹನಾ, ಕದನ ವಿರಾಮ, ಸುಳಿಯಲ್ಲಿ ಸಿಕ್ಕವರು | ನೃಪತುಂಗ ಪ್ರಶಸ್ತಿ |
| 2 | ಶಬರಿ | ಪು.ತಿ.ನರಸಿಂಹಾಚಾರ್ | ಶಬರಿ ಗೀತನಾಟಕ | ಕ್ರಿ.ಶ.1905 | ಮಂಡ್ಯ ಜಿಲ್ಲೆ ಮೇಲುಕೋಟೆ | ಅಹಲ್ಯೆ, ಗೋಕುಲ ನಿರ್ಗಮನ, ಶಬರಿ, ವಿಕಟಕವಿ ವಿಜಯ, ರಸಸರಸ್ವತಿ, ಶ್ರೀಹರಿಚರಿತೆ | ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪ ಪ್ರಶಸ್ತಿ |
| 3 | ಲಂಡನ್ ನಗರ | ವಿ.ಕೃ.ಗೋಕಾಕ | ಸಮುದ್ರದಾಚೆಯಿಂದ | ಕ್ರಿ.ಶ.1909 | ಹಾವೇರಿ ಜಿಲ್ಲೆಯ ಸವಣೂರು | ಸಮುದ್ರಗೀತೆಗಳು, ಪಯಣ, ಉಗಮ, ಇಜ್ಜೋಡು, ಸಮರಸವೇ ಜೀವನ, ಭಾರ ಸಿಂಧುರಶ್ಮಿ | ಜ್ಞಾನಪೀಠ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ |
| 4 | ಭಾಗ್ಯಶಿಲ್ಪಿಗಳು | ಡಿ.ಎಸ್.ಜಯಪ್ಪಗೌಡ | ದಿವಾನ್ ಸರ್.ಎಂ.ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು | ಕ್ರಿ.ಶ.1947 | ಮೂಡಿಗೆರೆ ತಾಲ್ಲೂಕಿನ ದಾರದಹಳ್ಳಿ | ಕರ್ನಾಟಕ ಗ್ರಾಮೀಣ ಸಂಸ್ಥೆಗಳು, ಕರ್ನಾಟಕದ ಕಡಲಾಚೆಯ ಸಂಪರ್ಕಗಳು, ಜನಪದ ಆಟಗಳು | ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ |
| 5 | ಎದೆಗೆ ಬಿದ್ದ ಅಕ್ಷರ | ದೇವನೂರ ಮಹಾದೇವ | ಎದೆಗೆ ಬಿದ್ದ ಅಕ್ಷರ | ಕ್ರಿ.ಶ.1949 | ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ದೇವನೂರು | ದ್ಯಾವನೂರು, ಒಡಲಾಳ, ಕುಸುಮಬಾಲೆ, ಗಾಂಧಿ ಮತ್ತು ಮಾವೋ, ನಂಬಿಕೆಯ ನೆಂಟ, ನೋಡು ಮತ್ತು ಕೂಡು | ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ |
| 6 | ವ್ಯಾಘ್ರಗೀತೆ | ಎ.ಎನ್.ಮೂರ್ತಿರಾವ್ | ಸಮಗ್ರ ಲಲಿತ ಪ್ರಬಂಧಗಳು | ಕ್ರಿ.ಶ.1900 | ಮಂಡ್ಯ ಜಿ. ಕೆ.ಆರ್.ಪೇಟೆ ತಾ. ಅಕ್ಕಿಹೆಬ್ಬಾಳು | ಹಗಲುಗನಸುಗಳು, ಅಲೆಯುವ ಮನ, ಅಪರವಯಸ್ಕನ ಅಮೇರಿಕಾ ಯಾತ್ರೆ, ಮಿನುಗು–ಮಿಂಚು | ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪ ಪ್ರಶಸ್ತಿ |
| 7 | ವೃಕ್ಷಸಾಕ್ಷಿ | ದುರ್ಗಸಿಂಹ | ಕರ್ಣಾಟಕ ಪಂಚತಂತ್ರ | ಕ್ರಿ.ಶ.1031 | ಕಿಸುಕಾಡು ನಾಡಿನ ಸೈಯಡಿ | ಕರ್ಣಾಟಕ ಪಂಚತಂತ್ರ | |
| 8 | ಸುಕುಮಾರಸ್ವಾಮಿ ಸ್ವಾಮಿ ಕತೆ | ಶಿವಕೋಟ್ಯಾಚಾರ್ಯ | ವಡ್ಡಾರಾಧನೆ | 10ನೇ ಶತಮಾನ | ಬಳ್ಳಾರಿ ಜಿಲ್ಲೆಯ ಹೂವಿನಹಡಗಲಿ ತಾ ಕೋಗಳಿನಾಡು | ವಡ್ಡಾರಾಧನೆ, ಜೈನ ಮುನಿಗಳ ಕುರಿತಾದ 19 ಕತೆಗಳ ಗುಚ್ಛ, | |

# ಪದ್ಯಕವಿಗಳ ಪರಿಚಯ

| ಕ್ರಸಂ | ಪದ್ಯ ಘಟಕದ ಹೆಸರು | ಲೇಖಕರು | ಆಕರ ಕೃತಿ | ಕಾಲ | ಸ್ಥಳ | ಕೃತಿಗಳು | ಪ್ರಶಸ್ತಿ/ಬಿರುದುಗಳು |
|---|---|---|---|---|---|---|---|
| 1 | ಸಂಕಲ್ಪಗೀತೆ | ಜಿ.ಎಸ್.ಶಿವರುದ್ರಪ್ಪ | ಎದೆ ತುಂಬಿ ಹಾಡಿದೆನು | ಕ್ರಿ.ಶ.1926 | ಶಿವಮೊಗ್ಗ ಜಿ. ಶಿಕಾರಿಪುರ | ಸಾಮಗಾನ, ಚೆಲುವು–ಒಲವು, ದೇವಶಿಲ್ಪ, ದೀಪದ ಹೆಜ್ಜೆ, ಅನಾವರಣ, ಸೌಂದರ್ಯ ಸಮೀಕ್ಷೆ | ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪ ಪ್ರಶಸ್ತಿ, ರಾಷ್ಟ್ರಕವಿ |
| 2 | ಹಕ್ಕಿ ಹಾರುತಿದೆ ನೋಡಿದಿರಾ | ದ.ರಾ.ಬೇಂದ್ರೆ | ಗರಿ | ಕ್ರಿ.ಶ.1896 | ಧಾರವಾಡ | ಗರಿ, ಕೃಷ್ಣಕುಮಾರಿ, ಉಯ್ಯಾಲೆ, ಸಖೀಗೀತ, ನಾದಲೀಲೆ, ಮೇಘದೂತ, ಗಂಗಾವತರಣ, ಅರಳುಮರಳು | ಜ್ಞಾನಪೀಠ ಪ್ರಶಸ್ತಿ, ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿ |
| 3 | ಹಲಗಲಿ ಬೇಡರು | ಜನಪದ ಗೀತೆ/ ಬಿ.ಎಸ್.ಗದ್ದಗೀಮಠ | ಜನಪದ ಗೀತಾಂಜಲಿ | | | | |
| 4 | ಕೌರವೇಂದ್ರನ ಕೊಂದೆ ನೀನು | ಕುಮಾರವ್ಯಾಸ | ಕರ್ಣಾಟ ಭಾರತ ಕಥಾಮಂಜರಿ | ಕ್ರಿ.ಶ.1430 | ಗದಗ ಪ್ರಾಂತ್ಯದ ಕೋಳಿವಾಡ | ಕರ್ಣಾಟ ಭಾರತ ಕಥಾಮಂಜರಿ | ರೂಪಕ ಸಾಮ್ರಾಜ್ಯ ಚಕ್ರವರ್ತಿ ಬಿರುದು |
| 5 | ಹಸುರು | ಕುವೆಂಪು | ಪಕ್ಷಿಕಾಶಿ | ಕ್ರಿ.ಶ.1904 | ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾ. ಕುಪ್ಪಳ್ಳಿ | ಕೊಳಲು, ಪಾಂಚಜನ್ಯ, ಪ್ರೇಮಕಾಶ್ಮೀರ, ಪಕ್ಷಿಕಾಶಿ, ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು, ಶ್ರೀ ರಾಮಾಯಣ ದರ್ಶನಂ | ಜ್ಞಾನಪೀಠ ಪ್ರಶಸ್ತಿ, ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪದ್ಮಶ್ರೀ, ಪದ್ಮಭೂಷಣ, ಕರ್ನಾಟಕ ರತ್ನ |
| 6 | ಛಲಮನೆ ಮೆಱೆವೆಂ | ರನ್ನ | ಸಾಹಸ ಭೀಮ ವಿಜಯಂ | ಕ್ರಿ.ಶ.949 | ಬಾಗಲಕೋಟೆ ಜಿ. ಮುಧೋಳ/ಮುದುವೊಳಲು | ಸಾಹಸ ಭೀಮ ವಿಜಯಂ, ಅಜಿತ ತೀರ್ಥಂಕರ ಪುರಾಣ ತಿಲಕಂ, ಚಕ್ರೇಶ್ವರ ಚರಿತೆ, ಪರಶುರಾಮ ಚರಿತೆ, ರನ್ನ ಕಂದ | ಕವಿ ಚಕ್ರವರ್ತಿ |
| 7 | ವೀರಲವ | ಲಕ್ಷ್ಮೀಶ | ಜೈಮಿನಿ ಭಾರತ | ಕ್ರಿ.ಶ.1550 | ಚಿಕ್ಕಮಗಳೂರು ಜಿ. ಕಡೂರು ತಾ. ದೇವನೂರು | ಜೈಮಿನಿ ಭಾರತ | ಉಪಮಾಲೋಲ, ಕರ್ನಾಟ ಕವಿಚೂತವನ ಚೈತ್ರ |
| 8 | ಕೆಮ್ಮನೆ ಮೀಸೆವೊತ್ತೆನೇ | ಪಂಪ | ವಿಕ್ರಮಾರ್ಜುನ ವಿಜಯಂ | ಕ್ರಿ.ಶ.941 | ವೆಂಗಿಮಂಡಲ ಪ್ರಾಂತ್ಯದ ವೆಂಗಿಪಳು ಅಗ್ರಹಾರ | ಆದಿಪುರಾಣ, ವಿಕ್ರಮಾರ್ಜುನ ವಿಜಯಂ | ಸರಸ್ವತೀ ಮಣಿಹಾರ, ಸಂಸಾರ ಸಾರೋದಯ, ಕವಿತಾ ಗುಣಾರ್ಣವ |

# : ಛಂದಸ್ಸು :

**ಪರೀಕ್ಷಾ ದೃಷ್ಟಿಯಿಂದ ಛಂದಸ್ಸನ್ನು ಗುರುತಿಸುವ ಸಾಮಾನ್ಯ ನಿಯಮಗಳು**

**ಕಂದಪದ್ಯ :**

- ಎರಡು ಸಾಲುಗಳನ್ನು ನೀಡಲಾಗಿರುತ್ತದೆ. ಒಂದು ಚಿಕ್ಕ ಸಾಲು ಮತ್ತೊಂದು ದೊಡ್ಡ ಸಾಲಾಗಿರುತ್ತದೆ.

**ಉದಾ :** **1.**

UUUU | U U – | U U – |<br>
ಅತಿಕುಟ | ಲಮನಂ | ಧನಲು |

U U – | – – | U – U | U U – | U U – |<br>
ಬ್ದತೆಯಿಂ | ದಂದು | ಷ್ಟಬುದ್ಧಿ | ನುಡಿದಂ | ಪುಸಿಯಂ |

**2.**

– – | U – U | U U U U |<br>
ನೀನು | ಚ್ಛೊಡೆಲ್ಲ | ರೊಳರೆಮ |

– U U | – U U | U – U | – UU | UU – |<br>
ಗೇನುಮ | ಟಿಲ್‌ಮನ | ದೊಳಿಲ್ಲ | ದೆಂತೆನೆ | ಮಗನೇ |

**ಷಟ್ಪದಿ :**

- ಮೂರು ಸಾಲುಗಳನ್ನು ನೀಡಲಾಗಿರುತ್ತದೆ. ಒಂದನೆಯ ಹಾಗೂ ಎರಡನೆಯ ಸಾಲುಗಳು ಸಮನಾಗಿರುತ್ತವೆ. ಮೂರನೆಯ ಸಾಲು ದೊಡ್ಡದಾಗಿರುತ್ತದೆ.

**ಭಾಮಿನಿ ಷಟ್ಪದಿ :**

**ಉದಾ :**

– U | – – | – U | – – |<br>
ಏನು | ಹೇಳ್ಳೈ | ಕರ್ಣ | ಚಿತ್ತ | – 14

– U | – U U | U U U | – – |<br>
ಗ್ಲಾನಿ | ಯಾವುದು | ಮನಕೆ | ಕುಂತೀ | – 14

– U | UUUU | – U | – U U | – U | – UU | –<br>
ಸೂನು | ಗಳಬೆಸೆ | ಕೈಸಿ | ಕೊಂಬುದು | ಸೇರ | ದೇನಿನ | ಗೆ – 23

51 ಮಾತ್ರೆಗಳು

**ವಾರ್ಧಕ ಷಟ್ಪದಿ :**

– U – | – – U | UUUUU | – – U |<br>
**ಉರ್ವಿಯೊಳ್ | ಕೌಸಲ್ಯೆ | ಪಡೆದಕುವ | ರಂರಾಮ |** **20**

– U – | – U – | UU – U | UUUUU |<br>
**ನೊರ್ವನೇ | ವೀರನಾ | ತನ ಯಜ್ಞ | ತುರಗಮಿದು |** **20**

– UUU | – U – | – U – | UUU – | – U – | UUU – | –<br>
**ನಿರ್ವಹಿಸ | ಲಾರ್ಪರಾ | ರಾದೊಡಂ | ತಡೆಯಲೆಂ | ದಿರ್ದಲೇ | ಖನವನೋ | ದಿ** **32**

**72 ಮಾತ್ರೆಗಳು**

➢ **ಅಕ್ಷರಗಣಕ್ಕೊಳಪಡುವ ಪದ್ಯಗಳು :**

ಪದ್ಯದ ಪ್ರತಿಪಾದದಲ್ಲಿರುವ ಅಕ್ಷರಗಳನ್ನು ಮೂರು ಮೂರು ಅಕ್ಷರಗಳ ಒಂದೊಂದು ಗುಂಪಾಗಿ ವಿಂಗಡಿಸುವುದನ್ನು **'ಅಕ್ಷರ ಗಣ'** ಎನ್ನುವರು. ಅಕ್ಷರ ಗಣದಲ್ಲಿ **8** ವಿಧದ ಗಣಗಳಿವೆ.

**'ಯಮಾತಾರಾಜಭಾನಸಲಗಂ' –** ಸೂತ್ರದ ಆಧಾರದಿಂದ ಹೀಗೆ ವಿಂಗಡಿಸಲಾಗಿದೆ.

| | | | | | |
|---|---|---|---|---|---|
| 1. ಯಗಣ | = ಯಮಾತಾ | = U – – | 2. ಮಗಣ | = ಮಾತಾರಾ | = – – – |
| 3. ತಗಣ | = ತಾರಾಜ | = – – U | 4. ರಗಣ | = ರಾಜಭಾ | = – U – |
| 5. ಜಗಣ | = ಜಭಾನ | = U – U | 6. ಭಗಣ | = ಭಾನಸ | = – U U |
| 7. ನಗಣ | = ನಸಲ | = U U U | 8. ಸಗಣ | = ಸಲಗಂ | = U U – |
| ಲ | = ಲಘು | = U | ಗಂ | = ಗುರು | = – |

ನಾಗವರ್ಮನು ಛಂದೋಂಬುಧಿಯಲ್ಲಿ ಅಕ್ಷರ ಗಣದ **8** ಗಣಗಳನ್ನು ಗುರುತಿಸಲು ಕೆಳಗಿನ ಪದ್ಯವನ್ನು ರಚಿಸಿದ್ದಾನೆ.

ಗುರು ಲಘು ಮೂರಿರೆ **ಮ – ನ** –ಗಣ<br>
ಗುರು ಲಘು ಮೊದಲಲ್ಲಿ ಬರಲು **ಭ –ಯ –ಗಣಮೆಂಬರ್**<br>
ಗುರು ಲಘು ನಡುವಿರೆ **ಜ –ರ ಗಣ**<br>
ಗುರು ಲಘು ಕೊನೆಚುಲ್ಲಿ ಬರಲು **ಸ –ತ –ಗಣಮಕ್ಕುಂ**

1. ಗುರು ಮೂರಿರೆ **ಮಗಣ**
2. ಲಘು ಮೂರಿರೆ **ನಗಣ**
3. ಗುರು ಮೊದಲಲ್ಲಿ ಬರಲು **ಭಗಣ**
4. ಲಘು ಮೊದಲಲ್ಲಿ ಬರಲು **ಯಗಣ**
5. ಗುರು ನಡುವಿರೆ **ಜಗಣ**
6. ಲಘು ನಡುವಿರೆ **ರಗಣ**
7. ಗುರು ಕೊನೆಯಲ್ಲಿ ಬರಲು **ಸಗಣ**
8. ಲಘು ಕೊನೆಯಲ್ಲಿ ಬರಲು **ತಗಣ**

- **ಖ್ಯಾತ ಕರ್ನಾಟಕ ವೃತ್ತ ಪದ್ಯಗಳು**

ನಾಗವರ್ಮನು ಛಂದೋಂಬುಧಿಯಲ್ಲಿ ಖ್ಯಾತ ಕರ್ನಾಟಕ ವೃತ್ತ ಪದ್ಯಗಳ ಲಕ್ಷಣವನ್ನು ತಿಳಿಸಲು ಕೆಳಗಿನ ಪದ್ಯವನ್ನು ರಚಿಸಿದ್ದಾನೆ.

**ಗುರುವೊಂದಾದಿಯೊಳುತ್ಪಲಂ ಗುರು ಮೊದಲ್ ಮೂರಾಗೆ ಶಾರ್ದೂಲಮಾ**
**ಗುರುನಾಲ್ಕಾಗಿರಲಂತು ಸ್ರಗ್ಧರೆ ಲಘು ದ್ವಂದ್ವಂ ಗುರು ದ್ವಂದ್ವಮಾ**
**ಗಿರೆ ಮತ್ತೇಭ ಲಘು ದ್ವಯ ತ್ರಿಗುರುವಿಂದಕ್ಕುಂ ಮಹಾಸ್ರಗ್ಧರಾ**
**ಹರಿಣಾಕ್ಷೀ, ಲಘುನಾಲ್ಕು ಚಂಪಕಮಿವಾರುಂ ಖ್ಯಾತ ಕರ್ನಾಟಕಂ** – ಈ ಸೂತ್ರದಿಂದ ಸುಲಭವಾಗಿ ಗುರುತಿಸಬಹುದಾಗಿದೆ.

- **ಮತ್ತೇಭವಿಕ್ರೀಡಿತ ವೃತ್ತ :**
  ಮತ್ತೇಭವಿಕ್ರೀಢಿತ ಪದ್ಯದಲ್ಲಿ ಒಟ್ಟು 20 ಅಕ್ಷರಗಳಿರುತ್ತವೆ. ಮೂರು ಅಕ್ಷರದ ಆರು ಗಣಗಳು ಒಂದು ಲಘು, ಒಂದು ಗುರು ಬರುತ್ತದೆ. ಗಣ ವಿನ್ಯಾಸದ ಲಕ್ಷಣ ಸಮೇತ ಈ ಕೆಳಗಿನಂತೆ ವಿವರಿಸಿದೆ.

| ಸ | ಭ | ರ | ನ | ಮ | ಯ | ಲ ಗಂ |
|---|---|---|---|---|---|---|
| U U – | – U U | – U – | U U U | – – – | U – – | U – |
| **ಎನಗಂ** | **ಪಾಂಡುಗ** | **ಮಿಲ್ಲಭೇ** | **ದಮಿಳೆ** | **ಯಂಪಚ್ಚಾ** | **ಳ್ವಮಾಪಾಂ** | **ಡುನಂ** |

ಈ ಮೇಲಿನ ಪದ್ಯವು **' ಸ ಭ ರ ನ ಮ ಯ '** ಆರು ಅಕ್ಷರಗಣಗಳನ್ನು ಹಾಗೂ ಒಂದು ಲಘು, ಒಂದು ಗುರುವನ್ನು ಹೊಂದಿರುವುದರಿಂದ ಇದು **ಮತ್ತೇಭವಿಕ್ರೀಡಿತ** ವೃತ್ತ ಪದ್ಯವಾಗಿದೆ.

- **ಶಾರ್ದೂಲ ವಿಕ್ರೀಡಿತ ವೃತ್ತ**
  ಶಾರ್ದೂಲ ವಿಕ್ರೀಡಿತ ವೃತ್ತದಲ್ಲಿ ಒಂದು ಪಾದದಲ್ಲಿ 19 ಅಕ್ಷರಗಳಿರುತ್ತವೆ. ಪ್ರತಿ ಸಾಲಿನಲ್ಲಿ ಮೂರು ಅಕ್ಷರಗಳ ಆರುಗಣಗಳು ಬಂದು ಒಂದು ಗುರು ಬರುತ್ತದೆ. **'ಮ, ಸ, ಜ, ಸ, ತ, ತ ಗಣಗಳು ಹಾಗೂ 1 ಗುರು'** ಬರುತ್ತವೆ.

| ಮ | ಸ | ಜ | ಸ | ತ | ತ | ಗು |
|---|---|---|---|---|---|---|
| – – – | UU – | U – U | UU – | – – U | – – U | – |
| ಮಾತಂಗಾ | ಸುರವೈ | ರಿಯಲ್ಲಿ | ಪಡೆದುಂ | ಬಿಲ್ಲಂಥ | ನುರ್ವಿದ್ಯೆ | ಗಂ |

- **ಚಂಪಕಮಾಲಾ ವೃತ್ತ :**
  ಚಂಪಕಮಾಲಾವೃತ್ತದಲ್ಲಿ ಒಟ್ಟು 21 ಅಕ್ಷರಗಳಿರುತ್ತವೆ. ಮೂರು ಅಕ್ಷರದ ಏಳು ಗಣಗಳು ಬರುತ್ತದೆ. ಗಣ ವಿನ್ಯಾಸದ ಲಕ್ಷಣ ಸಮೇತ ಈ ಕೆಳಗಿನಂತೆ ವಿವರಿಸಿದೆ.

| ನ | ಜ | ಭ | ಜ | ಜ | ಜ | ರ |
|---|---|---|---|---|---|---|
| U UU | U – U | – UU | U –U | U – U | U – U | – U – |
| **ಕುರುಕು** | **ಳನಂದ** | **ನಂಪವ** | **ನನಂದ** | **ನನೆಂಬ** | **ಮದಾಂಧ** | **ಗಂಧಸಿಂ** |

ಈ ಮೇಲಿನ ಪದ್ಯವು **' ನ ಜ ಭ ಜ ಜ ಜ ರ '** ಏಳು ಅಕ್ಷರಗಣಗಳನ್ನು ಹೊಂದಿರುವ್ಯದರಿಂದ ಇದು **ಮತ್ತೇಭವಿಕ್ರೀಡಿತ** ವೃತ್ತ ಪದ್ಯವಾಗಿದೆ.

- **ಉತ್ಪಲಾಮಾಲಾ ವೃತ್ತ :**
  ಉತ್ಪಲಾಮಾಲಾ ವೃತ್ತದಲ್ಲಿ ಒಟ್ಟು 20 ಅಕ್ಷರಗಳಿರುತ್ತವೆ. ಮೂರು ಅಕ್ಷರದ ಆರು ಗಣಗಳು ಒಂದು ಲಘು, ಒಂದು ಗುರು ಬರುತ್ತದೆ. ಗಣ ವಿನ್ಯಾಸದ ಲಕ್ಷಣ ಸಮೇತ ಈ ಕೆಳಗಿನಂತೆ ವಿವರಿಸಿದೆ.

| ಭ | ರ | ನ | ಭ | ಭ | ರ | ಲ ಗಂ |
|---|---|---|---|---|---|---|
| – U U | – U U | U U U | – U U | – U U | – U – | U – |
| **ಮೇದಿನಿ** | **ಯಂಕ್ರಮ** | **ಕ್ರಮದೆ** | **ಪರ್ವಿದು** | **ದಾತ್ತನ** | **ಭೋವಿಭಾ** | **ಗಮಾ** |

ಈ ಮೇಲಿನ ಪದ್ಯವು **'ಭ ರ ನ ಭ ಭ ರ '** ಆರು ಅಕ್ಷರಗಣಗಳನ್ನು ಹಾಗೂ ಒಂದು ಲಘು, ಒಂದು ಗುರುವನ್ನುಹೊಂದಿರುವುದರಿಂದ ಇದು **ಉತ್ಪಲಾಮಾಲಾ** ವೃತ್ತ ಪದ್ಯವಾಗಿದೆ.

- **ಸ್ರಗ್ದರಾ ವೃತ್ತ:** ಸ್ರಗ್ದರಾವೃತ್ತ ವೃತ್ತದಲ್ಲಿ ಒಟ್ಟು 21 ಅಕ್ಷರಗಳಿರುತ್ತವೆ. ಮೂರು ಅಕ್ಷರದ ಏಳು ಗಣಗಳು ಬರುತ್ತದೆ. ಗಣ ವಿನ್ಯಾಸದ ಲಕ್ಷಣ ಸಮೇತ ಈ ಕೆಳಗಿನಂತೆ ವಿವರಿಸಿದೆ.

| ಮ | ರ | ಭ | ನ | ಯ | ಯ | ಯ |
|---|---|---|---|---|---|---|
| – – – | – U – | – U U | U U U | U – – | U – – | U – – |
| **ಸೂಳೈಸೆ** | **ಚ್ಚೆಚ್ಚುಬಿ** | **ಲ್ಲಂರಥ** | **ದಕುದು** | **ರೆಯಂಸೂ** | **ತನಂಖಂ** | **ಡಿಸುತ್ತಾ** |

ಈ ಮೇಲಿನ ಪದ್ಯವು **'ಮ,ರ,ಭ,ನ,ಯ,ಯ,ಯ'** ಆರು ಅಕ್ಷರಗಣಗಳನ್ನು ಹೊಂದಿರುವುದರಿಂದ ಇದು **ಸ್ರಗ್ದರಾವೃತ್ತ** ಪದ್ಯವಾಗಿದೆ.

- **ಮಹಾಸ್ರಗ್ದರಾ ವೃತ್ತ:** ಸ್ರಗ್ದರಾವೃತ್ತ ವೃತ್ತದಲ್ಲಿ ಒಟ್ಟು 21 ಅಕ್ಷರಗಳಿರುತ್ತವೆ. ಮೂರು ಅಕ್ಷರದ ಏಳು ಗಣಗಳು ಬರುತ್ತದೆ. ಗಣ ವಿನ್ಯಾಸದ ಲಕ್ಷಣ ಸಮೇತ ಈ ಕೆಳಗಿನಂತೆ ವಿವರಿಸಿದೆ. ಈ ವೃತ್ತವು **'ಸ, ತ, ತ, ನ, ಸ, ರ, ರ ಗಣಗಳು ಬಂದು ಒಂದು ಗುರು,** ಬರುತ್ತದೆ.

| ಸ | ತ | ತ | ನ | ಸ | ರ | ರ | ಗು |
|---|---|---|---|---|---|---|---|
| U U – | – – U | – – U | U U U | U U – | – U – | – U – | – |
| **ಇದು ಚ** | **ಕ್ರ ವ್ಯೂಹ** | **ಮೀವ್ಯೂಹ** | **ಮನೊಡೆ** | **ವದಟಂ** | **ಪಾರ್ಥನಂ** | **ತಾತನುಂ** | **ಗೆಂ** |

# ಅಲಂಕಾರಗಳು

ಕಾವ್ಯಕ್ಕೆ ಶೋಭೆ ತರುವ ಧರ್ಮವೇ ಅಲಂಕಾರ. ಮಾತಿನ ಅಥವಾ ಕಾವ್ಯದ ಸೌಂದರ್ಯವನ್ನು ಹೆಚ್ಚಿಸುವ ಸಲುವಾಗಿ ಬಳಸುವ ಶಬ್ದ ಹಾಗೂ ಅರ್ಥ ಚಮತ್ಕಾರಗಳನ್ನು "ಅಲಂಕಾರ" ಎನ್ನುವರು.

ಅಲಂಕಾರದಲ್ಲಿ ಶಬ್ದಾಲಂಕಾರ ಮತ್ತು ಅರ್ಥಾಲಂಕಾರಗಳೆಂದು ಎರಡು ವಿಧಗಳಿವೆ.

**ಶಬ್ದಾಲಂಕಾರಗಳು**

ಮಾತಿನ ಅಥವಾ ಕಾವ್ಯದ ಸೌಂದರ್ಯವು ಶಬ್ದ ಅಥವಾ ಅಕ್ಷರಗಳ ಜೋಡಣೆಯ ಚಮತ್ಕಾರದಿಂದ ಹೆಚ್ಚಿದರೆ ಅದನ್ನು "ಶಬ್ದಾಲಂಕಾರ" ಎನ್ನುವರು. ಶಬ್ದಾಲಂಕಾರದಲ್ಲಿ ಮೂರು ವಿಧಗಳಿವೆ. **1. ಅನುಪ್ರಾಸ 2. ಯಮಕ 3.ಚಿತ್ರ ಕವಿತ್ವ.**

ಮಾತಿನ ಅಥವಾ ಕಾವ್ಯದ ಸೌಂದರ್ಯವು ಅಕ್ಷರಗಳ ಪುನರಾವರ್ತನೆಯಿಂದ ಹೆಚ್ಚಿದರೆ ಅದನ್ನು "ಅನುಪ್ರಾಸ" ಎನ್ನುವರು. ಅನುಪ್ರಾಸದಲ್ಲಿ ವೃತ್ತ್ಯನುಪ್ರಾಸ ಮತ್ತು ಛೇಕಾನುಪ್ರಾಸ ಎಂದು ಎರಡು ವಿಧಗಳಿವೆ.

ಮಾತಿನ ಅಥವಾ ಕಾವ್ಯದ ಸೌಂದರ್ಯವು ಒಂದು ಅಥವಾ ಎರಡು ಅಕ್ಷರಗಳು ಪ್ರತಿಪಾದದಲ್ಲಿ ಪುನರಾವರ್ತನೆ ಆಗುವುದರಿಂದ" ಹೆಚ್ಚಿದರೆ ಅದನ್ನು "ವೃತ್ತ್ಯನುಪ್ರಾಸ" ಎನ್ನುವರು.

ಮಾತಿನ ಅಥವಾ ಕಾವ್ಯದ ಸೌಂದರ್ಯವು ಎರಡು ಅಕ್ಷರಗಳಿಂದ ಕೂಡಿದ ಪದಗಳು ಪ್ರತಿ ಪಾದದಲ್ಲಿಯೂ ಪುನರಾವರ್ತನೆ ಆಗುವುದರಿಂದ ಹೆಚ್ಚಿದರೆ ಅದನ್ನು "ಛೇಕಾನುಪ್ರಾಸ" ಎನ್ನುವರು.

ಮಾತಿನ ಅಥವಾ ಕಾವ್ಯದ ಸೌಂದರ್ಯವು ಮೂರು ಅಥವಾ ಅದಕ್ಕಿಂತ ಹೆಚ್ಚು ಅಕ್ಷರಗಳಿಂದ ಕೂಡಿದ ಪದಗಳು ಅಥವಾ ಪದಭಾಗ ಪ್ರತಿ ಪಾದದಲ್ಲಿಯೂ ಆದಿ / ಮಧ್ಯ / ಅಂತ್ಯದಲ್ಲಿ ನಿಯತವಾಗಿ ಪುನರಾವರ್ತನೆಯಾಗುವುದರಿಂದ ಹೆಚ್ಚಿದರೆ ಅದನ್ನು "ಯಮಕಾಲಂಕಾರ" ಎನ್ನುವರು.

ಮಾತಿನ ಅಥವಾ ಕಾವ್ಯದ ಸೌಂದರ್ಯವು ಅಕ್ಷರಗಳ ಅಥವಾ ಪದಗಳ ವಿಶಿಷ್ಟವಾದ ಬಳಕೆಯ ಮೂಲಕಹೆಚ್ಚಿದರೆ ಅದನ್ನು "ಚಿತ್ರ ಕವಿತ್ವ" ಎನ್ನುವರು. ಇದರಲ್ಲಿ ನಿರೋಷ್ಟ್ಯ, ತಾಲವ್ಯ, ಏಕಾಕ್ಷರ, ದ್ವ್ಯಕ್ಷರ, ತ್ರ್ಯಕ್ಷರ, ಹಾರಬಂಧ, ಮುರಜಬಂದ ಇತ್ಯಾದಿ ಪ್ರಕಾರಗಳಿವೆ.

## ಅರ್ಥಾಲಂಕಾರಗಳು

ಮಾತಿನ ಅಥವಾ ಕಾವ್ಯ ಸೌಂದರ್ಯವು ಪದಗಳ ಅರ್ಥ ಚಮತ್ಕಾರದಿಂದ ಹೆಚ್ಚಿದರೆಅದನ್ನು "ಅರ್ಥಾಲಂಕಾರ" ಎನ್ನುವರು.

ಎರಡು ವಸ್ತುಗಳಿಗಿರುವ (ಉಪಮೇಯ ಮತ್ತು ಉಪಮಾನಗಳಿಗಿರುವ) ಪರಸ್ಪರ ಸಾದೃಶ್ಯ ಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದನ್ನು **"ಉಪಮಾಲಂಕಾರ"** ಎನ್ನುವರು.

ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡುಬರದೆ ಅವೆರಡೂ ಒಂದೇ ಎಂದು ವರ್ಣಿಸಿದರೆ ಅದನ್ನು **"ರೂಪಕಾಲಂಕಾರ"** ಎನ್ನುವರು.

ಎರಡು ಬೇರೆ ಬೇರೆ ವಾಕ್ಯಗಳು (ಉಪಮೇಯ, ಉಪಮಾನ) ಅರ್ಥ ಸಾದೃಶ್ಯದಿಂದ ಒಂದಕ್ಕೊಂದು ಬಿಂಬ ಪ್ರತಿಬಿಂಬ ಭಾವದಂತೆ ತೋರುತ್ತಿದ್ದರೆ ಅದನ್ನು **"ದೃಷ್ಟಾಂತಾಲಂಕಾರ."** ಎನ್ನುವರು.

ಉಪಮೇಯವನ್ನು ಉಪಮಾನವನ್ನಾಗಿ ಸಂಭಾವಿಸಿ ಅಂದರೆ ಕಲ್ಪಿಸಿ ವರ್ಣಿಸಿದರೆ ಅದು **ಉತ್ಪ್ರೇಕ್ಷಾಲಂಕಾರ.**

ಒಂದು ಪದವು ಒಂದಕ್ಕಿಂತ ಹೆಚ್ಚು ಅರ್ಥಕೊಡುವಂತಿದ್ದರೆ ಅಂತಹ ಪದಕ್ಕೆ **"ಶ್ಲೇಷ ಪದ"** ಎನ್ನುವರು. ಇಂತಹ ಶ್ಲೇಷಾರ್ಥಗಳನ್ನು ನೀಡಬಲ್ಲ ಪದಗಳಿರುವ ಅಲಂಕಾರವನ್ನು **"ಶ್ಲೇಷಾಲಂಕಾರ"** ಎನ್ನುವರು.

ಒಂದು ವಿಶೇಷ ವಾಕ್ಯವನ್ನು (ಉಪಮೇಯ) ಸಾಮಾನ್ಯ ವಾಕ್ಯದಿಂದ (ಉಪಮಾನ) ಸಮರ್ಥನೆ ಮಾಡುವುದೇ **ಅರ್ಥಾಂತರನ್ಯಾಸ ಅಲಂಕಾರ.**

## ಉಪಮಾಲಂಕಾರ

**1. 'ಸತಿಪತಿಗಳೊಂದಾಗದವನ ಭಕ್ತಿ ಅಮೃತದೊಳು ವಿಷಬೆರೆದಂತೆ'**

**ಅಲಂಕಾರ :–**ಉಪಮಾಲಂಕಾರ

**ಲಕ್ಷಣ :–**ಎರಡು ವಸ್ತುಗಳಿಗಿರುವ ಸಾದೃಶ್ಯಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು 'ಉಪಮಾಲಂಕಾರ'.

**ಉಪಮೇಯ :–** ಸತಿಪತಿಗಳೊಂದಾಗದವನ ಭಕ್ತಿ

**ಉಪಮಾನ :–**ಅಮೃತದೊಳು ಬೆರೆತ ವಿಷ

**ಉಪಮಾ ವಾಚಕ :– ಅಂತೆ**

**ಸಮಾನ ಧರ್ಮ :–** ಸ್ಪಷ್ಟವಾಗಿಲ್ಲ (ನಿಷ್ಪ್ರಯೋಜಕವಾದುದು)

**ಸಮನ್ವಯ :–**ಇಲ್ಲಿ ಉಪಮೇಯವಾದ ಸತಿಪತಿಗಳೊಂದಾಗದ ಭಕ್ತಿಯನ್ನುಉಪಮಾನವಾದ ಅಮೃತದೊಳು ಬೆರೆತ ವಿಷಕ್ಕೆ ಹೋಲಿಸಿ ವರ್ಣಿಸಲಾಗಿರುವುದರಿಂದ ಇದು ಉಪಮಾಲಂಕಾರವಾಗಿದೆ

**2. ನೀಚರಿಗೆ ಮಾಡಿದ ಉಪಕಾರವು ಹಾವಿಗೆ ಹಾಲೆರೆದಂತೆ**

**ಅಲಂಕಾರ :–**ಉಪಮಾಲಂಕಾರ

**ಲಕ್ಷಣ :–**ಎರಡು ವಸ್ತುಗಳಿಗಿರುವ ಸಾದೃಶ್ಯಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು 'ಉಪಮಾಲಂಕಾರ'.

**ಉಪಮೇಯ :–** ನೀಚರಿಗೆ ಮಾಡುವ ಉಪಕಾರ

**ಉಪಮಾನ :–**ಹಾವಿಗೆ ಎರೆದ ಹಾಲು

**ಉಪಮಾ ವಾಚಕ :– ಅಂತೆ**

**ಸಮಾನ ಧರ್ಮ :–** ಸ್ಪಷ್ಟವಾಗಿಲ್ಲ (ಪ್ರಯೋಜನವಿಲ್ಲ)

**ಸಮನ್ವಯ :–**ಇಲ್ಲಿ ಉಪಮೇಯವಾದ ನೀಚರಿಗೆ ಮಾಡಿದ ಉಪಕಾರವನ್ನು ಉಪಮಾನವಾದ ಹಾವಿಗೆ ಎರೆದ ಹಾಲಿಗೆ ಹೋಲಿಸಿ ವರ್ಣಿಸಲಾಗಿರುವುದರಿಂದ ಇದು ಉಪಮಾಲಂಕಾರವಾಗಿದೆ

**3. ಭೀಮ ದುರ್ಯೋಧನರು ಮದಗಜಗಳಂತೆ ಹೋರಾಡಿದರು.**

**ಅಲಂಕಾರ :–**ಉಪಮಾಲಂಕಾರ

**ಲಕ್ಷಣ :–**ಎರಡು ವಸ್ತುಗಳಿಗಿರುವ ಸಾದೃಶ್ಯಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು 'ಉಪಮಾಲಂಕಾರ'.

**ಉಪಮೇಯ :–** ಭೀಮ ದುರ್ಯೋಧನರು

**ಉಪಮಾನ :–**ಮದಗಜಗಳು

**ಉಪಮಾ ವಾಚಕ :– ಅಂತೆ**

**ಸಮಾನ ಧರ್ಮ :–** ಹೋರಾಡುವುದು

**ಸಮನ್ವಯ** :–ಇಲ್ಲಿ ಉಪಮೇಯವಾದ ಭೀಮದುರ್ಯೋಧನರನ್ನು ಉಪಮಾನವಾದ ಮದಗಜಗಳಿಗೆ ಹೋಲಿಸಿ ವರ್ಣಿಸಲಾಗಿದೆ.

**4. ಸೀತೆಯ ಮುಖ ಕಮಲದಂತೆ ಅರಳಿತು.**
**ಅಲಂಕಾರ** :–ಉಪಮಾಲಂಕಾರ.
**ಲಕ್ಷಣ** :–ಎರಡು ವಸ್ತುಗಳಿಗಿರುವ ಸಾದೃಶ್ಯಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು 'ಉಪಮಾಲಂಕಾರ'.
**ಉಪಮೇಯ** :– ಸೀತೆಯ ಮುಖ
**ಉಪಮಾನ** :–ಕಮಲ **ಉಪಮಾ ವಾಚಕ :– ಅಂತೆ** **ಸಮಾನ ಧರ್ಮ** :– ಅರಳುವುದು
**ಸಮನ್ವಯ** :–ಇಲ್ಲಿ ಉಪಮೇಯವಾದ ಸೀತೆಯ ಮುಖವನ್ನು, ಉಪಮಾನವಾದ ಕಮಲಕ್ಕೆ ಹೋಲಿಸಿ ವರ್ಣಿಸಲಾಗಿದೆ.

**5. "ಒಳಗಿನ ಮಂದಿ ಗುಂಡು ಹೊಡಿಸಿದರೊ ಮುಂಗಾರಿ ಸಿಡಿಲ ಸಿಡಿದ್ಹಾಂಗ"**
**ಅಲಂಕಾರ** :– ಉಪಮಾಲಂಕಾರ
**ಲಕ್ಷಣ** :– ಎರಡು ವಸ್ತುಗಳಿಗಿರುವ ಸಾದೃಶ್ಯ ಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು 'ಉಪಮಾಲಂಕಾರ'.
**ಉಪಮೇಯ** :– ಒಳಗಿನ ಮಂದಿ ಗುಂಡು ಹೊಡೆಯುವುದು
**ಉಪಮಾನ** :– ಮುಂಗಾರಿನಲ್ಲಿ ಸಿಡಿಲು ಸಿಡಿಯುವುದು
**ಉಪಮಾ ವಾಚಕ** :–ಹಾಂಗ
**ಸಮಾನ ಧರ್ಮ** :– ಹೊಡೆಯುವುದು.
**ಸಮನ್ವಯ** :– ಇಲ್ಲಿ ಉಪಮೇಯವಾದ ಒಳಗಿನ ಮಂದಿ ಗುಂಡು ಹೊಡೆಯುವುದನ್ನು ಉಪಮಾನವಾದ ಮುಂಗಾರಿನಲ್ಲಿ ಸಿಡಿಲು ಸಿಡಿಯುವುದಕ್ಕೆ ಪರಸ್ಪರ ಹೋಲಿಸಿ ವರ್ಣಿಸಲಾಗಿದೆ.

**6. "ಸಿಡಿಲು ಸಿಡಿದ್ಹಾಂಗ ಗುಂಡು ಸುರಿದಾವ"**
**ಅಲಂಕಾರ** :– ಉಪಮಾಲಂಕಾರ
**ಲಕ್ಷಣ** :– ಎರಡು ವಸ್ತುಗಳಿಗಿರುವ ಸಾದೃಶ್ಯಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು 'ಉಪಮಾಲಂಕಾರ'.
**ಉಪಮೇಯ** :–ಗುಂಡು ಸುರಿಯುವುದು
**ಉಪಮಾನ** :–ಸಿಡಿಲು ಸಿಡಿಯುವುದು
**ಉಪಮಾ ವಾಚಕ** :=ಹಾಂಗ
**ಸಮಾನ ಧರ್ಮ** :–ಸುರಿಯುವುದು
**ಸಮನ್ವಯ** :– ಇಲ್ಲಿ ಉಪಮೇಯವಾದ ಗುಂಡು ಸುರಿಯುವುದನ್ನು ಉಪಮಾನವಾದ ಸಿಡಿಲು ಸಿಡಿಯುವುದಕ್ಕೆ ಪರಸ್ಪರ ಹೋಲಿಸಿ ವರ್ಣಿಸಲಾಗಿದೆ.

**7. ಮರನೇರಿದ ಮರ್ಕಟನಂತೆ ಹಲವು ಕೊಂಬೆಗೆ ಹಾಯುತಲಿದೆ**
**ಅಲಂಕಾರ** :– ಉಪಮಾಲಂಕಾರ
**ಲಕ್ಷಣ** :–ಎರಡು ವಸ್ತುಗಳಿಗಿರುವ ಸಾದೃಶ್ಯಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು 'ಉಪಮಾಲಂಕಾರ'.
**ಉಪಮೇಯ:** ಲುಪ್ತವಾಗಿದೆ (ಮನುಷ್ಯನ ಚಂಚಲವಾದ ಮನಸ್ಸು)
**ಉಪಮಾನ** : ಮರನೇರಿದ ಮರ್ಕಟ (ಕೋತಿ)
**ಉಪಮವಾಚಕ : ಅಂತೆ**
**ಸಮಾನಧರ್ಮ** : ಲುಪ್ತವಾಗಿದೆ
**ಸಮನ್ವಯ** :–ಇಲ್ಲಿ ಉಪಮೇಯವಾದ ಮನುಷ್ಯನ ಚಂಚಲವಾದ ಮನಸ್ಸನ್ನು ಉಪಮಾನವಾದ ಮರನೇರಿದ ಮರ್ಕಟಕ್ಕೆ ಪರಸ್ಪರ ಹೋಲಿಸಿ ವರ್ಣಿಸಲಾಗಿದೆ.

**8. ಅಂದಣವನೇರಿದ ಸೊಣಗನಂತೆ**
**ಅಲಂಕಾರ** :– ಉಪಮಾಲಂಕಾರ
**ಲಕ್ಷಣ** :–ಎರಡು ವಸ್ತುಗಳಿಗಿರುವ ಸಾದೃಶ್ಯಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು 'ಉಪಮಾಲಂಕಾರ'.
**ಉಪಮೇಯ:** ಲುಪ್ತವಾಗಿದೆ
**ಉಪಮಾನ** : ಅಂದಣವನೇರಿದ ಸೊಣಗ
**ಉಪಮವಾಚಕ : ಅಂತೆ**
**ಸಮಾನಧರ್ಮ** : ಲುಪ್ತವಾಗಿದೆ
**ಸಮನ್ವಯ** :–ಇಲ್ಲಿ ಉಪಮೇಯವಾದ ಮನುಷ್ಯನ ಮನುಷ್ಯನ ಸ್ವಭಾವವನ್ನು ಉಪಮಾನವಾದ ಅಂದಣವನೇರಿದ ಸೊಣಗಕ್ಕೆ ಪರಸ್ಪರ ಹೋಲಿಸಿ ವರ್ಣಿಸಲಾಗಿದೆ.

**9. ಬಳಾರಿಯ ಮನೆಯಂ ಹರಕೆಯ ಕುರಿಯಂ ಪುಗಿಸುವಂತೆ'**
**ಅಲಂಕಾರ** :– ಉಪಮಾಲಂಕಾರ
**ಲಕ್ಷಣ** :– ಎರಡು ವಸ್ತುಗಳಿಗಿರುವ ಸಾದೃಶ್ಯ ಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು 'ಉಪಮಾಲಂಕಾರ '’.
**ಉಪಮೇಯ** :–ಲುಪ್ತವಾಗಿದೆ (ದುಷ್ಟಬದ್ಧಿಯು ತನ್ನ ತಂದೆಯನ್ನು ಪೊಟರೆಯ 'ಲ್ಲಿ ಅಡಗಿಸಿಡುವುದು)
**ಉಪಮಾನ** :– ಹರಕೆಯ ಕುರಿ (ಬಳಾರಿಯ ಮನೆ ಹರಕೆಯ ಕುರಿ)
**ಉಪಮಾ ವಾಚಕ** :ಅಂತೆ
**ಸಮಾನ ಧರ್ಮ** :– ಪುಗಿಸುವುದು (ಹೊಗಿಸುವುದು)
**ಸಮನ್ವಯ** :– ಇಲ್ಲಿ ಉಪಮೇಯವಾದ ದುಷ್ಟ'ಬದ್ಧಿಯು ತಂದೆಯನ್ನು ಉಪಮಾನವಾದ ಹರಕೆಯ ಕುರಿಗೆ ಪರಸ್ಪರ ಹೋಲಿಸಿ ವರ್ಣಿಸಲಾಗಿದೆ.

**10. " ಮರವನ್ನು ಆಶ್ರಯಿಸಿ ಬೆಳೆದ ಬಳ್ಳಿಯಂತೆ"**
**ಅಲಂಕಾರ** :– ಉಪಮಾಲಂಕಾರ
**ಲಕ್ಷಣ** :– ಎರಡು ವಸ್ತುಗಳಿಗಿರುವ ಸಾದೃಶ್ಯ ಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು 'ಉಪಮಾಲಂಕಾರ'.
**ಉಪಮೇಯ** :–ಲುಪ್ತವಾಗಿದೆ (ಕೇಳಿ ದೊರಕಿಸಿಕೊಂಡ ಸಾಮಗ್ರಿ ಸೌಕರ್ಯಗಳ ಮೇಲೆ ನಿಂತ ಸಾಧನೆ–ತಪಸ್ಸು)
**ಉಪಮಾನ** :– ಮರವನ್ನು ಆಶ್ರಯಿಸಿ ಬೆಳೆದ ಬಳ್ಳಿ
**ಉಪಮಾ ವಾಚಕ** :ಅಂತೆ
**ಸಮಾನ ಧರ್ಮ** :– ಲುಪ್ತವಾಗಿದೆ
**ಸಮನ್ವಯ** :– ಇಲ್ಲಿ ಉಪಮೇಯವಾದ ಕೇಳಿ ದೊರಕಿಸಿಕೊಂಡ ಸಾಮಗ್ರಿ ಸೌಕರ್ಯಗಳ ಮೇಲೆ ನಿಂತ ಸಾಧನೆ–ತಪಸ್ಸು ಇದನ್ನು ಉಪಮಾನವಾದ ಮರವನ್ನು ಆಶ್ರಯಿಸಿ ಬೆಳೆದ ಬಳ್ಳಿಗೆ ಪರಸ್ಪರ ಹೋಲಿಸಿ ವರ್ಣಿಸಲಾಗಿದೆ.

**11. ನೊಳವಿಂಗೆ ಕುಪ್ಪೆ ವರಮೆಂಬವೊಲಾಂಬರಮುಂಟೆ ನಿನ್ನದೊಂದಳವು?**
**ಅಲಂಕಾರ** : ಉಪಮಾಲಂಕಾರ.
**ಲಕ್ಷಣ** :– ಎರಡು ವಸ್ತುಗಳಿಗಿರುವ ಸಾದೃಶ್ಯ ಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು 'ಉಪಮಾಲಂಕಾರ'.
**ಉಪಮೇಯ ನಿನ್ನ ( ದ್ರುಪದನ) ಪರಾಕ್ರಮ**
**ಉಪಮಾನ** :– ನೊಳವಿಂಗ್ ತಪ್ಪೆ ವರಂ
**ಉಪಮಾ ವಾಚಕ** :ವೊಲ್
**ಸಮಾನ ಧರ್ಮ :– ಸ್ಥಿತಿ**
**ಸಮನ್ವಯ** :– ಇಲ್ಲಿ ಉಪಮೇಯವಾದ ದ್ರುಪದನ ಪರಾಕ್ರಮದ ಸ್ಥಿತಿಯನ್ನು ತಿಪ್ಪೆಯಲ್ಲಿರುವ ನೊಣದ ಸ್ಥಿತಿಗೆ ಹೋಲಿಸಿ ವರ್ಣಿಸಲಾಗಿದೆ.

**12. ಶಾನುಭೋಗರು ಕುಲಾಲ ಚಕ್ರದಂತೆ ತಿರುಗುತ್ತಿದ್ದರು.**

**ಅಲಂಕಾರ :–**ಉಪಮಾಲಂಕಾರ
**ಲಕ್ಷಣ :–**ಎರಡು ವಸ್ತುಗಳಿಗಿರುವ ಸಾದೃಶ್ಯಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು 'ಉಪಮಾಲಂಕಾರ'.
**ಉಪಮೇಯ :–** ಶಾನುಭೋಗರು
**ಉಪಮಾನ :–**ಕುಲಾಲಚಕ್ರ
**ಉಪಮಾ ವಾಚಕ :– ಅಂತೆ**
**ಸಮಾನ ಧರ್ಮ :–** ತಿರುಗುವುದು
**ಸಮನ್ವಯ :–**ಇಲ್ಲಿ ಉಪಮೇಯವಾದ ಶಾನುಭೋಗರು ತಿರುಗುವುದನ್ನು ಉಪಮಾನವಾದ ಕುಲಾಲಚಕ್ರ ತಿರುಗುವುದಕ್ಕೆ ಹೋಲಿಸಿ ವರ್ಣಿಸಲಾಗಿದೆ.

**13. ಲಂಡನ್ ನಗರದ ವೂಲವರ್ಥ ಅಂಗಡಿಯು ಪ್ರಾಚೀನ ಮಹಾಕಾವ್ಯದಂತೆ ಮಹಾಕೋಶವಾಗಿದೆ.**
**ಅಲಂಕಾರ :–** ಉಪಮಾಲಂಕಾರ
**ಲಕ್ಷಣ :–**ಎರಡು ವಸ್ತುಗಳಿಗಿರುವ ಸಾದೃಶ್ಯಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು 'ಉಪಮಾಲಂಕಾರ'.
**ಉಪಮೇಯ:** ಲಂಡನ್ ನಗರದ ವೂಲವರ್ಥ ಅಂಗಡಿ
**ಉಪಮಾನ :** ಪ್ರಾಚೀನ ಮಹಾಕಾವ್ಯ
**ಉಪಮವಾಚಕ : ಅಂತೆ**
**ಸಮಾನಧರ್ಮ :** ಮಹಾಕೋಶವಾಗಿರುವುದು
**ಸಮನ್ವಯ:** ಇಲ್ಲಿ ಉಪಮೇಯವಾದ ಲಂಡನ್ ನಗರದ 'ವೂಲವರ್ಥ' ಅಂಗಡಿಯ್ಯನು ಉಪಮನವಾದ ಪ್ರಾಚೀನ ಮಹಾಕಾವ್ಯಕ್ಕೆ ಪರಸ್ಪರ ಹೋಲಿಸಿ ವರ್ಣಿಸಿರುವುದರಿಂದ ಇದು ಉಪಮಾಲಂಕಾರ.

**ಹೆಚ್ಚುವರಿ ಉದಾಹರಣೆಗಳು:**
1. ನುಡಿದರೆ ಮುತ್ತಿನ ಹಾರದಂತಿರಬೇಕು.
2. ನುಡಿದರೆ ಸ್ಪಟಿಕದ ಶಲಾಕೆಯಂತಿರಬೇಕು.
3. ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು.
4. ಲಕ್ಷ್ಮಣನಿಗೆ ಶಬರಿಯಾಶ್ರಮವು ಚಿತ್ರಕೂಟದಂತೆ ಕಂಡಿತು.

## ರೂಪಕಾಲಂಕಾರ

1. ಅಳ್ಳಿರಿಯುತಿಪ್ಪ ಎಮ್ಮ ಒಡಲಬೇಗೆಯ ಬೆಂಕಿಯುರಿ ನಿನ್ನನಿರಿಯದೆ ಪೇಳು ವಿಶ್ವಾಮಿತ್ರ
**ಅಲಂಕಾರ :–** ರೂಪಕಾಲಂಕಾರ
**ಲಕ್ಷಣ :–** ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡುಬರದೆ ಅವೆರಡೂ ಒಂದೇ ಎಂದು ವರ್ಣಿಸಿದರೆ ಅದೇ 'ರೂಪಕಾಲಂಕಾರ'.
**ಉಪಮೇಯ :–** ಒಡಲಬೇಗೆ
**ಉಪಮಾನ :–** ಬೆಂಕಿಯುರಿ
**ಸಮನ್ವಯ :–** ಇಲ್ಲಿ ಉಪಮೇಯವಾದ ಅಯೋಧ್ಯೆಯ ಪ್ರಜೆಗಳ ಒಡಲಬೇಗೆಯನ್ನು ಉಪಮಾನವಾದ ಬೆಂಕಿಯುರಿಗೆ ಅಭೇದವಾಗಿ ಊಹಿಸಿರುವುದರಿಂದ ಇದು ರೂಪಕಾಲಂಕಾರ.

2. "ಸೀತೆಯ ಮುಖಕಮಲ ಅರಳಿತು."
**ಅಲಂಕಾರ :–** ರೂಪಕಾಲಂಕಾರ
**ಲಕ್ಷಣ :–** ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡುಬರದೆ ಅವೆರಡೂ ಒಂದೇ ಎಂದು ವರ್ಣಿಸಿದರೆ ಅದೇ 'ರೂಪಕಾಲಂಕಾರ'.
**ಉಪಮೇಯ :–** ಸೀತೆಯ ಮುಖ
**ಉಪಮಾನ :–** ಕಮಲ
**ಸಮನ್ವಯ :–** ಇಲ್ಲಿ ಉಪಮೇಯವಾದ ಸೀತೆಯ ಮುಖಕ್ಕೂ ಉಪಮಾನವಾದ ಕಮಲಕ್ಕೂ ಯಾವುದೇ ಭೇದವು ಕಂಡುಬರದೆ ಅವೆರಡೂ ಒಂದೇ ಎಂದು ವರ್ಣಿಸಿರುವುದರಿಂದ ಇದು ರೂಪಕಾಲಂಕಾರ.

3. "ಮಾರಿಗೌತಣವಾಯ್ತು ನಾಳಿನ ಭಾರತವು"
**ಅಲಂಕಾರ :–** ರೂಪಕಾಲಂಕಾರ
**ಲಕ್ಷಣ :–** ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡುಬರದೆ ಅವೆರಡೂ ಒಂದೇ ಎಂದು ವರ್ಣಿಸಿದರೆ ಅದೇ 'ರೂಪಕಾಲಂಕಾರ'.
**ಉಪಮೇಯ :–** ನಾಳಿನ ಭಾರತ ಯುದ್ಧ
**ಉಪಮಾನ :–** ಮಾರಿಯ ಔತಣ
**ಸಮನ್ವಯ :–** ಇಲ್ಲಿ ಉಪಮೇಯವಾದ ನಾಳಿನ ಭಾರತ ಯುದ್ಧವನ್ನು ಉಪಮಾನವಾದ ಮಾರಿಯ ಔತಣಕ್ಕೆ ಅಭೇದವಾಗಿ ವರ್ಣಿಸಿರುವುದರಿಂದ ಇದು ರೂಪಕಾಲಂಕಾರ.

4. ಶಾನುಭೋಗರ ವದನಾರವಿಂದದಲ್ಲಿ ಮುಗಳು ನಗೆ ಮೂಡಿತು.
**ಅಲಂಕಾರ :–** ರೂಪಕಾಲಂಕಾರ
**ಲಕ್ಷಣ :–** ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡುಬರದೆ ಅವೆರಡೂ ಒಂದೇ ಎಂದು ವರ್ಣಿಸಿದರೆ ಅದೇ 'ರೂಪಕಾಲಂಕಾರ'.
**ಉಪಮೇಯ :–** ವದನ
**ಉಪಮಾನ :–** ಅರವಿಂದ
**ಸಮನ್ವಯ :–** ಇಲ್ಲಿ ಉಪಮೇಯವಾದ ವದನವನ್ನು ಉಪಮಾನವಾದ ಅರವಿಂದಕ್ಕೆ ಅಭೇದವಾಗಿ ವರ್ಣಿಸಿರುವುದರಿಂದ ಇದು ರೂಪಕಾಲಂಕಾರ.

**5. ಎನ್ನ ಬಗೆಗನಿವಾರ್ಯವೀ ಶೋಕದುಲ್ಕೆ**
**ಅಲಂಕಾರ :–** ರೂಪಕಾಲಂಕಾರ
**ಲಕ್ಷಣ :–** ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡುಬರದೆ ಅವೆರಡೂ ಒಂದೇ ಎಂದು ವರ್ಣಿಸಿದರೆ ಅದೇ 'ರೂಪಕಾಲಂಕಾರ'.
**ಉಪಮೇಯ :–** ಶೋಕ
**ಉಪಮಾನ :–** ಉಲ್ಕೆ
**ಸಮನ್ವಯ :–** ಇಲ್ಲಿ ಉಪಮೇಯವಾದ ಶೋಕವನ್ನು ಉಪಮಾನವಾದ ಉಲ್ಕೆಗೆ ಅಭೇದವಾಗಿ ವರ್ಣಿಸಿರುವುದರಿಂದ ಇದು ರೂಪಕಾಲಂಕಾರ.

**ಹೆಚ್ಚುವರಿ ಉದಾಹರಣೆಗಳು:**
1. ಭಾರತಬೋಧಿ
2. ಪ್ರೀತಿಯ ಹಣತೆ

## ದೃಷ್ಟಾಂತಾಲಂಕಾರ

**1. ಮಾತು ಬಲ್ಲವನಿಗೆ ಜಗಳವಿಲ್ಲ; ಊಟ ಬಲ್ಲವನಿಗೆ ರೋಗವಿಲ್ಲ.**
**ಅಲಂಕಾರ** : ದೃಷ್ಟಾಂತಾಲಂಕಾರ ಲಕ್ಷಣ : ಎರಡು ಬೇರೆ ಬೇರೆ ವಾಕ್ಯಗಳು (ಉಪಮೇಯ, ಉಪಮಾನ) ಅರ್ಥ ಸಾದೃಶ್ಯದಿಂದ ಒಂದಕ್ಕೊಂದು ಬಿಂಬ ಪ್ರತಿಬಿಂಬ ಭಾವದಂತೆ ತೋರುತ್ತಿದ್ದರೆ ಅದು 'ದೃಷ್ಟಾಂತಾಲಂಕಾರ'.
**ಉಪಮೇಯ** : ಮಾತು ಬಲ್ಲವನಿಗೆ ಜಗಳವಿಲ್ಲ
**ಉಪಮಾನ** : ಊಟ ಬಲ್ಲವನಿಗೆ ರೋಗವಿಲ್ಲ
**ಸಮನ್ವಯ** : ಇಲ್ಲಿ ಉಪಮೇಯವಾದ ಮಾತುಬಲ್ಲವನಿಗೆ ಜಗಳವಿಲ್ಲ ಹಾಗೂ ಉಪಮಾನವಾದ ಊಟ ಬಲ್ಲವನಿಗೆ ರೋಗವಿಲ್ಲ ಎರಡೂ ಬಿಂಬ ಪ್ರತಿಬಿಂಬದಂತೆ ಇರುವುದರಿಂದ ಇಬ್ಬರೂ ಒಂದೇ ಎಂಬುದು ಪ್ರತಿಪಾದಿತವಾಗಿದೆ.ಆದ್ದರಿಂದ ಇದು ದೃಷ್ಟಾಂತಾಲಂಕಾರ.

## ಉತ್ಪ್ರೇಕ್ಷಾಲಂಕಾರ

**1. ಅಚ್ಛೋದ ಸರೋವರವು ತ್ರೈಲೋಕ್ಯಲಕ್ಷ್ಮಿಯು ತನ್ನ ಸೌಂದರ್ಯವನ್ನು ನೋಡಲು ಮಾಡಿಟ್ಟ ರನ್ನಗನ್ನಡಿಯೋ ಎಂಬಂತೆ ಶೋಭಿಸಿತು.**
**ಅಲಂಕಾರ** : ಉತ್ಪ್ರೇಕ್ಷಾಲಂಕಾರ

**ಲಕ್ಷಣ :** ಉಪಮೇಯವನ್ನು ಉಪಮಾನವನ್ನಾಗಿ ಸಂಭಾವಿಸಿ ಅಂದರೆ ಕಲ್ಪಿಸಿ ವರ್ಣಿಸಿದರೆ ಅದು ಉತ್ಪ್ರೇಕ್ಷಾಲಂಕಾರ.
**ಉಪಮೇಯ** : ಅಚ್ಛೋದ ಸರೋವರ
**ಉಪಮಾನ** : ರನ್ನಗನ್ನಡಿ
**ಸಮನ್ವಯ** : ಉಪಮೇಯವಾದ ಅಚ್ಛೋದ ಸರೋವರವನ್ನು ಉಪಮಾನವಾದ ರನ್ನಗನ್ನಡಿ ಎಂಬುದಾಗಿ ಸಂಭಾವಿಸಿ (ಕಲ್ಪಿಸಿ) ವರ್ಣಿಸಲಾಗಿದೆ.

## ಶ್ಲೇಷಾಲಂಕಾರ

**ಅತಿಶಯ ಪದಾರ್ಥ ನಿಕರ ।**
**ಪ್ರತೀತಿಯಂ ಪಡೆದ ಪಾದವಿನ್ಯಾಸಂ ಭೂ॥**
**ನುತಮಾಗದಲ್ತೆನಿರ್ದೋ ।**
**ಷತೆಯಿಂದಲ್ಲದೆ ಸಮಂತು ಕವಿಗಂ ರವಿಗಂ ॥**

ಅಲಂಕಾರ : ಶ್ಲೇಷಾಲಂಕಾರ
ಲಕ್ಷಣ : ಬೇರೆ ಬೇರೆ ಅರ್ಥಗಳನ್ನು ಹೊಂದಿದ ಒಂದೇ ಶಬ್ದ ಉಪಮೇಯ ಮತ್ತು ಉಪಮಾನಗಳಿಗೆ ಬೇರೆ ಬೇರೆ ಅರ್ಥವನ್ನು ನೀಡುವಂತೆ ವರ್ಣಿಸಲ್ಪಟ್ಟರೆ ಅದು 'ಶ್ಲೇಷಾಲಂಕಾರ'.
**ಪದ ಕವಿಯ ಪರವಾಗಿ (ಉಪಮಾನ) ರವಿಯ ಪರವಾಗಿ (ಉಪಮೇಯ)** ಪದಾರ್ಥ – ಪದದ ಅರ್ಥ (ಶಬ್ದಾರ್ಥ) – ವಸ್ತು
ಪಾದ – ಪದ್ಯದ ಸಾಲು – ಕಿರಣ
ನಿರ್ದೋಷತೆ – ದೋಷವಿಲ್ಲದಿರುವಿಕೆ –ಕತ್ತಲಿಲ್ಲದಿರುವಿಕೆ (ಹಗಲು)
**ಸಮನ್ವಯ** : ಇಲ್ಲಿ ಕವಿ ಮತ್ತು ರವಿ ಒಂದೇ ಬಗೆಯ ಪದಗಳಿಂದ ವರ್ಣಿತರಾಗಿದ್ದಾರೆ.ಈ ವರ್ಣನೆಯಲ್ಲಿ ಪದಾರ್ಥ, ಪಾದ, ನಿರ್ದೋಷತೆ ಎಂಬ ಪದಗಳು ಶ್ಲೇಷಾರ್ಥದಿಂದ ಕೂಡಿವೆ. ಆದ್ದರಿಂದ ಇಲ್ಲಿ ಶ್ಲೇಷಾಲಂಕಾರವಿದೆ.

## ಅರ್ಥಾಂತರನ್ಯಾಸ ಅಲಂಕಾರ

1. "ಆತನು ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು ಉತ್ತೀರ್ಣನಾದನು. ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ?"
**ಅಲಂಕಾರ** : ಅರ್ಥಾಂತರನ್ಯಾಸಾಲಂಕಾರ.
**ಲಕ್ಷಣ** : ಒಂದು ವಿಶೇಷ ವಾಕ್ಯವನ್ನು (ಉಪಮೇಯ) ಸಾಮಾನ್ಯ ವಾಕ್ಯದಿಂದ(ಉಪಮಾನ) ಸಮರ್ಥನೆ ಮಾಡುವುದೇ ಅರ್ಥಾಂತರನ್ಯಾಸ ಅಲಂಕಾರ.
**ಉಪಮೇಯ (ವಿಶೇಷ ವಾಕ್ಯ)** : ಆತನು ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು ಉತ್ತೀರ್ಣನಾದನು.
**ಉಪಮಾನ ( ಸಾಮಾನ್ಯ ವಾಕ್ಯ)** : ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ?
**ಸಮನ್ವಯ** : ಇಲ್ಲಿ ಉಪಮೇಯವಾದ "ಆತನು ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು ಉತ್ತೀರ್ಣನಾದನು" ಎಂಬ ವಿಶೇಷವಾಕ್ಯವನ್ನು ಉಪಮಾನವಾದ ."ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದುಲೆಕ್ಕವೇ?" ಎಂಬ ಸಾಮಾನ್ಯವಾಕ್ಯದಿಂದ ಸಮರ್ಥಿಸಲಾಗಿದೆ. ಆದ್ದರಿಂದ ಇದು ಅರ್ಥಾಂತರನ್ಯಾಲಂಕಾರ.

2. ಜಲನಿಧಿಜಲಮಂ ಜಲಭೃ ।
ತ್ಕುಲಕ್ಕೆ ನಲಿದಿತ್ತುದತ್ತಮಿತ್ತನದೀನಿ ॥
ರ್ಮಲ ಸಲಿಲಂ ದೊರೆದುದು ಗಡ ।
ನೆಲದೊಳ್ ಕೊಟ್ಟಂಗೆ ಬಡತನಂ ಬಂದಪುದೇ ॥

**ಅಲಂಕಾರ** : ಅರ್ಥಾಂತರನ್ಯಾಸಾಲಂಕಾರ.
**ಲಕ್ಷಣ** : ಒಂದು ವಿಶೇಷ ವಾಕ್ಯವನ್ನು (ಉಪಮೇಯ) ಸಾಮಾನ್ಯ ವಾಕ್ಯದಿಂದ (ಉಪಮಾನ) ಸಮರ್ಥನೆ ಮಾಡುವುದೇ ಅರ್ಥಾಂತರನ್ಯಾಸ ಅಲಂಕಾರ.
**ಉಪಮೇಯ (ವಿಶೇಷ ವಾಕ್ಯ)** : ಜಲನಿಧಿಜಲಮಂ ಜಲಭೃ । ತ್ಕುಲಕ್ಕೆ ನಲಿದಿತ್ತುದತ್ತಮಿತ್ತನದೀನಿ ॥ ರ್ಮಲ ಸಲಿಲಂ ದೊರೆದುದು
**ಉಪಮಾನ ( ಸಾಮಾನ್ಯ ವಾಕ್ಯ)** : ನೆಲದೊಳ್ ಕೊಟ್ಟಂಗೆ ಬಡತನಂ ಬಂದಪುದೇ.
**ಸಮನ್ವಯ** : ಇಲ್ಲಿ ಉಪಮೇಯವಾದ "ಜಲನಿಧಿಜಲಮಂ ಜಲಭೃತ್ಕುಲಕ್ಕೆ ನಲಿದಿತ್ತುದತ್ತಮಿತ್ತನದೀನಿರ್ಮಲ ಸಲಿಲಂ ದೊರೆದುದು" ಎಂಬ ವಿಶೇಷವಾಕ್ಯವನ್ನು ಉಪಮಾನವಾದ ನೆಲದೊಳ್ ಕೊಟ್ಟಂಗೆ ಬಡತನಂಬಂದಪುದೇ" ಎಂಬ ಸಾಮಾನ್ಯ ವಾಕ್ಯದಿಂದ ಸಮರ್ಥಿಸಲಾಗಿದೆ.ಆದ್ದರಿಂದ ಇದು ಅರ್ಥಾಂತರನ್ಯಾಸಾಲಂಕಾರ.

## ಗಾದೆ ವಿಸ್ತರಿಸಿ ಬರೆಯುವುದು:

**ಗಾದೆ ವಿಸ್ತರಣೆ : ಗಾದೆಗಳನ್ನು ವಿವರಿಸಿ ಬರೆಯುವುದು : ( ಮೂರು ಅಂಕಗಳಿಗೆ )**

**ಗಾದೆ ವಿಸ್ತರಣೆಯು ಪ್ರತ್ಯೇಕ ವಾಕ್ಯ ಖಂಡಗಳಲ್ಲಿ ಮೂರು ಹಂತಗಳನ್ನು ಹೊಂದಿರಬೇಕು.**

1. ಗಾದೆಗಳ ಮಹತ್ವದ ಕುರಿತಾದ ಸಾಮಾನ್ಯ ಹೇಳಿಕೆಗಳು
2. ಗಾದೆಯು ಒಳಗೊಂಡಿರುವ ಆಶಯ
3. ಗಾದೆಯಆಶವನ್ನು ಸಮರ್ಥಿಸುವ ಇತರೆ ಗಾದೆ ಮಾತುಗಳು, ಪೂರಕ ಕಥೆಗಳು, ನಾಣ್ಣುಡಿಗಳ ಮೂಲಕ ವಿವರಿಸುವುದು.

[ ಒಂದೇ ರೀತಿಯ ಆಶಯದ ಗಾದೆಗಳಿಗೆ ಏಕರೂಪದ ಒಂದು ವಿಸ್ತರಣೆಯನ್ನು ಅಭ್ಯಾಸ ಮಾಡಬಹುದು ]

**ಉದಾಹರಣೆ : 1**

- **ಮಾತೇ ಮೃತ್ಯು; ಮಾತೇ ಮುತ್ತು.**
- **ಊಟಬಲ್ಲವನಿಗೆರೋಗವಿಲ್ಲ; ಮಾತು ಬಲ್ಲವನಿಗೆ ಜಗಳವಿಲ್ಲ.**
- **ಮಾತುಆಡಿದರೆ ಹೋಯಿತು; ಮುತ್ತುಒಡೆದರೆ ಹೋಯಿತು.**
- **ಮಾತು ಬೆಳ್ಳಿ; ಮೌನ ಬಂಗಾರ.**
- **ಮಾತು ಮನೆ ಕೆಡಿಸಿತು; ತೂತು ಒಲೆ ಕೆಡಿಸಿತು.**

**ಈ ಮೇಲಿನ ಗಾದೆಗಳಿಗೆಲ್ಲಾ ಅನ್ವಯಿಸುವ ಒಂದೇ ಉತ್ತರ:**

* ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಾಗಿವೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತು ಗಾದೆಯ ಮಹತ್ವವನ್ನು ಬಹು ಸುಂದರವಾಗಿ ಅರ್ಥೈಸುತ್ತದೆ.
* ಇದು ಒಂದು ಜನಪ್ರಿಯ ಗಾದೆ ಮಾತಾಗಿದ್ದು; **ಮಾತು ಹೇಗಿರಬೇಕು ಹಾಗೂ ಅದರ ಮಹತ್ವವೇನು** ಎಂಬುದನ್ನು ತಿಳಿಸುತ್ತದೆ.

**ಎಲ್ಲಾ ಗಾದೆಗಳಿಗೂ ಈ ಆರಂಭದ ಸಾಲುಗಳನ್ನು ಬರೆಯಬಹುದು.**

* ಮಾನವನು ಮಾತನಾಡುವ ಮತ್ತು ಆಲೋಚನಾ ಶಕ್ತಿಯಿಂದಲೇ ಇತರೆ ಪ್ರಾಣಿಗಳಿಗಿಂತ ಭಿನ್ನವಾಗಿದ್ದಾನೆ. ಅಂತಹ ಅಮೂಲ್ಯವಾದ ಮಾತನ್ನು ಉತ್ತಮ ರೀತಿಯಲ್ಲಿ ಬಳಸಿಕೊಳ್ಳಬೇಕು. ಹಾಗಲ್ಲದೆ ನಾಲಿಗೆ ಹರಿದ ಕಡೆಗೆಲ್ಲಾ ಬಿಟ್ಟರೆ **'ಬಾಯಿ ಬಿಟ್ಟರೆ ಬಣ್ಣ ಗೇಡು'** ಎಂಬಂತಾಗುತ್ತದೆ. ಬಸವಣ್ಣನವರು ಹೇಳಿರುವಂತೆ 'ನುಡಿದರೆ ಮುತ್ತಿನ ಹಾರದಂತೆ, ಮಾಣಿಕ್ಯದ ದೀಪ್ತಿಯಂತೆ, ಸ್ಫಟಿಕದ ಶಲಾಕೆಯಂತೆ' ಇರಬೇಕು. ಅಂದರೆ ನಮ್ಮ ಮಾತು ಇತರರಿಗೆ ನೋವುಂಟು ಮಾಡದಂತೆ ಹಿತ–ಮಿತ–ಮೃದುವಾಗಿರಬೇಕು. ಇಲ್ಲದಿದ್ದರೆ ಅದು ಅನಾಹುತಕ್ಕೂ ಕಾರಣವಾಗುತ್ತದೆ. ಎಂಬುದು ಈ ಗಾದೆಯ ಆಶಯವಾಗಿದೆ.

**ಉದಾಹರಣೆ: 2**

- **ದುಡಿಮೆಯೇ ದುಡ್ಡಿನ ತಾಯಿ**
- **ಕೈ ಕೆಸರಾದರೆ ಬಾಯಿ ಮೊಸರು**
- **ಕಾಯಕವೇ ಕೈಲಾಸ**
- **ಕೂತು ಉಣ್ಣುವವನಿಗೆ ಕುಡಿಕೆ ಹೊನ್ನೂ ಸಾಲದು.**

**ಈ ಮೇಲಿನ ಗಾದೆಗಳಿಗೆಲ್ಲಾ ಅನ್ವಯಿಸುವ ಒಂದೇ ಉತ್ತರ:**

* ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಾಗಿವೆ. ವೇದಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತು ಗಾದೆಯ ಮಹತ್ವವನ್ನು ಬಹು ಸುಂದರವಾಗಿ ಅರ್ಥೈಸುತ್ತದೆ.

* ಇದು ಒಂದು ಜನಪ್ರಿಯ ಗಾದೆ ಮಾತಾಗಿದ್ದು; **ದುಡಿಮೆ ಅಥವಾ ದೈಹಿಕಶ್ರಮ ಹಾಗೂ ಅದರ ಮಹತ್ವವೇನು** ಎಂಬುದನ್ನು ತಿಳಿಸುತ್ತದೆ.

* ಹನ್ನೆರಡನೆಯ ಶತಮಾನದಲ್ಲೇ ಶಿವಶರಣರು ಕಾಯಕದ ಮಹತ್ವವನ್ನು ಸಾರಿದರು. ಕಾಯಕ ಎಂದರೆ 'ಪ್ರತಿಯೊಬ್ಬ ವ್ಯಕ್ತಿಯು ಏನಾದರೊಂದು ದೈಹಿಕ ಶ್ರಮದ ಮೂಲಕ ಸಂಪಾದನೆ ಮಾಡಿಜೀವನ ನಡೆಸಬೇಕು' ಸೋಮಾರಿಯಾಗಿ ಕಾಲ ಕಳೆಯದೆ ಕಷ್ಟಪಟ್ಟು ದುಡಿದು ಬದುಕುವುದರಿಂದ ಹಣ ಸಂಪಾದನೆ ಸಾಧ್ಯ.ಕೂತು ಉಣ್ಣುವವನಿಗೆ ಕುಡಿಕೆ ಹೊನ್ನೂ ಸಾಲದು ಎಂಬಂತೆ ಇರುವ ಆಸ್ತಿ ಕರಗಿದ ಮೇಲೆ ಕಷ್ಟಪಡಬೇಕಾಗುತ್ತದೆ. ಆದ್ದರಿಂದ ಕಷ್ಟಪಟ್ಟರೆ ಸುಖವಿದೆ ಎಂಬುದು ಈ ಗಾದೆಯ ಆಶಯವಾಗಿದೆ.

**ಉದಾಹರಣೆ: 3**

- **ಅರಮನೆಗಿಂತ ನೆರಮನೆ ಲೇಸು.**
- **ಹಾಸಿಗೆ ಇದ್ದಷ್ಟು ಕಾಲು ಚಾಚು**
- **ಅತಿ ಆಸೆ ಗತಿ ಕೆಡಿಸಿತು**

**ಈ ಮೇಲಿನ ಗಾದೆಗಳಿಗೆಲ್ಲಾ ಅನ್ವಯಿಸುವ ಒಂದೇ ಉತ್ತರ:**

* ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಾಗಿವೆ.
* ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತು ಗಾದೆಯ ಮಹತ್ವವನ್ನು ಬಹು ಸುಂದರವಾಗಿ ಅರ್ಥೈಸುತ್ತದೆ.
* ಇದುಒಂದುಜನಪ್ರಿಯಗಾದೆ ಮಾತಾಗಿದ್ದು; **ನಮ್ಮ ಆಸೆಗಳಿಗೆ ಇತಿ–ಮಿತಿಯಿರಬೇಕು** ಎಂಬುದನ್ನು ತಿಳಿಸುತ್ತದೆ.
* 'ಆಸೆಯೇ ದುಃಖಕ್ಕೆ ಕಾರಣ' ಎಂದು ಬುದ್ಧ ಹೇಳಿದ್ದಾನೆ. ಜೀವನದಲ್ಲಿ ಆಸೆಯೇ ಇರಬಾರದೆಂದಲ್ಲ ಆದರೆ ಅದು ಅತಿಯಾಗದೆ ಮಿತವಾಗಿರಬೇಕು. ಅರಮನೆಯ ಸುಖಕ್ಕಿಂತ ನಮ್ಮಲ್ಲಿ ಲಭ್ಯವಿರುವಷ್ಟರಲ್ಲಿ ಬದುಕುವುದರಲ್ಲಿ ನೆಮ್ಮದಿ ಇದೆ. ಆಸೆಗಳು ಅತಿಯಾಗಿ ಆದಾಯ ಕಡಿಮೆ ಇದ್ದಾಗ ಸಾಲ ಮಾಡಬೇಕಾಗುತ್ತದೆ. ಆದ್ದರಿಂದ ಹಾಸಿಗೆ ಇದ್ದಷ್ಟು ಕಾಲುಚಾಚಬೇಕು. ಉಚಿತವಾಗಿ ಸಿಗುತ್ತದೆಂದು ಅಗತ್ಯಕ್ಕಿಂತ ಹೆಚ್ಚು ಸಂಗ್ರಹಣೆ ಮಾಡಲು ಪ್ರಯತ್ನಿಸಬಾರದು. ಹಾಗೆ ಮಾಡಿದರೆ 'ಚಿನ್ನದ ಮೊಟ್ಟೆ ಇಡುವ ಕೋಳಿಯ ಕಥೆಯಂತೆ ಅತಿಯಾಸೆಯಿಂದಾಗಿ ಇದ್ದದ್ದನ್ನೂ ಕಳೆದುಕೊಳ್ಳಬೇಕಾಗುತ್ತದೆ. ಎಂಬುದು ಈ ಗಾದೆಯ ಆಶಯವಾಗಿದೆ.

**ಉದಾಹರಣೆ: 4**

- **ತಾಳಿದವನು ಬಾಳಿಯಾನು.**
- **ಕೋಪದಲ್ಲಿ ಕೊಯ್ದ ಮೂಗು ಮತ್ತೆ ಬಂದಿತೇ?**

**ಈ ಮೇಲಿನ ಗಾದೆಗಳಿಗೆಲ್ಲಾ ಅನ್ವಯಿಸುವ ಒಂದೇ ಉತ್ತರ:**

* ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಾಗಿವೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತು ಗಾದೆಯ ಮಹತ್ವವನ್ನು ಬಹು ಸುಂದರವಾಗಿ ಅರ್ಥೈಸುತ್ತದೆ.

* ಇದು ಒಂದು ಜನಪ್ರಿಯ ಗಾದೆ ಮಾತಾಗಿದ್ದು; **ಅತಿಯಾಗಿ ಕೋಪಮಾಡಿಕೊಳ್ಳದೆ ಸಮಾಧಾನದಿಂದ ಇರಬೇಕು. ಕೋಪ ಅನಾಹುತಕ್ಕೆ ಕಾರಣವಾಗುತ್ತದೆ** ಎಂಬುದನ್ನು ತಿಳಿಸುತ್ತದೆ.

* "ಕೋಪಂ ಅನರ್ಥ ಸಾಧನಂ" ಎಂಬ ಮಾತಿನಂತೆ ಕೋಪವು ಕೆಡುಕನ್ನು ಉಂಟುಮಾಡುತ್ತದೆ. ಕ್ಷಣಕಾಲ ಕೋಪದ ಕೈಗೆ ಬುದ್ಧಿ ಕೊಟ್ಟರೆ ಅದು ನಮ್ಮನ್ನು ಮಾತ್ರವಲ್ಲದೆ ಅದಕ್ಕೆ ಗುರಿಯಾದವರನ್ನೂ ಅಪಾಯಕ್ಕೆ ನೂಕುತ್ತದೆ. ಕುಂಬಾರನು ಹಲವು ದಿನಗಳು ಶ್ರಮ ಪಟ್ಟು ತಯಾರಿಸಿ ಮಡಕೆಯನ್ನು ಒಂದು ದೊಣ್ಣೆಯಿಂದ ನಾಶ ಮಾಡಿದಂತೆ ಕೋಪವು ಅನಾಹುತವನ್ನು ಉಂಟುಮಾಡುತ್ತದೆ. ಆದರೆ ಅದನ್ನು ಸರಿಪಡಿಸಲಾಗುತ್ತದೆಯೇ? ತಾಳ್ಮೆಯಿಂದ ಆಲೋಚಿಸಿ ಮುನ್ನಡೆದವರೇ ಜೀವನದಲ್ಲಿ ವಿಜಯ ಶಾಲಿಗಳಾಗಲು ಸಾಧ್ಯ. ಎಂಬುದು ಈ ಗಾದೆಯ ನೀತಿಯಾಗಿದೆ.

**: ತಾಳಿದವನು ಬಾಳಿಯಾನು :**

ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಾಗಿವೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತು ಗಾದೆಯ ಮಹತ್ವವನ್ನು ಬಹು ಸುಂದರವಾಗಿ ಅರ್ಥೈಸುತ್ತದೆ. ಇಂಥಹ ಅರ್ಥಪೂರ್ಣ ಮಾತುಗಳಲ್ಲಿ ಈ ಗಾದೆಯೂ ಒಂದು.

**'ತಾಳುವಿಕೆಗಿಂತ ತಪವು ಇಲ್ಲ'** ಎಂಬುದು ದಾಸರ ಮಾತು. ತಾಳ್ಮೆ ಮಾನವನ ಮೂಲ ಗುಣವಾಗಬೇಕು. ತಾಳ್ಮೆ ಗೆಟ್ಟರೆ ಅಂಥವರ ಜೀವನ ಕ್ಷಣಮಾತ್ರದಲ್ಲಿ ನಾಶವಾಗುತ್ತದೆ. ತಾಳ್ಮೆಯಿಂದ ಯಾವುದೇ ಆಘಾತವನ್ನು ಸಹಿಸಬಹುದು. ಗಿಡ ನೆಟ್ಟ ಕೂಡಲೇ ಫಲ ಬಿಡಬೇಕು ಎಂದರೆ ಸಾಧ್ಯವಿಲ್ಲ. ಸಂಗೀತಾಭ್ಯಾಸ ಮಾಡಿದರೆ ಒಂದೇ ತಿಂಗಳಿನಲ್ಲಿ ಕಛೇರಿ ನೀಡುವಂತಾಗಬೇಕು ಎನ್ನುವುದು ಸಾಧ್ಯವಿಲ್ಲ. ಪ್ರತಿಯೊಂದು ಸಾಧನೆಯಲ್ಲೂ ತಾಳ್ಮೆ ಬೇಕು. ತಾಳ್ಮೆ ಎಂದರೆ ಆಮೆಗತಿಯಲ್ಲಿ ಸಾಗುವುದು ಎಂದರ್ಥವಲ್ಲ ಯಾವ ಸಾಧನೆಗೆ ಸಾಕಷ್ಟು ಪೂರ್ವಸಿದ್ಧತೆ ಸೂಕ್ತ ವೇದಿಕೆಯ ಅಗತ್ಯವಿರಬೇಕು. ಎಷ್ಟು ಸಮಯ ಮತ್ತು ಪ್ರಯತ್ನಗಳು ಬೇಕೋ ಅವನ್ನು ಪೂರ್ಣತೆಯಿಂದ ಮಾಡಲು ಬೇಕಾಗುವ ಶಕ್ತಿಯೇ ತಾಳ್ಮೆ; ತಾಳ್ಮೆಯಿಂದ ಕಟ್ಟಿದ್ದು, ಪಡೆದಿದ್ದು ದೀರ್ಘಕಾಲ ಬಾಳುತ್ತದೆ. ಹಾಗೂ ತಾಳ್ಮೆ ಮಾನವನ ಅಭಿವೃದ್ಧಿಯ ತಳಹದಿಯಾಗಬೇಕು.

## : ಮನಸ್ಸಿದ್ದರೆ ಮಾರ್ಗ :

ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಾಗಿವೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತು ಗಾದೆಯ ಮಹತ್ವವನ್ನು ಬಹು ಸುಂದರವಾಗಿ ಅರ್ಥೈಸುತ್ತದೆ. ಇಂಥಹ ಅರ್ಥಪೂರ್ಣ ಮಾತುಗಳಲ್ಲಿ ಈ ಗಾದೆಯೂ ಒಂದು.

ಮಾನವನ ಎಲ್ಲಾ ಆಗು–ಹೋಗುಗಳಿಗೂ ಮನಸ್ಸೆ ಕಾರಣ ಎನ್ನುವ ಮಾತೊಂದಿದೆ. ಈ ಗಾದೆ ಮಾತಿನಲ್ಲಿ 'ಮನಸ್ಸು' ಎಂಬುದು ಒಂದು ಗುರಿಯ ಸಂಕೇತವಾಗಿದೆ. ಪ್ರತಿಯೊಬ್ಬರ ಅರ್ಥಪೂರ್ಣ ಬದುಕಿಗೆ ಒಂದು ಗುರಿ ಇರಲೇ ಬೇಕು ಹಾಗೂ ಅದನ್ನು ಸಾಧಿಸುವ ಛಲವು ಇರಬೇಕು. ಹಾಗಾದರೆ ಮಾತ್ರ ನಾವು ಜೀವನದಲ್ಲಿ ಯಶಸ್ಸುಗಳಿಸಲು ಸಾಧ್ಯವಾಗುತ್ತದೆ. ಎಂಥಹ ಕಠಿಣ ಪರಿಸ್ಥಿಯಲ್ಲೂ ಮನಸ್ಸು ಮಾಡಿದರೆ ಅದಕೊಂದು ದಾರಿ ಇದ್ದೆ ಇರುತ್ತದೆ. ನಾವು ಯಾವುದಾದರೊಂದು ಕೆಲಸವನ್ನು ಕೈಗೆತ್ತಿಕೊಂಡು ಆ ಕೆಲಸವನ್ನು ಮಾಡಿ ಮುಗಿಸಬೇಕೆಂದು ಮನಸ್ಸು ಮಾಡಿದರೆ ಅದೆಷ್ಟೆ ಅಡಚಣೆಗಳು, ಅಡ್ಡಿ ಆತಂಕಗಳು ಬಂದರೂ ಸಹ ಅವೆಲ್ಲವನ್ನು ಎದುರಿಸಿ ಗೆಲುವನ್ನು ಪಡೆಯಲು ಸಾಧ್ಯವಿದೆ. ಗುರಿ ಉದ್ದೇಶಗಳಿಲ್ಲದ್ದಿದ್ದರೆ ಸಾಧಿಸುವ ಛಲ ಇಲ್ಲದಿದ್ದರೆ ಯಾವ ಕಾರ್ಯವನ್ನು ಮಾಡಲು ಸಾಧ್ಯವಿಲ್ಲ. ಅಂತೆಯೇ ಬಾಳೆಗೊಂದು ಗೊನೆ, ಬಾಳಿಗೊಂದು ಗುರಿ ಇದ್ದರೆ ಯಶಸ್ಸು ಕಟ್ಟಿಟ್ಟ ಬುತ್ತಿ. ಎಂಬುದನ್ನು ಈ ಗಾದೆ ಮಾತಿನ ಅರ್ಥವಾಗಿದೆ.

## ಸಂದರ್ಭದೊಡನೆ ಸ್ವಾರಸ್ಯವನ್ನು ವಿವರಿಸಿ:

## ಗದ್ಯಭಾಗ

1. **"ನನ್ನ ಮೊಮ್ಮಗುವಿನ ಹೆಣವಿದೆ ಅಲ್ಲಿ; ಅದನ್ನೂ ನೋಡಿ!"**

ಉ: **ಆಯ್ಕೆ:** ಈ ವಾಕ್ಯವನ್ನು ಸಾರಾ ಅಬೂಬಕ್ಕರ್ ಅವರು ರಚಿಸಿರುವ 'ಚಪ್ಪಲಿಗಳು' ಕವನ ಸಂಕಲನದಿಂದ ಆರಿಸಲಾಗಿರುವ 'ಯುದ್ಧ' ಎಂಬ ಗದ್ಯಭಾಗದಿಂದ ತೆಗೆದುಕೊಳ್ಳಲಾಗಿದೆ.

**ಸಂದರ್ಭ:** ಸೈನಿಕರ ಉಡುಪಿನಲ್ಲಿದ್ದ ನಾಲ್ಕೈದು ಜನರು, "ಯಾರಾದರೂ ಗಾಯಗೊಂಡ ಸೈನಿಕರು ಈ ಕಡೆ ಬಂದಿದ್ದಾರೆಯೇ?" ಎಂದು ಕೇಳುತ್ತಾ ಮುದುಕಿಯ ಮನೆಗೆ ನುಗ್ಗಿದಾಗ ಮುದುಕಿಯು "ಇಲ್ಲವಲ್ಲಾ" ಎನ್ನುತ್ತಾಳೆ. ಆಗ ಅಧಿಕಾರಿ "ಆದರೂ ಈ ಮನೆಯಲ್ಲೊಮ್ಮೆ ನೋಡಿ ಬಿಡಿ" ಎಂದು ಸೈನಿಕರಿಗೆ ಅಪ್ಪಣೆ ಮಾಡಿದ ಸಂದರ್ಭದಲ್ಲಿ ರಾಹಿಲನನ್ನು ರಕ್ಷಿಸುವ ಸಲುವಾಗಿ ಮುದುಕಿ, "ಹೂಂ…ನೋಡಿ; ನನ್ನ ಮೊಮ್ಮಗುವಿನ ಹೆಣವಿದೆ ಅಲ್ಲಿ; ಅದನ್ನೂ ನೋಡಿ! ಈ ಯುದ್ಧ ನನ್ನ ಮೊಮ್ಮಗುವನ್ನೂ ಉಳಿಸಲಿಲ್ಲವಲ್ಲ? ಯಾರಿಗಾಗಿ, ಯಾತಕ್ಕಾಗಿ ಈ ಯುದ್ಧ?.." ಎಂದು ನಿರ್ಜೀವ ಮಗುವಿನ ಬಳಿ ಕುಳಿತು ಎದೆ ಬಡಿದುಕೊಂಡು ಅಳುತ್ತಾಳೆ. ಆಗ ಅವರೆಲ್ಲಾ ಹೊರಟು ಹೋಗುತ್ತಾರೆ.

**ಸ್ವಾರಸ್ಯ:** ಶತ್ರು ದೇಶದವನಾದರೂ ತನ್ನ ಗಾಯವನ್ನು ಸಹಿಸಿಕೊಂಡು ಸೊಸೆಯ ಪ್ರಾಣ ಉಳಿಸಿದ ರಾಹಿಲನನ್ನು ರಕ್ಷಿಸಲು ಮುದುಕಿಯ ಉಪಾಯ ಮತ್ತು ಮಾನವೀಯತಾ ಗುಣ ಇಲ್ಲಿ ವ್ಯಕ್ತವಾಗಿದೆ.

2. **"ಬೆಳಕಿಗೊಲಿದವರ್ ಉರಿವ ಬತ್ತಿಯ ಕರುಕ ಕಾಣರು."**

**ಆಯ್ಕೆ:–** ಈ ವಾಕ್ಯವನ್ನು **ಪು. ತಿ. ನರಸಿಂಹಾಚಾರ್** ಅವರು ರಚಿಸಿರುವ **'ಶಬರಿ'** ಗೀತನಾಟಕದಿಂದ ಆಯ್ದ **'ಶಬರಿ'** ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ:–**ರಾಮನದರ್ಶನ ಭಾಗ್ಯದಿಂದ ಸಂತುಷ್ಟಳಾದ ಶಬರಿಯು ಮುಕ್ತಿಯನ್ನು ಪಡೆಯುವುದಕ್ಕಾಗಿ ಅಗ್ನಿ ಪ್ರವೇಶಿಸಿದ ಸಂದರ್ಭದಲ್ಲಿ ರಾಮನು ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :–** "ಬೆಳಕಿಗೆ ಒಲಿದವರು ಉರಿವ ಬತ್ತಿಯ ಕಪ್ಪನ್ನು ನೋಡುವುದಿಲ್ಲ" ದೈವಿಕತೆಯ ಸ್ವರೂಪವೇ ಪ್ರೀತಿ ಎಂಬ ಮಾತು ಶಬರಿಯ ರಾಮಭಕ್ತಿಯ ಶ್ರೇಷ್ಠತೆಯನ್ನು ಬಹುಸ್ವಾರಸ್ಯಪೂರ್ಣವಾಗಿ ವರ್ಣಿಸುತ್ತದೆ.

3. **"ಪ್ರವಾಸವು ಶಿಕ್ಷಣದ ಒಂದು ಭಾಗವಾಗಿದೆ"**

**ಉ: ಆಯ್ಕೆ:** ಈ ವಾಕ್ಯವನ್ನು ವಿ.ಕೃ.ಗೋಕಾಕ ಅವರ 'ಸಮುದ್ರದಾಚೆಯಿಂದ' ಎಂಬ ಪ್ರವಾಸ ಕಥನದಿಂದ ಆರಿಸಲಾಗಿರುವ 'ಲಂಡನ್ ನಗರ' ಎಂಬ ಗದ್ಯಭಾಗದಿಂದ ತೆಗೆದುಕೊಳ್ಳಲಾಗಿದೆ.

**ಸಂದರ್ಭ:** ಲಂಡನ್ ನಗರ ಪ್ರವಾಸ ಕಥನದ ಕೊನೆಯಲ್ಲಿ ಪ್ರವಾಸದ ಶೈಕ್ಷಣಿಕ ಮಹತ್ವವನ್ನು ತಿಳಿಸುವ ಸಂದರ್ಭದಲ್ಲಿ ಪ್ರವಾಸದಿಂದ ತಮ್ಮ ಮನಸ್ಸು ವಿಕಾಸಹೊಂದಿ, ದೃಷಿಕೋನ ವಿಶಾಲವಾದ ಬಗ್ಗೆ 'ಪ್ರವಾಸವು ಶಿಕ್ಷಣದ ಒಂದು ಭಾಗವಾಗಿದೆ' ಎಂದು ಬೇಕನ್ ಹೇಳಿದ ಮಾತನ್ನು ಇಲ್ಲಿ ಲೇಖಕರು ಉದಾಹರಿಸಿದ್ದಾರೆ.

**ಸ್ವಾರಸ್ಯ:** 'ದೇಶ ಸುತ್ತು ಕೋಶ ಓದು' ಎಂಬ ಮಾತಿನಂತೆ ಪರಿಪೂರ್ಣ ಶಿಕ್ಷಣಕ್ಕೆ ಪ್ರವಾಸ ಅತಿ ಮುಖ್ಯ. ಆದ್ದರಿಂದ ಈ ಮಾತು ಪ್ರವಾಸದ ಮಹತ್ವವನ್ನು ತಿಳಿಸುತ್ತದೆ.

4. **''ಸಾಮಾಜಿಕ ಕಾನೂನುಗಳ ಹರಿಕಾರ."**

**ಉ: ಆಯ್ಕೆ:–** ಈ ವಾಕ್ಯವನ್ನು **ಶ್ರೀ ಡಿ.ಎಸ್. ಜಯಪ್ಪಗೌಡ** ಅವರು ರಚಿಸಿರುವ **'ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು'** ಎಂಬ ಕೃತಿಯಿಂದ ಆಯ್ದ **'ಭಾಗ್ಯಶಿಲ್ಪಿಗಳು'** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:–** ನಾಲ್ವಡಿ ಕೃಷ್ಣರಾಜ ಒಡೆಯರ ಕೊಡುಗೆಗಳನ್ನು ವಿವರಿಸುವ ಸಂದರ್ಭದಲ್ಲಿ ಲೇಖಕರು ಈ ಮಾತನ್ನು ಹೇಳಿದ್ದಾರೆ. ನಾಲ್ವಡಿ ಕೃಷ್ಣರಾಜ ಒಡೆಯರು ಸ್ಥಳೀಯ ಸಂಸ್ಥೆಗಳನ್ನು ರಚಿಸಿ ಆಡಳಿತ ವಿಕೇಂದ್ರೀಕರಣ ಮಾಡಿದರು. ಮೈಸೂರು ಸಂಸ್ಥಾನವನ್ನು ಮಾದರಿ

ಸಂಸ್ಥಾನವನ್ನಾಗಿ ರೂಪಿಸಿದರು. 'ಸಾಮಾಜಿಕ ಕಾನೂನುಗಳ ಹರಿಕಾರ' ಎಂದು ಹೆಸರಾದರು. ಸಾಹಿತ್ಯ, ಸಂಗೀತ, ವಾಸ್ತುಶಿಲ್ಪಗಳ ಅಭಿವೃದ್ಧಿಗೆ ಒತ್ತು ನೀಡಿದರು.

**ಸ್ವಾರಸ್ಯ:**– ಸ್ವತಃ ರಾಜರಾಗಿ ಕೇಂದ್ರೀಕೃತ ವ್ಯವಸ್ಥೆಗೆ ಬದಲಾಗಿ ಆಡಳಿತದಲ್ಲಿ ವಿಕೇಂದ್ರೀಕೃತ ವ್ಯವಸ್ಥೆ ತಂದು ಸಾಮಾಜಿಕ ಕಾನೂನುಗಳನ್ನು ಜಾರಿಗೊಳಿಸಿದ ಒಡೆಯರಿಗೆ ಈ ಬಿರುದು ನೀಡಿರುವುದು ಒಪ್ಪುವಂತಹದ್ದಾಗಿದೆ.

**5. "ಯಾವ ಜೀವಿಯೂ ತನ್ನಷ್ಟಕ್ಕೆ ತಾನಿಲ್ಲ."**

**ಆಯ್ಕೆ :**– ಈ ವಾಕ್ಯವನ್ನು **ದೇವನೂರು ಮಹಾದೇವ** ಅವರು ರಚಿಸಿರುವ **'ಎದೆಗೆ ಬಿದ್ದ ಅಕ್ಷರ'** ಕೃತಿಯಿಂದ ಆಯ್ದ **'ಎದೆಗೆ ಬಿದ್ದ ಅಕ್ಷರ'** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

**ಸಂದರ್ಭ :**– ಲೇಖಕರಾದ ದೇವನೂರು ಮಹಾದೇವ ಅವರು ಡಾ. ಅಶೋಕ ಪೈ ಅವರ ಒಂದು ಸಂಶೋಧನಾ ಸತ್ಯಕತೆಯನ್ನು ಉದಾಹರಣೆ ನೀಡುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :**– "ಯಾವುದೇ ಒಂದು ಜೀವಿಗೆ ಆಗುವ ದುಃಖ–ದುಮ್ಮಾನ ಪರಿಸರದಲ್ಲಿ ಉಸಿರಾಡುತ್ತ, ಎಲ್ಲಾ ಜೀವಿಗಳಲ್ಲೂ ಕಂಪನ ಉಂಟುಮಾಡುತ್ತಿರುತ್ತದೆ" ಎಂಬುದು ಈ ಮಾತಿನ ಸ್ವಾರಸ್ಯವಾಗಿದೆ.

**6. "ಖಂಡವಿದೆಕೋ, ಮಾಂಸವಿದೆಕೋ, ಗುಂಡಿಗೆಯ ಬಿಸಿರಕ್ತವಿದೆಕೋ"**

**ಆಯ್ಕೆ:**– ಈ ವಾಕ್ಯವನ್ನು ಶ್ರೀ **ಎ. ಎನ್. ಮೂರ್ತಿರಾವ್** ಅವರು ರಚಿಸಿರುವ **'ಸಮಗ್ರ ಲಲಿತಪ್ರಬಂಧಗಳು'** ಕೃತಿಯಿಂದ ಆಯ್ದ **'ವ್ಯಾಘ್ರಗೀತೆ'** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:**– ಮದಲಿಂಗನ ಕಣಿವೆಯ ಕಾಲುದಾರಿಯಲ್ಲಿ ಶಾನುಭೋಗರ ಬೆನ್ನ ಹಿಂದೆ ಬಂದ ಹುಲಿಯು 'ವೈರಿಯಾದರೂ ಸರಿಯೇ ಹಿಂದಿನಿಂದ ಹಾರಿ ಕೊಲ್ಲಬಾರದು' ಎಂಬ ತನ್ನ ಧರ್ಮವನ್ನು ನೆನೆದು, ಗೊಂದಲದಲ್ಲಿ ಇದ್ದ ಸಂದರ್ಭದಲ್ಲಿ ಪುಣ್ಯಕೋಟಿಯ ಈ ಮಾತನ್ನು ಲೇಖಕರು ನೆನಪಿಸಿಕೊಳ್ಳುತ್ತಾರೆ.

**ಸ್ವಾರಸ್ಯ:**– ತನ್ನನ್ನು ತಿನ್ನಲು ಆಹ್ವಾನ ಕೊಟ್ಟಾಗಲೂ ಹುಲಿರಾಯ ಸತ್ಯವ್ರತೆಯಾದ ಪುಣ್ಯಕೋಟಿಯನ್ನು ತಿನ್ನದೆ ಪ್ರಾಣಬಿಟ್ಟು, ತನ್ನ ಆದರ್ಶವನ್ನು ಹಾಗೂ ಧರ್ಮಶ್ರದ್ಧೆಯನ್ನು ಮೆರೆಯಿತು ಎಂಬುದನ್ನು ಈ ವಾಕ್ಯದಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸಲಾಗಿದೆ.

**7. . ಹುಸಿಯದ ಬೇಹಾರಿಯೇ ಇಲ್ಲ"**

**ಆಯ್ಕೆ :**– ಈ ಮಾತನ್ನು **ಕವಿ ದುರ್ಗಸಿಂಹನು** ರಚಿಸಿರುವ **"ಕರ್ನಾಟಕ ಪಂಚತಂತ್ರ"** ಕೃತಿಯಿಂದ ಆಯ್ದ **'ವೃಕ್ಷಸಾಕ್ಷಿ'** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

**ಸಂದರ್ಭ:**– ಧರ್ಮಬುದ್ಧಿಯು ಆಲದ ಮರದ ಬಳಿ ಬಂದು ನೋಡಿ, ಮರವನ್ನು ಸುತ್ತು ಹಾಕಿ, ದೊಡ್ಡದಾದ ಪೊಟರೆಯನ್ನು, ಮನುಷ್ಯ ಸಂಚಾರವಾಗಿರುವುದನ್ನು ಕಂಡು ನಿಶ್ಚಯಿಸಿದ ಸಂದರ್ಭದಲ್ಲಿ ಧರ್ಮಾಧಿಕಾರಿಗಳಿಗೆ ಈಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :**– ವ್ಯಾಪಾರಿ ವೃತ್ತಿಧರ್ಮದಲ್ಲಿ ಧರ್ಮಬುದ್ಧಿಯು ಅಧರ್ಮಬುದ್ಧಿಯಾಗಿ ಸುಳ್ಳು ಹೇಳುವ ಮನಸ್ಸು ಉಂಟಾಗುತ್ತದೆ ಎಂಬುದನ್ನು ಈ ಮಾತಿನಲ್ಲಿ ಬಹು ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.

**8. "ನಮ್ಮನಾಳ್ವರುಮೊಳರೆ ಎಂದು ವಿಸ್ಮಯಂಬಟ್ಟು"**

**ಆಯ್ಕೆ:** ಈ ವಾಕ್ಯವನ್ನು ಶಿವಕೋಟ್ಯಾಚಾರ್ಯರು ಬರೆದಿರುವ 'ವಡ್ಡಾರಾಧನೆ' ಎಂಬ ಕೃತಿಯಿಂದ ಆರಿಸಲಾದ 'ಸುಕುಮಾರಸ್ವಾಮಿ ಕಥೆ' ಎಂಬ ಗದ್ಯದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:** ರಾಜ ವೃಷಭಾಂಕನು ಸುಕುಮಾರಸ್ವಾಮಿಯ ಮನೆಗೆ ಬಂದು "ಸುಕುಮಾರನು ಎಲ್ಲಿದ್ದಾನೆ?" ಎಂದು ಕೇಳಿದಾಗ ಅದಕ್ಕೆ ಉತ್ತರವಾಗಿ "ಸ್ವಾಮಿ, ಅವನು ಬಹಳ ಸಾಧು, ನೀವು ಬಂದುದನ್ನು ಅವನು ತಿಳಿದಿಲ್ಲ. ಉಪ್ಪರಿಗೆಯ ಮೇಲೆ ಇದ್ದಾನೆ" ಎಂದು ಯಶೋಭದ್ರೆ ಸುಕುಮಾರನಲ್ಲಿಗೆ ಹೋಗಿ "ಮಗನೇ, ರಾಜರು ಬಂದಿದ್ದಾರೆ ಬಾ, ಹೋಗೋಣ* ಎಂದಳು. ಆಗ ಸುಕುಮಾರನು "ರಾಜರೆಂದರೆ ಯಾರು?" ಎಂದು ಕೇಳಲು, ತಾಯಿಯು "ನಮ್ಮನ್ನು ಆಳುವವರು" ಎಂದು ಹೇಳಿದ ಸಂದರ್ಭದಲ್ಲಿ ಸುಕುಮಾರನು ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ:** ಹೊರಗಿನ ಪ್ರಪಂಚದ ಅರಿವೇ ಇಲ್ಲದ ಸುಕುಮಾರನು ತನ್ನ ಮನೆಯೇ ಅರಮನೆ, ನಾವೇ ಆಳುವವರೆಂದು ಭಾವಿಸಿದ್ದ ಸುಕುಮಾರಸ್ವಾಮಿಯು ನಮ್ಮನ್ನು ಆಳುವವರೂ ಇದ್ದಾರೆಯೇ! ಎಂದು ವಿಸ್ಮಯಪಡುವುದು ಇಲ್ಲಿ ಸ್ವಾರಸ್ಯಕರವಾಗಿದೆ.

## ಪದ್ಯಭಾಗ:

**1. "ಪ್ರೀತಿಯ ಹಣತೆಯ ಹಚ್ಚೋಣ"**

**ಆಯೆ :** ಈ ವಾಕ್ಯವನ್ನು ಕವಿ **ಶ್ರೀ ಜಿ. ಎಸ್. ಶಿವರುದ್ರಪ್ಪ** ಅವರು ರಚಿಸಿರುವ **'ಎದೆ ತುಂಬಿ ಹಾಡಿದೆನು'** ಕವನ ಸಂಕಲನದಿಂದ ಆಯ್ದ **'ಸಂಕಲ್ಪಗೀತೆ'** ಎಂಬ ಕವಿತೆಯಿಂದ ಆರಿಸಲಾಗಿದೆ. ಈ ಮಾತನ್ನು ಕವಿ ಓದುಗರಿಗೆ ಹೇಳುತ್ತಾರೆ.

**ಸಂದರ್ಭ :** ಇಂದು ನಮ್ಮ ಸಮಾಜದಲ್ಲಿ ಮಾನವನ ದುರಾಸೆ ಅಸೂಯೆಗಳಿಂದ ಕೊಲೆ ಸುಲಿಗೆಗಳು ಹೆಚ್ಚಾಗಿ ನಮ್ಮ ಸುತ್ತಲೂ ಕತ್ತಲೆ ಆವರಿಸಿದೆ. ಇದರಿಂದ ಮುಕ್ತರಾಗಿ ಉತ್ತಮ ಬದುಕಿಗೆ ಪ್ರೀತಿ ಎಂಬ ಹಣತೆಯನ್ನು ಹಚ್ಚಿದರೆ ಈ ಪ್ರೀತಿಯಿಂದ ನಮ್ಮ ಮನಕ್ಕೆ ತಂಪನ್ನು ಹಿತವನ್ನು ನೀಡುತ್ತದೆ ಎಂದು ಹೇಳುವ ಸಂದರ್ಭದ ಮಾತಿದು.

**ಸ್ವಾರಸ್ಯ :** ಪ್ರೀತಿಯಿಂದ ಎಲ್ಲರ ಬದುಕನ್ನು ಹಸನಾಗಿಸಿಕೊಳ್ಳಬಹುದೆಂಬುದು ಈ ಮಾತಿನ ಸ್ವಾರಸ್ಯವಾಗಿದೆ.

**2. "ಮುಂಗಾರಿನ ಮಳೆಯಾಗೋಣ"**

**ಆಯೆ :** ಈ ವಾಕ್ಯವನ್ನು ಕವಿ **ಶ್ರೀ ಜಿ. ಎಸ್. ಶಿವರುದ್ರಪ್ಪ** ಅವರು ರಚಿಸಿರುವ **'ಎದೆ ತುಂಬಿ ಹಾಡಿದೆನು'** ಕವನ ಸಂಕಲನದಿಂದ ಆಯ್ದ **'ಸಂಕಲ್ಪಗೀತೆ'** ಎಂಬ ಕವಿತೆಯಿಂದ ಆರಿಸಲಾಗಿದೆ.

**ಸಂದರ್ಭ :** ಮಾನವರಾದ ನಾವು "ಜೀವನದಲ್ಲಿ ಧನಾತ್ಮಕ ಮನೋಭಾವನೆಯ ಧೃಡ ಸಂಕಲ್ಪವನ್ನು ಹೊಂದಿರಬೇಕು, ಬದುಕಿನಲ್ಲಿ ಬರುವ ಸವಾಲುಗಳನ್ನು ಸಮರ್ಥವಾಗಿ ಎದುರಿಸಬೇಕು. ಅಭಿವೃದ್ಧಿಯ ಹೆಸರಿನಲ್ಲಿ ಮಲಿನಗೊಳ್ಳುತ್ತಿರುವ ನದಿಜಲಗಳನ್ನು ಮುಂಗಾರಿನ ಮಳೆಯಾಗಿ ಶುದ್ಧೀಕರಿಸುವಂತೆ ಸಮಾಜದ ಕಲ್ಮಶವನ್ನು ಕ್ರಾಂತಿಯ ರೂಪದಲ್ಲಿ ಬದಲಿಸಬೇಕಿದೆ. ಎಂದು ಹೇಳುವ ಸಂದರ್ಭದ ಮಾತಿದು.

**ಸ್ವಾರಸ್ಯ :** ಮುಂಗಾರಿನ ಮಳೆ ಕೊಳೆಯನ್ನು ತೊಳೆಯುವಂತೆ ನಾವು ಸಹ ಆತ್ಮವಿಶ್ವಾಸದಿಂದ ಸಮಾಜದ ಕೊಳೆಯನ್ನು ತೊಳೆಯಲು ಸಾದ್ಯ ಎಂಬುದೇ ಇಲ್ಲಿನ ಸ್ವಾರಸ್ಯವಾಗಿದೆ.

**3. "ಹೊಸ ಭರವಸೆಗಳ ಕಟ್ಟೋಣ"**

**ಆಯ್ಕೆ :** ಈ ವಾಕ್ಯವನ್ನು ಕವಿ **ಶ್ರೀ ಜಿ. ಎಸ್. ಶಿವರುದ್ರಪ್ಪ** ಅವರು ರಚಿಸಿರುವ **'ಎದೆ ತುಂಬಿ ಹಾಡಿದೆನು'** ಕವನ ಸಂಕಲನದಿಂದ ಆಯ್ದ **'ಸಂಕಲ್ಪಗೀತೆ'** ಎಂಬ ಕವಿತೆಯಿಂದ ಆರಿಸಲಾಗಿದೆ.

**ಸಂದರ್ಭ :** ನಾವು ಸಕಾರಾತ್ಮಕವಾಗಿ ಯೋಚಿಸಿ ಸಮಾಜದಲ್ಲಿರುವ ಶೋಷಿತರು, ಹಿಂದುಳಿದವರು ಹಾಗೂ ಬಡವರನ್ನು ಕೈಹಿಡಿದು ಮೇಲೆತ್ತಿ ಮುನ್ನೆಡಸಿದಾಗ ಅವರಿಗೆ ಹೊಸ ಭರವಸೆಗಳು ಮೂಡುತ್ತವೆ ಎಂದು ಹೇಳುವ ಸಂದರ್ಭದ ಮಾತಿದು.

**ಸ್ವಾರಸ್ಯ :** ಕವಿ ಆರೋಗ್ಯಕರ ಸಮಾಜದ ನಿರ್ಮಾಣವಾಗಬೇಕಾದರೆ ಶೋಷಿತ ಹಿಂದುಳಿದವರಿ ಭರವಸೆಗಳನ್ನು ನೀಡಬೇಕೆಂಬುದೇ ಈ ಮಾತಿನ ಸ್ವಾರಸ್ಯವಾಗಿದೆ.

**4. " ಹೊಸಗಾಲದ ಹಸುಮಕ್ಕಳ ಹರಸಿ "**

ಈ ವಾಕ್ಯವನ್ನು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕವಿ ದ.ರಾ.ಬೇಂದ್ರೆಯವರು ಬರೆದಿರುವ **'ಗರಿ'** ಕವನಸಂಕಲನದಿಂದ ಆರಿಸಿಕೊಳ್ಳಲಾದ **'ಹಕ್ಕಿ ಹಾರುತಿದೆ ನೋಡಿದಿರಾ '** ಎಂಬ ಕವನದಿಂದ ಆಯ್ಕೆಮಾಡಿಕೊಳ್ಳಲಾಗಿದೆ.

ಕವಿ ಕಾಲಚಕ್ರ ಉರುಳಿದಂತೆ ಹೊಸತನವು ಹೊಸ ಹೊಸದಾಗಿ ಮೂಡಿ ಬರಬೇಕು ಎಂದು ಹೇಳುತ್ತಾ ಕಾಲ ಉರುಳಿದಂತೆ ಪ್ರತಿಯೊಂದು ಘಟನೆಯು ಇತಿಹಾಸವಾಗಿ ಹೊಸತನಕ್ಕೆ ನಾಂದಿಯಾಗುತ್ತದೆ. ಆ ಹೊಸತನ ಚಿಕ್ಕ ಮಕ್ಕಳಲ್ಲಿ ನವ ಚೈತನ್ಯವನ್ನು ತುಂಬುತ್ತದೆ. ಹೊಸ ಯುಗಕ್ಕೆ ಕಾಲಿಡುವ ಮಕ್ಕಳಿಗೆ ಪ್ರಕೃತಿಯ ಜೀವನದಲ್ಲಿ ಹೊಸದನ್ನು ಪಡೆಯಲಿ ಎಂದು ಹರಸುತ್ತಾಳೆ ಎಂದಿರುವ ಕವಿ ಪ್ರಕೃತಿ ಸಹಜ ಕ್ರಿಯೆಯೊಂದಿಗೆ ಯುಗಗಳೇ ಉರುಳಿ ಹೊಸತನಕ್ಕೆ ತೆರೆದುಕೊಳ್ಳುವ ಸಂಕೇತವಾಗಿದೆ ಎಂದು ಹೇಳುವ ಸಂದರ್ಭವಿದು.

**5. "ಮಂಗಳ ಲೋಕದ ಅಂಗಳಕೇರಿ"**

**ಆಯ್ಕೆ:**–ಈ ವಾಕ್ಯವನ್ನು**'ಅಂಬಿಕಾತನಯದತ್ತ'** ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ **ದ.ರಾ.ಬೇಂದ್ರೆ**ಅವರು ರಚಿಸಿರುವ **'ಗರಿ'** ಕವನ ಸಂಕಲನದಿಂದ ಆಯ್ದ**'ಹಕ್ಕಿ ಹಾರುತಿದೆ ನೋಡಿದಿರಾ'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ:**– ಕವಿ ದ.ರಾ.ಬೇಂದ್ರೆ ಅವರು ಕಾಲದಗತಿಯನ್ನು ಹಾರುವ ಹಕ್ಕಿಗೆ ಸಮೀಕರಿಸಿ ವರ್ಣಿಸುತ್ತಾ ;ಕಾಲಪಕ್ಷಿಯು 'ನಕ್ಷತ್ರಗಳನ್ನು ಮೀರಿ; ಚಂದ್ರಲೋಕದ ನೀರನ್ನು ಹೀರಿ; ಆಟವಾಡಲು ಹಾರಾಡಲು ಮಂಗಳ ಲೋಕದ ಅಂಗಳಕ್ಕೇರಿದೆ' ಎಂದು ವರ್ಣಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :**– ವೇಗದ ಕಾಲಗತಿಯಲ್ಲಿ ಮಾನವನು ವೈಜ್ಞಾನಿಕವಾಗಿ ಮುಂದುವರೆಯುತ್ತಾ ಚಂದ್ರ, ಮಂಗಳ ಗ್ರಹ ಮುಂತಾದ ಆಕಾಶ ಕಾಯಗಳೆಡೆಗೆ ಹಾರುತ್ತಿರುವುದನ್ನು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.

6. "ಬಲ್ಲರು ಯಾರಾ ಹಾಕಿದ ಹೊಂಚ"

**ಆಯ್ಕೆ:**–ಈ ವಾಕ್ಯವನ್ನು**'ಅಂಬಿಕಾತನಯದತ್ತ'** ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ **ದ.ರಾ.ಬೇಂದ್ರೆ**ಅವರು ರಚಿಸಿರುವ **'ಗರಿ'** ಕವನ ಸಂಕಲನದಿಂದ ಆಯ್ದ **'ಹಕ್ಕಿ ಹಾರುತಿದೆ ನೋಡಿದಿರಾ'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ:** ಕವಿಯು ಕಾಲಪಕ್ಷಿಯು ವಿಶ್ವದ ಎಲ್ಲಾ ದಿಕ್ಕುಗಳಲ್ಲಿನ ಅಂಚುಗಳನ್ನು ಮೀರಿ ಅದರಾಚೆಗೆ ಚಾಚಿಚೆ. ಬ್ರಹ್ಮ ನಿರ್ಮಿಸಿದ ಜಗತ್ತನೇ ಒಡೆಯಲು ಎಂದೋ ಪ್ರಯತ್ನಿಸಿದೆಯೆಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ:** ಕವಿ ಸೃಷ್ಟಿಸಿದ ಕಾಲಪಕ್ಷಿಯು ಬ್ರಹ್ಮಾಂಡದೊಳಗಿನ ಆಳವನ್ನು ಭೇದಿಸಲು ಹೊಂಚು ಹಾಕಿರುವುದನ್ನು ಯಾರು ಬಲ್ಲರು? ಎಂದು ಪ್ರಶ್ನಿಸುವ ಮೂಲಕ ಕಾಲ ಪಕ್ಷಿಯ ಅಗಾಧತೆಯನ್ನು ಸ್ವಾರಸ್ಯಪೂರ್ಣವಾಗಿ ಈ ವಾಕ್ಯದಲ್ಲಿ ವಿವರಿಸಿದ್ದಾರೆ.

**7. " ಎಲ್ಲ ಜನರಿಗೆ ಜೋರ ಮಾಡಿ ಕಸಿದುಕೊಳ್ಳಿರಿ ಹತಾರ "**

**ಆಯ್ಕೆ:** ಈ ವಾಕ್ಯವನ್ನು ಡಾ॥ ಬಿ.ಎಸ್.ಗದ್ದಗಿಮಠ ಅವರು ಸಂಪಾದಿಸಿರುವ 'ಕನ್ನಡ ಜನಪದ ಗೀತೆಗಳು' ಎಂಬ ಕೃತಿಯಿಂದ ಆಯ್ದು "ಹಲಗಲಿ ಬೇಡರು" ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:** ಕಂಪನಿ ಸರ್ಕಾರ ' ನಿಶ್ಯಸ್ತ್ರೀಕರಣ' ಕಾಯಿದೆ ಹೊರಡಿಸಿ ಎಲ್ಲಾ ಜನರ ಬಳಿ ಇದ್ದ ಶಸ್ತ್ರಾಸ್ತ್ರಗಳನ್ನು ಕಸಿದುಕೊಳ್ಳತೊಡಗಿದರು. ಕೊಡಲು ಒಪ್ಪದಿದ್ದವರನ್ನು ಬಗ್ಗು ಬಡಿದು ಕಸಿದುಕೊಳ್ಳಲಾಯಿತು. ಹಲಗಲಿಯಲ್ಲಿ ನಡೆದ ನಿಶ್ಯಸ್ತ್ರೀಕರಣ ಕಾಯಿದೆಯ ಪರಿಣಾಮವನ್ನು ಹೇಳುವ ಮಾತಿದು. ಅಂದರೆ ಬೇಡ ಜನಾಂಗದವರಿಗೆ ಆಯುಧಗಳೇ ಜೀವನಾಧಾರ ಇವುಗಳನ್ನು ಕೊಡಲೊಪ್ಪದ ಹಲಗಲಿ ಬೇಡರು ದಂಗೆ ಎದ್ದರು. ಇವರನ್ನು ಬಗ್ಗು ಬಡಿದು ಕಂಪನಿ ಸರ್ಕಾರವು ಆಯುಧಗಳನ್ನು ವಶಪಡಿಸಿ ಕೊಂಡರೆಂಬ ಭಾವವನ್ನು ವ್ಯಕ್ತಪಡಿಸುವ ಸಂದರ್ಭವಿದು.

**ಸ್ವಾರಸ್ಯ:** ಬ್ರಿಟಿಷರ ದಬ್ಬಾಳಿಕೆಯನ್ನು ಈ ಸಾಲು ಸ್ವಾರಸ್ಯಕರವಾಗಿ ವರ್ಣಿಸುತ್ತದೆ.

**8. " ಜೀವ ಸತ್ತು ಹೋಗುವುದು ಗೊತ್ತ "**

**ಆಯ್ಕೆ:** ಈ ವಾಕ್ಯವನ್ನು ಡಾ॥ ಬಿ.ಎಸ್.ಗದ್ದಗಿಮಠ ಅವರು ಸಂಪಾದಿಸಿರುವ 'ಕನ್ನಡ ಜನಪದ ಗೀತೆಗಳು' ಎಂಬ ಕೃತಿಯಿಂದ ಆಯ್ದು "ಹಲಗಲಿ ಬೇಡರು" ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:** ಕಂಪನಿ ಸರ್ಕಾರದ ಹೊರಡಿಸಿದ ಆಯಧಗಳನ್ನು ಒಪ್ಪಿಸಬೇಕೆಂಬ ಆದೇಶದ ವಿರುದ್ಧ ದಂಗೆ ಎದ್ದ ಹಲಗಲಿಯ ಹನುಮ, ಬಾಲ, ಜಡಗ ಮತ್ತು ರಾಮ ಇವರು ನಾಲ್ಕು ಜನರು ಜೊತೆಯಾಗಿ ನಾವು ಹತಾರಗಳನ್ನು ಕೊಡಬಾರದು ಹತಾರಗಳನ್ನು ನಾವು ಕೊಟ್ಟರೆ ಕಂಪನಿಯವರ ಗುಲಾಮಗಿರಿಯನ್ನು ಒಪ್ಪಿದಂತೆ ಎಂದು ತೀರ್ಮಾನಕ್ಕೆ ಬಂದ ಸಂದರ್ಭ ಇದಾಗಿದೆ.

**ಸ್ವಾರಸ್ಯ:** ಹಲಗಲಿಯ ಈ ವೀರ ಯೋಧರು ಅನಕ್ಷರಾಗಿದ್ದರೂ ಅವರಲ್ಲಿನ ದೇಶ ಪ್ರೇಮದ ಕೊರತೆ ಇಲ್ಲವೆಂಬ ಸ್ವಾರಸ್ಯವಿದೆ.

**9. " ಹೊಡೆದಾರೊ ಗುಂಡ ಕರುಣ ಇಲ್ಲದ್ದಂಗ "**

**ಆಯ್ಕೆ:** ಈ ವಾಕ್ಯವನ್ನು ಡಾ॥ ಬಿ.ಎಸ್.ಗದ್ದಗಿಮಠ ಅವರು ಸಂಪಾದಿಸಿರುವ 'ಕನ್ನಡ ಜನಪದ ಗೀತೆಗಳು' ಎಂಬ ಕೃತಿಯಿಂದ ಆಯ್ದು "ಹಲಗಲಿ ಬೇಡರು" ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:** ಜನಪದ ಲಾವಣಿಕಾರ ಈ ಮಾತನ್ನು ಕೇಳುಗರಿಗೆ ಹೇಳುತ್ತಾನೆ. ಆಯಧಗಳನ್ನು ಕೊಡಲು ನಿರಾಕರಿಸಿ ದಂಗೆ ಎದ್ದು ಹಲಗಲಿ ವೀರರು ಹೆಬಲಕ ಎಂಬ ಅಧಿಕಾರಿಯನ್ನು ಹತ್ಯೆಮಾಡಿದಾಗ ಆಯಧಗಳನ್ನು ಕೊಡಲು ನಿರಾಕರಿಸಿ ದಂಗೆ ಎದ್ದು ಹಲಗಲಿ ವೀರರು ಹೆಬಲಕ ಎಂಬ ಅಧಿಕಾರಿಯನ್ನು ಹತ್ಯೆಮಾಡಿದಾಗ ಕಲಾದಗಿಯಿಂದ ಬಂದ ದಂಡು ಹಲಗಲಿಯನ್ನು ಮುತ್ತಿ ಸಿಟ್ಟಿನಿಂದ ನಿರ್ದಯತೆಯಿಂದ ಕರುಣೆ ತೋರದೆ ಗುಂಡಿನ ಭರ್‌ಪೂರ ಹರಿಸಿ ಹಲಗಲಿಯ ವೀರರನ್ನು, ಜನರನ್ನು ಕೊಂದು ದಂಗೆಯನ್ನು ಅಡಗಿಸಿದರು ಎಂಬ ಸಂದರ್ಭದ ಸ್ವಾರಸ್ಯವಿದು.

ಸ್ವಾರಸ್ಯವಿದು.

**ಸ್ವಾರಸ್ಯ:** ಬ್ರಿಟಿಷರ ನಿರ್ದಯತೆಯನ್ನು ಈ ಸಾಲು ಸ್ವಾರಸ್ಯಕರವಾಗಿ ವರ್ಣಿಸುತ್ತದೆ.

**10. "ರವಿಸುತನಕಿವಿಯಲಿ ಬಿತ್ತಿದನು ಭಯವ"**

**ಆಯ್ಕೆ:** ಈ ವಾಕ್ಯವನ್ನು**ಕುಮಾರವ್ಯಾಸನೆಂದು**ಪ್ರಸಿದ್ಧನಾದ **ಗದುಗಿನ ನಾರಣಪ್ಪನು**ರಚಿಸಿರುವ **'ಕರ್ಣಾಟ ಭಾರತ ಕಥಾಮಂಜರಿ'** ಎಂಬ ಮಹಾ ಕಾವ್ಯದಿಂದ ಆಯ್ದ **'ಕೌರವೇಂದ್ರನ ಕೊಂದೆ ನೀನು'** ಎಂಬ **ಪದ್ಯಭಾಗದಿಂದ ಆರಿಸಲಾಗಿದೆ.**

**ಸಂದರ್ಭ:** ಕೃಷ್ಣನು ಪಾಂಡವ ಕೌರವರ ನಡುವೆ ಸಂಧಿ ಮಾಡಲು ಹೋಗಿ, ವಿಫಲನಾಗಿ ಹಿಂದಿರುಗುವಾಗ ಕರ್ಣನನ್ನು ಜೊತೆಯಲ್ಲಿ ಕರೆದುಕೊಂಡು ಬಂದು, ಮೈದುನತನದ ಸರಸದಲ್ಲಿ ಮಾತನಾಡಿಸುವ ಸಂದರ್ಭದಲ್ಲಿ ಈ ಮಾತನ್ನು ಕವಿಯು ಹೇಳುತ್ತಾನೆ.

**ಸ್ವಾರಸ್ಯ:** "ಕರ್ಣ ನಿಮ್ಮಲ್ಲಿ, ಯಾದವರು ಕೌರವರಲ್ಲಿ ಭೇದವಿಲ್ಲ. ಹೇಳುವುದಾದರೆ ವಂಶದಲ್ಲಿ ಮೊದಲೆರಡಿಲ್ಲ ನಿನ್ನಾಣೆ. ರಾಜ ನೀನು, ಮನದಲ್ಲಿ ನಡೆದುದರ ಅರಿವಿಲ್ಲ" ಎಂದು ಹೇಳುತ ಕೃಷ್ಣನು ಕರ್ಣನ ಕಿವಿಯಲ್ಲಿ ಉಭಯವನ್ನು (ದ್ವಂದ್ವವನ್ನು) ಬಿತ್ತಿದನು ಎಂದು ಕವಿಯು ಸ್ವಾರಸ್ಯ ಪೂರ್ಣವಾಗಿ ವರ್ಣಿಸುತ್ತಾನೆ.

**11."ಜೀಯ ಹಸಾದವೆಂಬುದು ಕಷ್ಟ "**

**ಆಯ್ಕೆ:** ಈ ವಾಕ್ಯವನ್ನು **ಕುಮಾರವ್ಯಾಸನೆಂದು** ಪ್ರಸಿದ್ಧನಾದ **ಗದುಗಿನ ನಾರಣಪ್ಪನು** ರಚಿಸಿರುವ **'ಕರ್ಣಾಟ ಭಾರತ ಕಥಾಮಂಜರಿ'** ಎಂಬ ಮಹಾ ಕಾವ್ಯದಿಂದ ಆಯ್ದ **'ಕೌರವೇಂದ್ರನ ಕೊಂದೆ ನೀನು'** ಎಂಬ **ಪದ್ಯಭಾಗದಿಂದ ಆರಿಸಲಾಗಿದೆ.**

**ಸಂದರ್ಭ:–** ಕೃಷ್ಣನು ಪಾಂಡವ ಕೌರವರ ನಡುವೆ ಸಂಧಿ ಮಾಡಲು ಹೋಗಿ, ವಿಫಲನಾಗಿ ಹಿಂದಿರುಗುವಾಗ ಕರ್ಣನನ್ನು ಜೊತೆಯಲ್ಲಿ ಕರೆದುಕೊಂಡು ಬಂದು, ಮೈದುನತನದ ಸರಸದಲ್ಲಿ ಮಾತನಾಡಿಸುವ ಸಂದರ್ಭದಲ್ಲಿ ಈ ಮಾತನ್ನು ಕೃಷ್ಣನು ಕರ್ಣನಿಗೆ ಹೇಳುತ್ತಾನೆ.

**ಸ್ವಾರಸ್ಯ :** "ಕರ್ಣ ನಿನ್ನ ಎಡಗಡೆ ಕೌರವರು, ಬಲಗಡೆ ಪಾಂಡವರು, ಎದುರಿನಲ್ಲಿ ಮಾದ್ರ ಮಾಗಧ ಯಾದವಾದಿಗಳು ಇರುವಾಗ, ನೀನು ಓಲಗದಲ್ಲಿ ವಿಲಾಸದಿಂದ ಮೆರೆಯುವುದನ್ನು ಬಿಟ್ಟು, ಕೌರವನಿಗೆ ಜೀಯ ಪ್ರಸಾದವೆಂಬುದು ಕಷ್ಟವಾಗುವುದಿಲ್ಲವೇ?" ಎಂದು ಕೃಷ್ಣನು ಸ್ವಾರಸ್ಯ ಪೂರ್ಣವಾಗಿ ಹೇಳುತ್ತಾನೆ.

12. "ಮಾರಿಗೌತಣವಾಯ್ತು ನಾಳಿನ ಭಾರತವು"

**ಆಯ್ಕೆ:** ಈ ವಾಕ್ಯವನ್ನು **ಕುಮಾರವ್ಯಾಸನೆಂದು** ಪ್ರಸಿದ್ಧನಾದ **ಗದುಗಿನ ನಾರಣಪ್ಪನು** ರಚಿಸಿರುವ **'ಕರ್ಣಾಟ ಭಾರತ ಕಥಾಮಂಜರಿ'** ಎಂಬ ಮಹಾ ಕಾವ್ಯದಿಂದ ಆಯ್ದ **'ಕೌರವೇಂದ್ರನ ಕೊಂದೆ ನೀನು'** ಎಂಬ **ಪದ್ಯಭಾಗದಿಂದ ಆರಿಸಲಾಗಿದೆ.**

**ಸಂದರ್ಭ:–** ಕರ್ಣನು ಕೃಷ್ಣನಿಗೆ "ಚತುರಂಗ ಬಲದಿಂದ ಕೂಡಿದ ಕೌರವ, ಪಾಂಡವರ ಯುದ್ಧವು ಮೃತ್ಯುದೇವತೆಗೆ ಔತಣಕೂಟದಂತೆ ಆಗುವುದು. ಈ ಯುದ್ಧದಲ್ಲಿ ಕೌರವನ ಋಣ ತೀರಿಸಲು ಆತನ ವೈರಿಗಳೊಡನೆ ಹೋರಾಡಿ ವೀರಮರಣವನ್ನು ಅಪ್ಪುವೆನು. ಆದರೆ ನಿನ್ನ ಐವರು ಪಾಂಡವರನ್ನು ನೋಯಿಸುವುದಿಲ್ಲ"ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ :** ಈ ವಾಕ್ಯದಲ್ಲಿ ಕರ್ಣನ ಸ್ವಾಮಿನಿಷ್ಠೆ, ಯುದ್ಧದಲ್ಲಿ ಹೋರಾಡುವ ವೀರಾವೇಶ, ಪಾಂಡವರ ರಕ್ಷಣೆಗಾಗಿ ತನ್ನ ಪ್ರಾಣ ನೀಡುವ ಹೃದಯ ವೈಶಾಲ್ಯತೆ ಮೊದಲಾದ ಅಂಶಗಳು ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

**13. "ಹಸುರಾದುದು ಕವಿಯಾತ್ಮಂ"**

**ಆಯ್ಕೆ:** ಈ ವಾಕ್ಯವನ್ನು ಕುವೆಂಪು ಅವರ **'ಪಕ್ಷಿಕಾಶಿ'** ಕವನ ಸಂಕಲನದಿಂದ ಆರಿಸಲಾಗಿರುವ **'ಹಸುರು'** ಎಂಬ ಪದ್ಯದಿಂದ ತೆಗೆದುಕೊಳ್ಳಲಾಗಿದೆ.

**ಸಂದರ್ಭ:** ನವರಾತ್ರಿಯ ನವಧಾತ್ರಿಯಈ ಶ್ಯಾಮಲ ವರ್ಣದ ಕಡಲಿನಲ್ಲೂ ಕವಿಯ ಆತ್ಮ ಹಸುರಾಯಿತು, ರಸಪಾನದಲ್ಲಿ ಮಿಂದಿತು ಎಂದು ಪ್ರಕೃತಿಯಲ್ಲಿ ವ್ಯಾಪಿಸಿರುವ ಹಸುರಿನ ಬಗ್ಗೆ ವರ್ಣಿಸುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳಿದ್ದಾರೆ.ಇದು ಕುವೆಂಪು ಅವರ ಸ್ಥಳವಾದ ಮಲೆನಾಡಿನ ಕುಪ್ಪಳ್ಳಿಯ 'ಕವಿಶೈಲ'ದಲ್ಲಿ ಅವರಿಗುಂಟಾದ ಸೌಂದರ್ಯಾನುಭವ. ಪ್ರಕೃತಿ, ಅಲ್ಲಿಯ ಹಸುರುಗಳೊಂದಿಗೆ ಕುವೆಂಪು ಹೊಂದಿದ್ದ ಅವಿನಾಭಾವ ಸಂಬಂಧವನ್ನು ತೋರಿಸುತ್ತದೆ.

**ಸ್ವಾರಸ್ಯ:** ನವರಾತ್ರಿಯ ಕಪ್ಪು ಕಡಲಿನಲ್ಲೂ ಹಸುರನ್ನು ಕಾಣುವ ಕುವೆಂಪು ಅವರ ಕವಿಯಾತ್ಮದ ಪ್ರಕೃತಿಯ ರಸಾಸ್ವಾದನೆ ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

**14. "ಬೇರೆ ಬಣ್ಣವನೆ ಕಾಣೆ"**

**ಆಯ್ಕೆ:** ಈ ವಾಕ್ಯವನ್ನು ಕುವೆಂಪು ಅವರ **'ಪಕ್ಷಿಕಾಶಿ'** ಕವನ ಸಂಕಲನದಿಂದ ಆರಿಸಲಾಗಿರುವ **'ಹಸುರು'** ಎಂಬ ಪದ್ಯದಿಂದ ತೆಗೆದುಕೊಳ್ಳಲಾಗಿದೆ.

**ಸಂದರ್ಭ:** ಅಶ್ವೀಜ ಮಾಸದಲ್ಲಿ ಬತ್ತದ ಗದ್ದೆಗೆ ಮುತ್ತುವ ಗಿಳಿಗಳ ಹಸುರು ಬಣ್ಣದ ನೋಟ;ಅದರ ಪಕ್ಕದಲ್ಲೇ ಕಾಡಂಚಿನಲ್ಲಿ ಫಲಭರಿತ ಅಡಕೆಯ ತೋಟ; ಹುಲ್ಲಿನ ಮಕಮಲ್ಲಿನ ಹೊಸಪಚ್ಚೆಯ ಜಮಖಾನೆ ಹರಡಿದಂತೆ ಭೂಮಿಯು ಹಸುರಿನಿಂದ ಮೈ ಮುಚ್ಚಿರುವ ಬಗೆಯನ್ನು ವರ್ಣಿಸುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳಿದ್ದಾರೆ.

**ಸ್ವಾರಸ್ಯ:** ಭೂಮಿಯ ಮೇಲೆ ಎಲ್ಲೆಂದರಲ್ಲಿ ವಿವಿಧ ರೂಪದಲ್ಲಿ ಹಸುರು ಪಸರಿಸಿರುವುದನ್ನು ನೋಡಿ ರಸಾನಂದ ಹೊಂದಿದ ಕವಿ 'ಬೇರೆ ಬಣ್ಣಗಳೇ ಕಾಣದಾದವು' ಎಂದು ಹೇಳಿರುವಲ್ಲಿ ಅವರ ರಸಾಸ್ವಾದನೆಯ ಔನ್ನತ್ಯವನ್ನು ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸಿರುವುದನ್ನು ಕಾಣಬಹುದಾಗಿದೆ.

**15. "ಹಸುರತ್ತಲ್, ಹಸುರಿತ್ತಲ್, ಹಸುರೆತ್ತಲ್"**

**ಆಯ್ಕೆ:** ಈ ವಾಕ್ಯವನ್ನು ಕುವೆಂಪು ಅವರ **'ಪಕ್ಷಿಕಾಶಿ'** ಕವನ ಸಂಕಲನದಿಂದ ಆರಿಸಲಾಗಿರುವ **'ಹಸುರು'** ಎಂಬ ಪದ್ಯದಿಂದ ತೆಗೆದುಕೊಳ್ಳಲಾಗಿದೆ.

**ಸಂದರ್ಭ:** ಅತ್ತ–ಇತ್ತ–ಎತ್ತಲೂ ಹಸುರೇ ಆವರಿಸಿರುವುದನ್ನು ಕವಿ ದೃಷ್ಟಿಯಿಂದ ನೋಡಿದ ಕುವೆಂಪು ಅವರು 'ಕಡಲಿನಲ್ಲಿ ಎಲ್ಲೆಲ್ಲೂ ಹಸುರೇ ಹಸುರು. ಕವಿಯ ಆತ್ಮ ಹಸುರು ನೆತ್ತರಿನಿಂದ ಹಸುರುಗಟ್ಟಿತು' ಎಂದು ವರ್ಣಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳಿದ್ದಾರೆ. ಎಲ್ಲೆಲ್ಲೂ ಹಸುರನ್ನು ಕಂಡ ಕವಿಯಾತ್ಮವು ಹಸುರುಗಟ್ಟಿತಲ್ಲದೆ ಅವರ ದೇಹದಲ್ಲಿನ ರಕ್ತವೂ ಹಸುರೇ! ಎಂದು ವರ್ಣಿಸಿದ್ದಾರೆ.

**ಸ್ವಾರಸ್ಯ:** ಹಸುರು ಕೇವಲ ಸಸ್ಯವರ್ಗಕ್ಕೆ ಮಾತ್ರ ಸೀಮಿತವಲ್ಲ ಇಡೀ ಪ್ರಕೃತಿಯ ಚೈತನ್ಯಕ್ಕೆ ಅದೇ ಕಾರಣ. ಪ್ರಕೃತಿಗಷ್ಟೇ ಅಲ್ಲದೆ 'ರಕ್ತದಲ್ಲೂ ಹಸುರು ವ್ಯಾಪಿಸಿದೆ' ಎಂದು ಸ್ವಾರಸ್ಯ ಪೂರ್ಣವಾಗಿದೆ.

**16. "ನೆಲಕಿಟಿವೆನೆಂದು ಬಗೆದಿರೆ ಚಲಕಿಟಿವೆಂ"**

**ಉ: ಆಯ್ಕೆ:** ಈ ವಾಕ್ಯವನ್ನು ಮಹಾಕವಿ **ರನ್ನ** ಬರೆದಿರುವ **'ಸಾಹಸ ಭೀಮ ವಿಜಯ'** ಎಂಬ ಕೃತಿಯಿಂದ ಆರಿಸಲಾಗಿರುವ **'ಛಲಮನೆ ಮೆಱೆವೆಂ'** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:** ಭೀಷ್ಮಾಚಾರ್ಯರು 'ಪಾಂಡವರನ್ನು ಒಪ್ಪಿಸುತ್ತೇನೆ, ಸಂಧಿಮಾಡಿಕೋ' ಎಂದು ಹೇಳಿದಾಗ ದುರ್ಯೋಧನನು "ಅಜ್ಜಾ, ನಾನು ಈ ಭೂಮಿಗಾಗಿ ಯುದ್ಧ ಮಾಡುವೆನೆಂದು ಭಾವಿಸಿರುವಿರಾ? ನಾನು ಛಲಕ್ಕಾಗಿ ಪಾಂಡವರೊಡನೆ ಹೋರಾಡುವೆನು. ಈ ಭೂಮಿ ನನಗೆ ಪಾಳುಬಿದ್ದ ನೆಲಕ್ಕೆ ಸಮ" ಎನ್ನುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ:** ದುರ್ಯೋಧನನ ಈ ಮಾತಿನಲ್ಲಿ ನಶ್ವರವಾದ ಅರಸುತನಕ್ಕಿಂತ ಛಲದಿಂದ ಬಾಳುವುದೇ ನಿಜವಾದ ಕ್ಷತ್ರಿಯನ ಗುಣ. ಸಂಧಿಮಾಡಿಕೊಳ್ಳುವುದು ಹೇಡಿತನದ ಲಕ್ಷಣ ಎಂಬ ಧ್ವನಿ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

17. **"ಸಮರದೊಳೆನಗಜ್ಜ ಪೇಟಿಮಾವುದು ಕಜ್ಜಂ."**

**ಉ: ಆಯ್ಕೆ:** ಈ ವಾಕ್ಯವನ್ನು ಮಹಾಕವಿ **ರನ್ನ** ಬರೆದಿರುವ **'ಸಾಹಸ ಭೀಮ ವಿಜಯ'** ಎಂಬ ಕೃತಿಯಿಂದ ಆರಿಸಲಾಗಿರುವ **'ಛಲಮನೆ ಮೆಱೆವೆಂ'** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:** ಭೀಷ್ಮಾಚಾರ್ಯರು ನೀನು ಒಪ್ಪುವೆಯಾದರೆ ಪಾಂಡವರನ್ನು ಒಪ್ಪಿಸಿ ಒಪ್ಪಂದ ಮಾಡಿ ಮೊದಲಿದ್ದಂತೆ ನಡೆಯುವ ಹಾಗೆ ಮಾಡುವೆನು. ಈಗಲೂ ಕೂಡ ಅವರು ನಮ್ಮ ಮಾತನ್ನು ಮೀರದೆ ಪಾಲಿಸುತ್ತಾರೆ. ನೀನೂ ಕೂಡ ನಮ್ಮ ಮಾತನ್ನು ಮೀರದೆ ನಡೆದುಕೊಳ್ಳಬೇಕು. ಎಂದು ಭೀಷ್ಮರು ಹೇಳಿದಾಗ ದುರ್ಯೋಧನನು ಮುಗುಳು ನಗೆ ನಕ್ಕು "ಅಜ್ಜಾ, ನಿಮಗೆ ನಮಸ್ಕರಿಸಿ ಹೋಗಲೆಂದು ಬಂದೆನೇ ಹೊರತು ಶತ್ರುಗಳೊಡನೆ ಒಪ್ಪಂದವನ್ನು ಏರ್ಪಡಿಸುವುದಕ್ಕೆಂದು ಬಂದೆನೆ? ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ:** "ಸಮರದೊಳೆನಗಜ್ಜ ಪೇಟಿಮಾವುದು ಕಜ್ಜಂ" ಎಂದು ಹೇಳುವ ದುರ್ಯೋಧನನ ಮಾತಿನಲ್ಲಿ 'ಸಂಧಿ ಮಾಡಿಕೊಳ್ಳುವ ಮಾತೊಂದನ್ನು ಬಿಟ್ಟು, ಯುದ್ಧದಲ್ಲಿ ನಾನೇನು ಮಾಡಬಹುದೆಂಬುದನ್ನು ಹೇಳಿ' ಎಂಬುದು ಇಲ್ಲಿನ ಸ್ವಾರಸ್ಯವಾಗಿದೆ. ಏಕೆಂದರೆ ದುರ್ಯೋಧನನಿಗೆ ಇಷ್ಟವಾಗದ ಒಂದು ಮಾತು "ಸಂಧಿ".

**18. "ಮೇಣಾಯ್ತು ಕೌರವಂಗವನಿತಳಂ."**

**ಉ: ಆಯ್ಕೆ:** ಈ ವಾಕ್ಯವನ್ನು ಮಹಾಕವಿ **ರನ್ನ** ಬರೆದಿರುವ **'ಸಾಹಸ ಭೀಮ ವಿಜಯ'** ಎಂಬ ಕೃತಿಯಿಂದ ಆರಿಸಲಾಗಿರುವ **'ಛಲಮನೆ ಮೆಱೆವೆಂ'** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:** ಸಂಧಿಗೆ ಒಪ್ಪದ ದುರ್ಯೋಧನನು, "ಅಜ್ಜ, ನಾನು ಹೋರಾಡದೆ ಬಿಡುವುದಿಲ್ಲ. ಇಂದಿನ ಯುದ್ಧದಲ್ಲಿ ಪಾಂಡವರು ಉಳಿಯಬೇಕು ಇಲ್ಲವೆ ನಾನು ಉಳಿಯಬೇಕು. ಆದ್ದರಿಂದ ಈ ಭೂಮಿ ಪಾಂಡವರದಾಗಬೇಕು ಇಲ್ಲವೇ ಕೌರವನದಾಗಬೇಕು ಎಂದು ಶರಶಯ್ಯೆಯಲ್ಲಿ ಮಲಗಿದ್ದ ಭೀಷ್ಮಾಚಾರ್ಯರಿಗೆ ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ:** ತನ್ನ ಕೊನೆಯುಸಿರು ಇರುವವರೆಗೂ ಪಾಂಡವರ ವಿರುದ್ಧ ಹೋರಾಡುತ್ತೇನೆಂಬ ದುರ್ಯೋಧನನ ದಿಟ್ಟ ನಿರ್ಧಾರ, ಪಾಂಡವರ ಮೇಲಿನ ಕೋಪದ ತೀವ್ರತೆ ಈ ಸಂದರ್ಭದಲ್ಲ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

19. **"ರಘೂದ್ವಹನ ಸೊಲ್ಗೇಳಿ ನಮಿಸಲ್"**

**ಆಯ್ಕೆ :–** ಈ ವಾಕ್ಯವನ್ನು **ಕವಿ ಲಕ್ಷ್ಮೀಶನು** ರಚಿಸಿರುವ **'ಜೈಮಿನಿ ಭಾರತ'** ಮಹಾಕಾವ್ಯದಿಂದ ಆಯ್ದ **'ವೀರಲವ'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :–** ಶ್ರೀರಾಮನ ಅಶ್ವಮೇಧ ಯಾಗದ ಯಜ್ಞಾಶ್ವವು ಸಂಚರಿಸಿದ ಕಡೆಯಲ್ಲೆಲ್ಲ ರಾಜರುಗಳಿಂದ ಅದಕ್ಕೆ ದೊರೆತ ಭವ್ಯ ಸ್ವಾಗತ ಹಾಗೂ ನೀಡಿದ ಗೌರವವನ್ನು ಕುರಿತು ವರ್ಣಿಸುವ ಸಂದರ್ಭದಲ್ಲಿ ಕವಿಯು ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :–** ಶ್ರೀರಾಮನ ಹೆಸರನ್ನು ಕೇಳಿಯೇ ಪರಾಕ್ರಮಿಗಳಾದ ರಾಜರುಗಳು ಗೌರವದಿಂದ ನಮಿಸಿ ಶರಣಾಗಿ ಯಜ್ಞಾಶ್ವವು ಮುಂದೆ ಸಂಚರಿಸಲು ಅನುವು ಮಾಡಿಕೊಟ್ಟರು ಎಂದು ವರ್ಣಿಸಿರುವುದು ಸ್ವಾರಸ್ಯಪೂರ್ಣವಾಗಿದೆ.

**20 "ಅರಸುಗಳ ವಾಜಿಯಂ ಬಿಡು"**

**ಆಯ್ಕೆ :–** ಈ ವಾಕ್ಯವನ್ನು **ಕವಿ ಲಕ್ಷ್ಮೀಶನು** ರಚಿಸಿರುವ **'ಜೈಮಿನಿ ಭಾರತ'** ಮಹಾಕಾವ್ಯದಿಂದ ಆಯ್ದ **'ವೀರಲವ'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :–** ವೀರಲವನು ತನ್ನ ಉತ್ತರೀಯದಿಂದ ಯಜ್ಞಾಶ್ವವನ್ನು ಬಾಳೆಯಗಿಡಕ್ಕೆ ಕಟ್ಟಿಹಾಕಿದ ಸಂದರ್ಭದಲ್ಲಿ ಮುನಿಪುತ್ರರು ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :–** ರಾಜನ ಯಜ್ಞಾಶ್ವವನ್ನು ಕಟ್ಟಿಹಾಕುವುದು ಅಪರಾಧ ಅದರಿಂದ ಮುಂದೆ ತೊಂದರೆ ಉಂಟಾಗುತ್ತದೆ ಎಂದು ಮುನಿಪುತ್ರರು ಭಯಗೊಳ್ಳುವುದನ್ನು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.

**21. "ಜಾನಕಿಯ ಮಗನಿದಕೆ ಬೆದರುವನೆ"**

**ಆಯ್ಕೆ :–** ಈ ವಾಕ್ಯವನ್ನು **ಕವಿ ಲಕ್ಷ್ಮೀಶನು** ರಚಿಸಿರುವ **'ಜೈಮಿನಿ ಭಾರತ'** ಮಹಾಕಾವ್ಯದಿಂದ ಆಯ್ದ **'ವೀರಲವ'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :–** ವೀರಲವನು ತನ್ನ ಉತ್ತರೀಯದಿಂದ ಯಜ್ಞಾಶ್ವವನ್ನು ಬಾಳೆಯಗಿಡಕ್ಕೆ ಕಟ್ಟಿ ಹಾಕಿದ್ದನ್ನು ಕಂಡು ಮುನಿಪುತ್ರರು ಕುದುರೆಯನ್ನು ಬಿಡು ಎಂದು ಹೇಳಿದ ಸಂದರ್ಭದಲ್ಲಿ ಈ ಮಾತನ್ನು ಲವನು ಹೇಳುತ್ತಾನೆ.

**ಸ್ವಾರಸ್ಯ :–** ಸೀತೆಯ ಮಗನಾದ ಲವನ ಧೈರ್ಯವು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

22.**'ಈಗಳೊಂದಡಕೆಯುಮಿಲ್ಲ ಕೈಯೊಳ್'**

**ಉ: ಆಯ್ಕೆ:** ಈ ವಾಕ್ಯವನ್ನು ಪಂಪ ಮಹಾಕವಿ ರಚಿಸಿರುವ **'ವಿಕ್ರಮಾರ್ಜುನ ವಿಜಯಂ'** ಕೃತಿಯಿಂದ ಆರಿಸಿಕೊಳ್ಳಲಾಗಿರುವ **'ಕೆಮ್ಮನೆ**

ಮೀಸೆವೊತ್ತನೇ' ಎಂಬ ಪದ್ಯಭಾಗದಿಂದ ತೆಗೆದುಕೊಳ್ಳಲಾಗಿದೆ.

**ಸಂದರ್ಭ:** ದ್ರೋಣನು ತನಗೆ ಬಡತನವುಂಟಾಗಲು ಅಶ್ವತ್ಥಾಮನನ್ನೂ ಕರೆದುಕೊಂಡು ದೇಶದೇಶಗಳಲ್ಲೆಲ್ಲ ಸುತ್ತಿ ಪರಶುರಾಮನ ಬಳಿಗೆ ಬಂದು ಸಹಾಯ ಯಾಚಿಸಿದ ಸಂದರ್ಭದಲ್ಲಿ ಪರಶುರಾಮನು "ನನ್ನ ಪದಾರ್ಥಗಳನ್ನೆಲ್ಲ ಬೇಡಿದವರಿಗೆ ಕೊಟ್ಟೆನು. ಭೂಮಂಡಲವನ್ನು ಗುರುಗಳಿಗೆ ಕೊಟ್ಟೆನು. ಈಗ ನನ್ನಲ್ಲಿ ಒಂದಡಕೆಯೂ ಇಲ್ಲ" ಎಂದು ದ್ರೋಣನಿಗೆ ಹೇಳುತ್ತಾನೆ.

**ಸ್ವಾರಸ್ಯ:** ದ್ರೋಣನು ತನ್ನ ಬಳಿ ಬಂದು ಸಹಾಯ ಯಾಚಿಸಿದಾಗ ಪರಶುರಾಮನು ಯಾವುದೇ ಮುಚ್ಚುಮರೆ ಇಲ್ಲದೆ ತನ್ನ ನಿಜ ಸ್ಥಿತಿಯನ್ನು ಹೇಳಿಕೊಳ್ಳುವುದು ಈ ಮಾತಿನಲ್ಲಿ ಸ್ವಾರಸ್ಯ ಪೂರ್ಣವಾಗಿ ವ್ಯಕ್ತವಾಗಿದೆ.

**23. 'ಎಂತು ನಾಣಿಲಿಗರಪ್ಪರೆ ಮಾನಸರ್'**

**ಉ: ಆಯ್ಕೆ:** ಈ ವಾಕ್ಯವನ್ನು ಪಂಪ ಮಹಾಕವಿ ರಚಿಸಿರುವ **'ವಿಕ್ರಮಾರ್ಜುನ ವಿಜಯಂ'** ಕೃತಿಯಿಂದ ಆರಿಸಿಕೊಳ್ಳಲಾಗಿರುವ **'ಕೆಮ್ಮನೆ ಮೀಸೆವೊತ್ತನೇ'** ಎಂಬ ಪದ್ಯಭಾಗದಿಂದ ತೆಗೆದುಕೊಳ್ಳಲಾಗಿದೆ.

**ಸಂದರ್ಭ:** ದ್ರೋಣನು ದ್ರುಪದನ ಬಳಿಗೆ ಹೋಗಿ "ಅಣ್ಣಾ ನೀನೂ ನಾನೂ ಜೊತೆಯಲ್ಲಿ ವಿದ್ಯಾಭ್ಯಾಸ ಮಾಡಿದುದನ್ನು ತಿಳಿದಿಲ್ಲವೇ?" ಎನ್ನಲು ದ್ರುಪದನು ನನಗೆ ನಿನ್ನ ಪರಿಚಯವಿಲ್ಲ. ನೀನು ನನ್ನನ್ನು ಅದೆಲ್ಲಿ ಕಂಡಿದ್ದೆಯೊ? ರಾಜನಿಗೂ ಬ್ರಾಹ್ಮಣನಿಗೂ ಯಾವ ವಿಧವಾದ ಸ್ನೇಹ? ಮನುಷ್ಯರಾದವರು ಇಷ್ಟು ನಾಚಿಕೆಗೆಟ್ಟವರೂ ಆಗುತ್ತಾರೆಯೇ? ಎಂಬ ಮಾತುಗಳಿಂದ ದ್ರೋಣನಿಗೆ ಹೀಯ್ಯಾಳಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ:** ತನ್ನ ಸಹಪಾಠಿಯಾಗಿದ್ದ ಆತ್ಮೀಯ ಸ್ನೇಹಿತ ಒಬ್ಬ ಬಡವನೆಂಬ ಕಾರಣಕ್ಕೆ 'ನೀನಾರೋ ನನಗೆ ತಿಳಿದಿಲ್ಲ' ಎಂದು ಹೇಳುವ ದ್ರೋಣನ ಅಹಂಕಾರ ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

**24. 'ನೊಳವಿಂಗೆ ಕುಪ್ಪೆ ವರಂ'**

**ಉ: ಆಯ್ಕೆ:** ಈ ವಾಕ್ಯವನ್ನು ಪಂಪ ಮಹಾಕವಿ ರಚಿಸಿರುವ 'ವಿಕ್ರಮಾರ್ಜುನ ವಿಜಯಂ' ಕೃತಿಯಿಂದ ಆರಿಸಿಕೊಳ್ಳಲಾಗಿರುವ 'ಕೆಮ್ಮನೆ ಮೀಸೆವೊತ್ತನೇ' ಎಂಬ ಪದ್ಯಭಾಗದಿಂದ ತೆಗೆದುಕೊಳ್ಳಲಾಗಿದೆ.

**ಸಂದರ್ಭ:** ದ್ರುಪದನು ಹೀಯಾಳಿಸಿದಾಗ ಕೋಪಗೊಂಡ ದ್ರೋಣನು ದ್ರುಪದನನ್ನು ಕುರಿತು "ಎಲೋ ಖಳನೇ, ನೊಣಕ್ಕೆ ಕಸವೇ ಶ್ರೇಷ್ಠವಾದುದು' ಎನ್ನುವ ಗಾದೆಯ ಹಾಗೆ ನಿನ್ನ ಯೋಗ್ಯತೆ ನನ್ನವರೆಗೂ ಉಂಟೆ? ಜೊತೆಯಲ್ಲಿ ವಿದ್ಯಾಭ್ಯಾಸ ಮಾಡಿದೆವೆಂಬ ಒಂದು ಕಾರಣದಿಂದ ನಿನ್ನನ್ನು ಕೊಲ್ಲಲಾರೆ. ಈ ಸಭಾವಲಯದಲ್ಲಿ ನನ್ನನ್ನು ಹಿಯ್ಯಾಳಿಸಿದ ನಿನ್ನನ್ನು ನನ್ನ ಶಿಷ್ಯರಿಂದ ನಿರಾಯಾಸವಾಗಿ, ನೀನು ಗಾಬರಿಪಡುವಂತೆ ಕಟ್ಟಿಸದೆ ಬಿಟ್ಟರೆ ನಾನು ಮೀಸೆಯನ್ನು ಹೊತ್ತಿರುವುದು ವ್ಯರ್ಥವಲ್ಲವೆ?" ಎಂದು ಶಪಥ ಮಾಡುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ:** 'ನೊಣಕ್ಕೆ ಕಸವೇ ಶ್ರೇಷ್ಠ' ಎಂಬಂತೆ ವ್ಯಕ್ತಿಯ ಯೋಗ್ಯತೆಗೆ ತಕ್ಕಂತೆ ಗುಣ–ನಡತೆ–ಅಭಿರುಚಿಗಳಿರುತ್ತವೆ ಎಂಬುದು ಇಲ್ಲಿ ಸ್ವಾರಸ್ಯಪೂರ್ಣವಾಗಿದೆ.

## ಪದ್ಯಗಳಿಗೆ ಮೌಲ್ಯದೊಂದಿಗೆ ಸಾರಾಂಶ ಬರೆಯುವುದು:

**ಸಂಕಲ್ಪ ಗೀತೆ:**

ಈ ಪದ್ಯದ ಯಾವುದೇ ಚರಣ ನೀಡಿದರೂ ಬರೆಯಬಹುದಾದ ಸಾರಾಂಶ:

**ಆಯ್ಕೆ:** ಈ ಈ ಪದ್ಯವನ್ನು ಜಿ.ಎಸ್.ಶಿವರುದ್ರಪ್ಪನವರು ರಚಿಸಿರುವ 'ಎದೆ ತುಂಬಿ ಹಾಡುವೆನು' ಕವನ ಸಂಕಲನದಿಂದ ಆರಿಸಿರುವ 'ಸಂಕಲ್ಪ ಗೀತೆ ಪದ್ಯದಿಂದ ತೆಗೆದುಕೊಂಡಿದೆ.

**ಅಡಕವಾಗಿರುವ ಮೌಲ್ಯ:** ಇಲ್ಲಿ ನಾವು ಜೀವನದಲ್ಲಿ ಧನಾತ್ಮಕ ಭಾವನೆಗಳನ್ನು ಬೆಳೆಸಿಕೊಳ್ಳಬೇಕೆಂಬ ದೃಢಸಂಕಲ್ಪ ಹೊಂದಬೇಕು ಎಂಬುದು.

**ಸಾರಾಂಶ:** ಸಾಧಕನು ತಾನು ಕಂಡ ಕನಸನ್ನು ಅದೆಷ್ಟೇ ತೊಡಕುಗಳು ಬಂದರೂ ಅಡ್ಡಿ ಆತಂಕಗಳು ಎದುರಾದರೂ ನನಸಾಗಿಸುತ್ತಾರೆ. ನಮ್ಮ ಸುತ್ತ ಕವಿದಿರುವ ಕತ್ತಲೆ ಕಳೆದು ಪ್ರೀತಿಯ ಹಣತೆ ಹಚ್ಚು ಜಾಗ್ರತೆಯಿಂದ ಮುಂದೆ ಸಾಗೋಣ, ನದಿ ಜಲಗಳನ್ನು ತುಂಬಲು ಕಾಡುಗಳನ್ನು ಹಸಿರಾಗಿಸಲು, ಮುಂಗಾರಿನ ಮಳೆಯಾಗಬೇಕು. ಹೊಸ ಭರವಸೆಯೊಂದಿಗೆ ಮಾನವರ ನಡುವಿನ ದ್ವೇಷ ಮತ್ಸರ ಕಳೆದು ನಮ್ಮ ಹೊಸ ಭರವಸೆಯೊಂದಿಗೆ ಮಾನವರ ನಡುವಿನ ದ್ವೇಷ ಮತ್ಸರ ಕಳೆದು ನಮ್ಮ ನಡುವಿನ ಸೇತುವೆಯಾಗೋಣ, ಭಯ ಸಂಶಯ ಓಡಿಸಿ ಮತಗಳೇ ದಾರಿದೀಪ ಎಂದು ಭಾವಿಸಿ ಏಕತೆಯಿಂದ ಬಾಳೋಣ ಎಂಬ ಏಕತಾ ತತ್ವವನ್ನು ಸಾರಿದ್ದಾರೆ.

1. ಹಕ್ಕಿ ಹಾರುತಿದೆ ನೋಡಿದಿರಾ?
ನೀಲಮೇಘ ಮಂಡಲ ಸಮಬಣ್ಣ
ಮುಗಿಲಿಗೆ ರೆಕ್ಕೆಗಳೊಡೆದವೊ ಅಣ್ಣಾ
ಚಿಕ್ಕೆಯ ಮಾಲೆಯ ಸೆಕ್ಕಿಸಿಕೊಂಡು
ಸೂರ್ಯಚಂದ್ರರನು ಮಾಡಿದೆ ಕಣ್ಣಾ
ಹಕ್ಕಿ ಹಾರುತಿದೆ ನೋಡಿದಿರಾ?

**ಆಯ್ಕೆ:** ಈ ಪದ್ಯವನ್ನು ದ.ರಾ.ಬೇಂದ್ರೆಯವರು ರಚಿಸಿರುವ 'ಗರಿ' ಎಂಬ ಕೃತಿಯಿಂದ ಆರಿಸಿದ **'ಹಕ್ಕಿ ಹಾರುತಿದೆ ನೋಡಿದಿರಾ'** ಎಂಬ ಪದ್ಯಭಾಗದಿಂದ ಆರಿಸಕೊಳ್ಳಲಾಗಿದೆ.

**ಅಡಕವಾಗಿರುವ ಮೌಲ್ಯ:** ಇಲ್ಲಿ ಕಾಲವನ್ನು ಹಾರುವ ಹಕ್ಕಿಯೊಂದಿಗೆ ಸಮೀಕರಿಸಿ ಚಲನಶೀಲತೆ ಜೀವಂತಿಕೆಯ ಗುಣ, ನಿಸರ್ಗದ ಹೊಂದಾಣಿಕೆಯಂತೆ ಕಾಲ ಉರುಳುತ್ತದೆ ಎಂಬ ಮೌಲ್ಯವನ್ನು ಸಾರಿದ್ದಾರೆ.

**ಸಾರಾಂಶ:** ಈ ಪದ್ಯದಲ್ಲಿ ಕವಿ ಕಾಲದ ವಿಶಾಲತೆ ಮತ್ತು ವ್ಯಾಪ್ತಿಯನ್ನು ವಿವರಿಸಿದ್ದಾರೆ. ಹಕ್ಕಿಯು ಆಕಾಶ, ಮೋಡ, ಭೂಮಂಡಲಗಳ ಎಲ್ಲಾ ಬಣ್ಣಗಳನ್ನು ಸಮನಾಗಿ ಆವರಿಸಿಕೊಂಡಿದೆ ಅಂದರೆ ಇವುಗಳಲ್ಲಿ ಭೇದವೆಣಿಸದೆ ಸಮತೆಯನ್ನು ಕಾಣುತ್ತಿದೆ. ಹಕ್ಕಿಯ ರೆಕ್ಕೆಯು ಮೂಡಿದಾಗ ಹೇಗೆ ಹಾರಿ ಹೋಗುತ್ತದೆಯೋ ಹಾಗೆ ಕಾಲವೆಂಬ ಹಕ್ಕಿ ಮುಗಿಲನ್ನು ರೆಕ್ಕೆ ಮಾಡಿಕೊಂಡು ಅನಂತವಾಗಿ ಹಾರಿಹೋಗುತ್ತಿದೆ. ಹೇಗೆಂದರೆ ಚಿಕ್ಕೆಗಳ ಮಾಲೆಯನ್ನು ಕೊರಳಿಗೆ ಸೆಕ್ಕಿಸಿಕೊಂಡು ಸೂರ್ಯಚಂದ್ರರನ್ನು ಕಣ್ಣುಗಳಾಗಿ ಮಾಡಿಕೊಂಡು ಅನಂತದೆಡೆಗೆ ಹಾರಿಹೋಗಿದೆ ನೋಡಿದಿರಾ ಎಂದು ಹೇಳಿದ್ದಾರೆ.

2. ರಾಜ್ಯದ ಸಾಮ್ರಾಜ್ಯದ ತೆನೆ ಒಕ್ಕಿ
ಮಂಡಲ–ಗಿಂಡಲಗಳ ಗಡಮುಕ್ಕಿ
ತೇಲಿಸಿ ಮುಳುಗಿಸಿ ಖಂಡ–ಖಂಡಗಳ
ಸಾರ್ವಭೌಮರಾ ನೆತ್ತಿಯ ಕುಕ್ಕಿ
ಹಕ್ಕಿ ಹಾರುತಿದೆ ನೋಡಿದಿರಾ?

ಸಾರಾಂಶ: ಕವಿ ಬೇಂದ್ರೆಯವರು ಈ ಪದ್ಯದಲ್ಲಿ ಕಾಲದ

ಸಾರ್ವಭೌಮತ್ವವನ್ನು ವಿವರಿಸಿದ್ದಾರೆ. ರಾಜ್ಯ ಸಾಮ್ರಾಜ್ಯಗಳನ್ನು ವೈಭವದಿಂದ ಮೆರೆಯುವಂತೆ ಮಾಡಿದ್ದು ಇದೇ ಕಾಲ. ಹಾಗೆಯೇ ಅವುಗಳ ನಡುವೆ ತೆನೆಯಲ್ಲಿನ ಕಾಳುಗಳನ್ನು ಬೇರ್ಪಡಿಸುವಂತೆ ಬೇರೆ ಬೇರೆ ಮಾಡಿದ್ದು ಇದೇ ಕಾಲ. ಹಾಗಾಗಿ ಕಾಲ ಸಾರ್ವಭೌಮತ್ವವನ್ನು ಹೊಂದಿದೆ. ರಾಜ–ಮಹಾರಾಜರ ಸಣ್ಣದೊಡ್ಡ, ಕೋಟೆ–ಕೊತ್ತಲಗಳನ್ನು ಗಬಕ್ಕನೆ ನಾಶಮಾಡಿದ್ದು ಕಾಲವೇ ವಿಶ್ವದ ಎಲ್ಲಾ ಭಾಗಗಳನ್ನು ಒಂದು ಸಲ ವೈಭವದಿಂದ ಮೆರೆಯುವಂತೆ ಮಾಡಿದ್ದು ಮತ್ತೊಂದು ಸಲ ಮುಳುಗುವಂತೆ ಮಾಡಿದೆ. ಹಾಗೆಯೇ ಸಾರ್ವಭೌಮರೆಂದು ಮೆರೆದವರ ನೆತ್ತಿಯ ಮೇಲೆ ಕುಕ್ಕಿ ಕೆಳಗೆ ಬೀಳಿಸಿ ಹೊಸಕಿ ಹಾಕಿ ಹಕ್ಕಿ ಹಾರಿಹೋಗಿದೆ ಎಂದು ಹೇಳಿದ್ದಾರೆ.

3. ಬೆಳ್ಳಿಯ ಹಳ್ಳಿಯ ಮೇರೆಯ ಮೀರಿ
ತಿಂಗಳಿನೂರಿನ ನೀರನು ಹೀರಿ
ಆಡಲು ಹಾಡಲು ತಾ ಹಾರಾಡಲು
ಮಂಗಳ ಲೋಕದ ಅಂಗಳಕೇರಿ
ಹಕ್ಕಿ ಹಾರುತಿದೆ ನೋಡಿದಿರಾ

**ಸಾರಾಂಶ:** ಈ ಪದ್ಯದಲ್ಲಿ ಶುಕ್ರ, ಚಂದ್ರ, ಮಂಗಳ ಲೋಕದ ಸಂಚಾರಕಾಲದ ಒಂದು ಭೌತಿಕ ಲಕ್ಷಣವನ್ನು ವೈಜ್ಞಾನಿಕವಾಗಿ ಚಿತ್ರಿಸಿದ್ದಾರೆ. ಇನ್ನೊಂದು ಕಡೆ ಬ್ರಿಟಿಷರ ಸಾಮ್ರಾಜ್ಯಶಾಹಿ ನೀತಿಯಿಂದ ಪಾರಾಗುವ ಸ್ವಾತಂತ್ರ್ಯ ಚಿಂತನದ ಕಲ್ಪನಾ ಪಕ್ಷಿಯ ಹಾರಾಟ ಇನ್ನೊಂದು ಲಕ್ಷಣ. ಬೆಳ್ಳಿಚುಕ್ಕಿ ಎಂದು ಕರೆಯಲ್ಪಡುವ ಶುಕ್ರಗ್ರಹವನ್ನು ಹಳ್ಳಿಗೆ ಹೋಲಿಸಿ, ಕಾಲದ ಹಕ್ಕಿ ಆ ಹಳ್ಳಿಯ ಮೇರೆಯನ್ನು ದಾಟಿ ಹಾರಿಹೋಗುತ್ತಿದೆ. ತಿಂಗಳೂರು ಅಂದರೆ ಚಂದ್ರಲೋಕ. ಈ ಚಂದ್ರಲೋಕಕ್ಕೆ ಹಕ್ಕಿಯು(ಮಾನವರೂಪದ ಕಾಲದ ಹಕ್ಕಿ) ಏರಿ ನೀರಿನ ಸೆಲೆಯನ್ನು ಹುಡುಕಿ ಅದನ್ನು ಹೀರುತ್ತ ಸಂತೋಷವಾಗಿ ಆಡುತ್ತಿದೆ. ಹೀಗೆ ವೈಜ್ಞಾನಿಕ ರೆಕ್ಕೆಗಳನ್ನು ಹೊಂದಿದ ಹಕ್ಕಿ ಹಾರುತಿದೆ ನೋಡಿದ್ದೀರಾ ಎಂದು ಹೇಳಿದ್ದಾರೆ.

ಮಾನವನ ಸಂಶೋಧನಾ ಗುಣದ ಹಿಂದಿರುವ ಗುರಿಯನ್ನು ಪರೋಕ್ಷವಾಗಿ ಅಭಿವ್ಯಕ್ತಪಡಿಸಿದ್ದಾರೆ.

### ಪದ್ಯ : ಕೌರವೇಂದ್ರನ ಕೊಂದೆ ನೀನು:

4. ಮರುಳು ಮಾಧವ ಮಹಿಯ ರಾಜ್ಯದ
ಸಿರಿಗೆ ಸೋಲುವನಲ್ಲ ಕೌಂತೇ
ಯರು ಸುಯೋಧನರೆನಗೆ ಬೆಸಕೈವಲ್ಲಿ ಮನವಿಲ್ಲ
ಹೊರೆದ ದಾತಾರಂಗೆ ಹಗೆವರ
ಶಿರವನರಿದೊಪ್ಪಿಸುವೆನೆಂಬೀ
ಭರದೊಳಿರ್ದೆನು ಕೌರವೇಂದ್ರನ ಕೊಂದೆ ನೀನೆಂದ

**ಆಯ್ಕೆ:** ಈ ಪದ್ಯವನ್ನು ಕವಿ ಕುಮಾರವ್ಯಾಸನು ಬರೆದಿರುವ ಕರ್ಣಾಟ ಭಾರತ ಕಥಾಮಂಜರಿ ಕಾವ್ಯದಿಂದ ಆರಿಸಿರುವ 'ಕೌರವೇಂದ್ರನ ಕೊಂದೆ ನೀನು' ಪದ್ಯದಿಂದ ತೆಗೆದುಕೊಂಡಿದೆ.

**ಅಡಕವಾಗಿರುವ ಮೌಲ್ಯ:** ಇಲ್ಲಿ ಯಾವ ಆಮಿಷಗಳಿಗೂ ಒಳಗಾಗದೆ ಅಸಹಾಯಕನಾದ ಸ್ಥಿತಿಯಲ್ಲಿ ನೋವು ಸಂಕಟದಿಂದ ಬಳಲುವ ಕರ್ಣನ ವ್ಯಕ್ತಿತ್ವದ ಹಿರಿಮೆ ಇಲ್ಲಿ ಬಿತ್ತರಗೊಂಡಿದೆ.

**ಸಾರಾಂಶ:** ಹೇ ಮರುಳು ಮಾಧವ ನಾನು ಈ ರಾಜ್ಯದ ಭೂಮಿಯ ಸಿರಿಗೆ ಸೋಲುವವನಲ್ಲ, ಕುಂತಿಯ ಮಕ್ಕಳಿಂದ ಸುಯೋಧನನಿಂದ ನಾನು ಸೇವೆ ಮಾಡಿಸಿಕೊಳ್ಳುವದರಲ್ಲಿ ನನಗೆ ಮನಸ್ಸಿಲ್ಲ, ನನ್ನನ್ನು ಸಾಕಿದ ಆಶ್ರಯದಾತ ಒಡೆಯನಿಗೆ ಶತ್ರುಗಳ ಶಿರವನ್ನು ಕತ್ತರಿಸಿ ಒಪ್ಪಿಸುವೆನು ಎಂಬ ಅವಸರದಲ್ಲಿ ಇದ್ದೆನು. ಆದರೆ ನನ್ನ ಜನ್ಮರಹಸ್ಯವನ್ನು ಹೇಳಿ ನೀನು ಕೌರವೇಂದ್ರನಾದ ದುರ್ಯೋಧನನನ್ನು ಕೊಂದೆ ಎಂದು ಕರ್ಣ ಕೃಷ್ಣನಿಗೆ ಹೇಳುತ್ತಾನೆ.

5. ಕೊರಳ ಸೆರೆ ಹಿಗ್ಗಿದವು ದೃಗುಜಲ
ಉರವಣಿಸಿ ಕಡು ನೊಂದನಕಟಾ
ಕುರುಪತಿಗೆ ಕೇಡಾದುದೆಂದನು ತನ್ನ ಮನದೊಳಗೆ
ಹರಿಯ ಹಗೆ ಹೊಗೆದೋರದುರುಹದೆ
ಬರಿದೆ ಹೋಹುದೆ ತನ್ನ ವಂಶವ
ನರುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ.

**ಸಾರಾಂಶ:** ಕೃಷ್ಣನ ಮಾತನ್ನು ಕೇಳಿದ ಕರ್ಣನ ಕೊರಳು ತುಂಬಿ ಬಂತು. ಕಣ್ಣೀರು ರಭಸದಿಂದ ಮುಂದೆ ಬಂದು ಅಧಿಕವಾಗಿ ನೊಂದು ಅಯ್ಯೋ, ಕುರುಪತಿಗೆ ಕೇಡಾಯಿತಲ್ಲ ಎಂದು ತನ್ನ ಮನದೊಳಗೆ ಚಿಂತಿಸಿದನು. ಈ ಕೃಷ್ಣನ ವೈರತ್ವ ಹೊಗೆ ತೋರಿಸದೆ ತೀರದು, ಕೃಷ್ಣನು ತನ್ನ ವಂಶವನ್ನು ತಿಳಿಸಿ ನನ್ನನ್ನು ಕೊಂದನು. ಮುಂದೇನು ಮಾತನಾಡುವುದು ಎಂದು ಚಿಂತಾಕ್ರಾಂತನಾದನು.

6. ಏನು ಹೇಳೈ ಚಿತ್ತ ಕರ್ಣ
ಗ್ಲಾನಿ ಯಾವುದು ಮನಕೆ ಕುಂತೀ
ಸೂನುಗಳ ಬೆಸಕೈಸಿಕೊಂಬುದು ಸೇರದೇ ನಿನಗೆ
ಹಾನಿಯಿಲ್ಲೆನ್ನಾಣೆ ನುಡಿ ನುಡಿ
ಮೌನವೇತಕೆ ಮರುಳುತನ ಬೇ
ಡಾನು ನಿನ್ನಪದೆಸೆಯ ಬಯಸುವನಲ್ಲ ಕೇಳೆಂದ

**ಸಾರಾಂಶ:** ಕೃಷ್ಣನು "ಏನು ಹೇಳು ಕರ್ಣ ಮನದಲ್ಲಿರುವ ತಲ್ಲಣ ಯಾವುದು, ಕುಂತಿಯ ಮಕ್ಕಳಿಂದ ಸೇವೆ ಮಾಡಿಸಿಕೊಳ್ಳುವುದು ಇಷ್ಟವಿಲ್ಲವೇ? ನಿನ್ನಾಣೆ, ನಿನಗೆ ಯಾವುದೇ ನಷ್ಟವಿಲ್ಲ, ಮಾತನಾಡು ಮನವೇತಕೆ, ಭ್ರಮೆಗೊಳಗಾಗುವುದು ಬೇಡ, ನಾನು ನಿನಗೆ ಕೇಡನ್ನು ಬಯಸುವುದಿಲ್ಲ" ಎಂದು ಹೇಳುತ್ತಾನೆ.

7. ಮಾರಿಗೌತಣವಾಯ್ತು ನಾಳಿನ
ಭಾರತವು ಚತುರಂಗ ಬಲದಲಿ
ಕೌರವನ ಋಣ ಹಿಂಗೆ ರಣದಲಿ ಸುಭಟಕೋಟಿಯನು
ತೀರಿಸಿಯೆ ಪತಿಯವಸರಕ್ಕೆ ಶ
ರೀರವನು ನೂಕುವೆನು ನಿನ್ನಯ
ವೀರರೈವರ ನೋಯಿಸೆನು ರಾಜೀವಸಖನಾಣೆ

ಅಡಕವಾಗಿರುವ ಮೌಲ್ಯ: ಕೃಷ್ಣನ ಮಾತುಗಳಿಗೆ ಕರ್ಣನ ಅಚಲವಾದ ದೃಢನಿರ್ಧಾರ ಹಾಗೂ ಕುರುಕ್ಷೇತ್ರ ಯುದ್ಧದ ಪರಿಣಾಮವನ್ನು ಇಲ್ಲಿ ಮಾರ್ಮಿಕವಾಗಿ ತಿಳಿಸಿದೆ.

**ಸಾರಾಂಶ:** ಕರ್ಣನು ತನ್ನ ಪರಾಕ್ರಮದ ಬಗ್ಗೆ ಹೇಳುತ್ತಾ "ನಾಳಿನ ಯುದ್ಧದಲ್ಲಿ ಚದುರಂಗ ಬಲವನ್ನು ಮೃತ್ಯುದೇವತೆಗೆ ಔತಣವನ್ನು ನೀಡುತ್ತೇನೆ. ನನ್ನ ಒಡೆಯನಾದ ಕೌರವನ ಋಣ ತೀರಿಸುವುದಕ್ಕಾಗಿ ರಣಾಂಗಣದಲ್ಲಿ ಲೆಕ್ಕವಿಲ್ಲದಷ್ಟು ಅಪ್ರತಿಮ ವೀರರನ್ನು ಬಲಿಕೊಡುತ್ತೇನೆ. ಈ ಕಾರ್ಯದಲ್ಲಿಯೆ ನನ್ನ ಒಡೆಯನಿಗಾಗಿ ನನ್ನ ಪ್ರಾಣವನ್ನೇ ಕೊಡುತ್ತೇನೆಯೇ ಹೊರತು ಸೂರ್ಯದೇವನಾಣೆ ನಿನ್ನ ಪಾಂಡುವೀರರನ್ನು ನೋಯಿಸುವುದಿಲ್ಲ ಎಂದು ದೃಢನಿರ್ಧಾರವನ್ನು ಕರ್ಣ ವ್ಯಕ್ತಪಡಿಸುತ್ತಾನೆ.

### ಪದ್ಯ : ಹಸುರು

ಹಸುರಾಗಸ; ಹಸುರು ಮುಗಿಲು
ಹಸುರು ಗದ್ದೆಯಾ ಬಯಲು;
ಹಸುರಿನ ಮಲೆ; ಹಸುರು ಕಣಿವೆ
ಹಸುರು ಸಂಜೆಯೀ ಬಿಸಿಲೂ!
ಹೊಸ ಹೂವಿನ ಕಂಪು ಹಸುರು
ಎಲರಿನ ತಂಪೂ ಹಸುರು
ಹಕ್ಕಿಯ ಕೊರಲಿಂಪು ಹಸುರು
ಹಸುರು ಹಸುರಿಳೆಯುಸಿರೂ!

ಹಸುರತ್ತಲೆ! ಹಸುರಿತ್ತಲ್, ಹಸುರೆತ್ತಲ್ ಕಡಲಿನಲಿ
ಹಸುರ್ಗಟ್ಟತೊ ಕವಿಯಾತ್ಮಂ, ಹಸುರ್ನೆತ್ತರ್ ಒಡಲಿನಲಿ!

ಆಯ್ಕೆ : ಈ ಪದ್ಯವನ್ನು ಕುವೆಂಪುರವರ ಪಕ್ಷಿಕಾಶಿ ಕವನ ಸಂಕಲನದಿಂದ ಆಯ್ದ 'ಹಸುರು' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಅಡಕವಾಗಿರುವ ಮೌಲ್ಯ: ಕವಿ ಪ್ರಜ್ಞೆಗೆ ಪ್ರಕೃತಿ ಒಲುಮೆಯೇ ಮುಕ್ತಿಯಾನಂದಕ್ಕೆ ಸಾಧನೆ, ಪ್ರಕೃತಿ ತನ್ಮಯತೆಗೂ ಕವಿ ಮತ್ತು ಪ್ರಕೃತಿ ಒಂದಾಗುವ ಅವರ ಕಾವ್ಯದ ಅದ್ವೈತ ಸ್ಥಿತಿಗೆ ಸಮರ್ಥ ನಿದರ್ಶನ ಎಂಬ ಕವಿ ಮೌಲ್ಯವನ್ನು ಸಾರಿ ತಿಳಿಸುತ್ತದೆ.

ಸಾರಾಂಶ: ಹಸುರಾಗಿರುವ ಆಕಾಶ, ಹಸುರಿನ ಮುಗಿಲು, ಹಚ್ಚ ಹಸುರು ಗದ್ದೆಯಾ ಬಯಲು, ಹಸುರಿನಿಂದ ಕಂಗೊಳಿಸುವ ಬೆಟ್ಟಗಳು, ಹಸುರಾಗಿರುವ ಕಣಿವೆಗಳು, ಸಂಜೆಯ ಬಿಸಿಲೂ ಕೂಡ ಹಸುರಾಗಿದೆ. ಹೊಸ ಹುವಿನ ಕಂಪು ಹಸುರಾಗಿದೆ, ಬೀಸುವ ಗಾಳಿಯ ತಂಪೂ ಹಸುರಾಗಿದೆ. ಹಕ್ಕಿಯ ಕೊರಳಿನ ಧ್ವನಿ ಹಸುರಾಗಿದೆ. ಭೂಮಿಯ ಉಸಿರೂ ಹಸುರು, ಆ ಕಡೆ ನೋಡಿದರೂ, ಈ ಕಡೆ ನೋಡಿದರೂ ಹಸುರು, ಎತ್ತತ್ತಲೂ ಹಸುರು, ಕಡಲು ಹಸುರಾಗಿದೆ. ಕವಿಯ ಆತ್ಮವೂ ಹಸುರುಗಟ್ಟಿದೆ. ದೇಹದ ರಕ್ತವು ಹಸುರಾಗಿದೆ! ಎಂಬುದೇ ಈ ಪದ್ಯದ ಸಾರಾಂಶ.

**ಪದ್ಯ: ಛಲಮನೆ ಮೆಱೆವೆಂ**

ಈ ಪದ್ಯದಿಂದ ಯಾವುದೇ ಪದ್ಯ ಕೊಟ್ಟರೂ ಇದೇ ಸಾರಾಂಶ ಬರೆ:

ಆಯ್ಕೆ: ಈ ಪದ್ಯವನ್ನು ರನ್ನಕವಿಯು ರಚಿಸಿರುವ 'ಸಾಹಸಭೀಮವಿಜಯಂ ಎಂಬ ಕಾವ್ಯದಿಂದ ಆಯ್ದ ಛಲಮನೆ ಮೆಱೆವೆಂ' ಪದ್ಯದಿಂದ ತೆಗೆದುಕೊಂಡಿದೆ.

ಅಡಕವಾಗಿರುವ ಮೌಲ್ಯ: ಈ ಪದ್ಯದಲ್ಲಿ ಯುದ್ಧ ಮಾಡಿಯೇ ತೀರಬೇಕೆಂಬ ದುರ್ಯೋಧನನ ಛಲದ ಗುಣ, ಪರಾಕ್ರಮ, ಸ್ವಾಭಿಮಾನದ ಸ್ವಭಾವ ಇಲ್ಲಿ ವ್ಯಕ್ತಗೊಂಡಿರುವುದನ್ನು ಕಾಣಬಹುದಾಗಿದೆ.

ಸಾರಾಂಶ: ಇಲ್ಲಿ ಭೀಷ್ಮನೆದುರು ಸಂಧಿಗೆ ಒಪ್ಪದೆ ಯುದ್ಧ ಮಾಡಿಯೇ ತೀರುತ್ತೇನೆ ಎಂದು ಹೇಳುವ ಸ್ವಭಾವವನ್ನು ಕಾಣಬಹುದು. ದಿನಪಸುತನಾದ ಕರ್ಣನನ್ನು ಕೊಲ್ಲಿಸಿದ ಈ ನೆಲದಲ್ಲಿ ನಾನು ಬಾಳುವೆನೆ ಎಂಬ ಸ್ವಾಭಿಮಾನದ ಮಾತು ನನ್ನವರನ್ನು ಕೊಂದ ಭೀಮಾರ್ಜುನರನ್ನು ಕೊಂದು ನಂತರ ಸಂಧಿಯ ಬಗೆಗೆ ಯೋಚಿಸುತ್ತೇನೆ. ಒಡಹುಟ್ಟಿದ ಸಹೋದರರು ಮರಣ ಹೊಂದಿರುವುದರಿಂದ ಪಾಂಡವರನ್ನು ಎದುರಿಸಿ ಛಲವನ್ನೇ ಮೆರೆಯುತ್ತೇನೆ. ಯುದ್ಧ ಮಾಡಿಯೇ ತೀರುತ್ತೇನೆ. ಇಂದಿನ ಯುದ್ಧದಲ್ಲಿ ಈ ನೆಲ ಪಾಂಡವರಿಗಾಗಬಹುದು ಅಥವಾ ನಮಗೆ ದೊರೆಯಬಹುದು ಎಂದು ಹೇಳುತ್ತಾನೆ.

**ಪದ್ಯ: ವೀರಲವ**

1. ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ
ನೊರ್ವನೇ ವೀರನಾತನ ಯಜ್ಞ ತುರಗಮಿದು
ನಿರ್ವಹಿಸಲಾರ್ಪರಾರಾದೊಡಂ ತಡೆಯಲೆಂದಿರ್ದ ಲೇಖನವನೋದಿ
ಗರ್ವಮಂ ಬಿಡಿಸದಿರ್ದೊಡೆ ತನ್ನ ಮಾತೆಯಂ
ಸರ್ವಜನಮುಂ ಬಂಜೆಯೆನ್ನದಿರ್ಪುದೆ ತನ
ಗುರ್ವ ತೋಳ್ಗಳಿವೇತಕೆಂದು ಸಲೆವಾಸಿಯಂ ತೊಟ್ಟುಲವನುರಿದೆದ್ದನು

**ಆಯ್ಕೆ**: ಈ ಪದ್ಯವನ್ನು 'ಲಕ್ಷ್ಮೀಶ' ಮಹಾಕವಿಯ 'ಜೈಮಿನಿ ಭಾರತ' ಎಂಬ ಕಾವ್ಯದಿಂದ ಆಯ್ದ 'ವೀರಲವ' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಅಡಕವಾಗಿರುವ ಮೌಲ್ಯ**: ಈ ಪದ್ಯದಲ್ಲಿ ಲವ ಸಹಜ ಕ್ಷಾತ್ರಗುಣ ವೀರತೆಯ ಪ್ರದರ್ಶನ, ದಿಟ್ಟತನ, ಸಮರ್ಥತೆ, ಬಾಲ್ಯ ಸಹಜ ಸಾಹಸ ಪ್ರವೃತ್ತಿಯ ಮೌಲ್ಯವನ್ನು ಇಲ್ಲಿ ತಿಳಿಸಲಾಗಿದೆ.

**ಸಾರಾಂಶ**: ಭೂಮಂಡಲದಲ್ಲಿ ಕೌಸಲ್ಯೆ ಪಡೆದ ಕುಮಾರ ಶ್ರೀರಾಮ ಒಬ್ಬನೇ ವೀರನು, ಆತನ ಯಜ್ಞದ ಕುದುರೆ, ಇದು ನಿರ್ವಹಿಸಲು ಸಮರ್ಥರಾದವರೂ ಯಾರಾದರೂ ಇದ್ದರೆ ತಡೆಯಿರಿ ಎಂದು ಇದ್ದ ಲೇಖನವನ್ನು ಓದಿ, ಇವನ ಅಹಂಕಾರವನ್ನು ಬಿಡಿಸದೆ ಇದ್ದರೆ ನನ್ನ ತಾಯಿಯನ್ನು ಎಲ್ಲಾ ಜನರು ಬಂಜೆಯೆನ್ನದೇ ಇರುವರೇ, ತನಗೆ ಇರುವ ಈ ತೋಳುಗಳು ಏತಕ್ಕೆ ಬೇಕು ಎಂದು ಪ್ರತಿಜ್ಞೆಯನ್ನು ಕೈಗೊಂಡು ಲವನು ಉರಿದೆದ್ದನು.

2. ತೆಗೆದುತ್ತರೀಯಂ ಮುರಿದು ಕುದುರೆಯ ಗಳಕೆ
ಬಿಗಿದು ಕದಳೀದ್ರುಮಕೆ ಕಟ್ಟಲ್ಕೆ ಮುನಿಸುತರ್
ಮಿಗೆ ನಡುಗಿ ಬೇಡಬೇಡರಸುಗಳ ವಾಜಿಯಂ ಬಿಡು
ಬಡಿವರೆಮ್ಮನೆನಲು
ನಗುತೆ ಪಾರ್ವರ ಮಕ್ಕಳಂಜಿದೊಡೆ ಜಾನಕಿಯ
ಮಗನಿದಕೆ ಬೆದರುವನೆ ಪೋಗಿ ನೀವೆಂದು ಲವ
ನಗಡುತನದಿಂದೆ ಬಿಲ್ದಿರುವನೇರಿಸಿ ತೀಡಿ ಜೇಗೈದು ನಿಂತಿರ್ದನು.

**ಸಾರಾಂಶ**: ಲವನು ಉತ್ತರೀಯವನ್ನು ಉರಿ ಮಾಡಿಕೊಂಡು ಕುದುರೆಯ ಕೊರಳಿಗೆ ಬಿಗಿದು ಬಾಳೆಯ ಗಿಡಕ್ಕೆ ಕಟ್ಟಿದಾಗ ಅಲ್ಲಿದ್ದ ಮುನಿಗಳ ಮಕ್ಕಳೆಲ್ಲರೂ ಅಧಿಕವಾಗಿ ಹೆದರಿ ಬೇಡ ಬೇಡ ರಾಜರ ಕುದುರೆಯನ್ನು ಬಿಡು ನಮ್ಮನ್ನು ಅವರು ಬಡಿಯುತ್ತಾರೆ ಎನ್ನಲು ನಗುತ್ತ ಬ್ರಾಹ್ಮಣರ ಮಕ್ಕಳು ಹೆದರಿದರೆ ಸೀತೆಯ ಮಗನು ಇದಕ್ಕೆ ಹೆದರುವನೆ, ಹೋಗಿ ನೀವು ಎಂದು ಲವನು ಶೌರ್ಯದಿಂದ ಬಿಲ್ಲಿನ ಹಗ್ಗವನ್ನು ಕಟ್ಟಿ ಅದನ್ನು ಸವರಿ ಝೇಂಕಾರ ಮಾಡಿದನು.

## ಕಂಠಪಾಠ ಪದ್ಯಗಳು:

**ಪ್ರತಿ ಪದ್ಯದಲ್ಲಿರುವ ಕಂಠಪಾಠದ ಪದ್ಯಗಳಲ್ಲಿ ಒಂದೊಂದನ್ನು ಕಡ್ಡಾಯವಾಗಿ ಹೇಳುವುದು ಮತ್ತು ಬರೆಯುವುದನ್ನು ಕಲಿಯುವುದು.**

**ಸಂಕಲ್ಪಗೀತೆ:**

ಕಲುಷಿತವಾದೀ ನದೀಜಲಗಳಿಗೆ
ಮುಂಗಾರಿನ ಮಳೆಯಾಗೋಣ
ಬರಡಾಗಿರುವೀ ಕಾಡುಮೇಡುಗಳ
ವಸಂತವಾಗುತ ಮುಟ್ಟೋಣ

ಮತಗಳೆಲ್ಲವು ಪಥಗಳು ಎನ್ನುವ
ಹೊಸ ಎಚ್ಚರದೊಳು ಬದುಕೋಣ
ಭಯ ಸಂಶಯದೊಳು ಕಂದಿದ ಕಣ್ಣೊಳು
ನಾಳಿನ ಕನಸನು ಬಿತ್ತೋಣ

**ಹಕ್ಕಿ ಹಾರುತಿದೆ ನೋಡಿದಿರಾ**

ನೀಲ ಮೇಘ ಮಂಡಲ ಸಮಬಣ್ಣ
ಮುಗಿಲಿಗೆ ರೆಕ್ಕೆಗಳೊಡೆದವೊ ಅಣ್ಣಾ
ಚಿಕ್ಕೆಯ ಮಾಲೆಯ ಸೆಕ್ಕಿಸಿಕೊಂಡು
ಸೂರ್ಯ ಚಂದ್ರರನು ಮಾಡಿದೆ ಕಣ್ಣಾ

ಯುಗಯುಗಗಳ ಹಣೆ ಬರೆಹವ ಒರೆಸಿ
ಮನ್ವಂತರಗಳ ಭಾಗ್ಯವ ತೆರೆಸಿ
ರೆಕ್ಕೆಯ ಬೀಸುತ ಚೇತನಗೊಳಿಸಿ
ಹೊಸಗಾಲದ ಹಸುಮಕ್ಕಳ ಹರಸಿ

**ಛಲಮನೆ ಮೆಱೆವೆಂ**

ಹಸುರಾಗಸ ಹಸುರು ಮುಗಿಲು
ಹಸುರು ಗದ್ದಯಾ ಬಯಲು
ಹಸುರಿನ ಮಲೆ; ಹಸುರು ಕಣಿವೆ
ಹಸುರು ಸಂಜೆಯೀ ಬಿಸಿಲೂ!

ಹೊಸ ಹೂವಿನ ಕಂಪು ಹಸುರು!
ಎಲರಿನ ತಂಪೂ ಹಸುರು!
ಹಕ್ಕಿಯ ಕೊರಲಿಂಪು ಹಸುರು!
ಹಸುರು ಹಸುರಿಳೆಯುಸಿರೂ!

**ಹಲಗಲಿ ಬೇಡರು**

ಕೊಡಲಿ ಕೋರೆ ಕುಡ ಕಬ್ಬಿಣ ಮೊಸರು ಬೆಣ್ಣಿ ಹಾಲಾ
ಉಪ್ಪು ಎಣ್ಣೆ ಅರಿಸಿಣ ಜೀರಗಿ ಅಕ್ಕಿಸಕ್ಕಾರಿ ಬೆಲ್ಲಾ
ಗಂಗಳ ಚೆರಗಿ ಮಂಗಳ ಸೂತ್ರ ಹೋದವು ಬೀಸುಕಲ್ಲಾ
ಹಾಳಾಗಿ ಹೋಯಿತು ಅತ್ತು ವರ್ಣಿಸಿ ಹೇಳಲಿ ನಾನೆಷ್ಟಾ

ಸಿಕ್ಕದ್ದು ತಗೊಂಡು ಸರದ ನಿಂತೊ ಊರಿಗೆ ಕೊಳ್ಳಿಲ ಕೊಟ್ಟಾ
ಬೂದಿ ಮಾಡ್ಯಾರೊ ಹಲಗಲಿ ಸುಟ್ಟು ಗುರ್ತುಳಿಯಲಿಲ್ಲೆಲ್ಲಷ್ಟು
ಕಾಣದೆ ಹೋಯಿತೊ ಕೆಟ್ಟು ವರ್ಣಿಸಿ ಹೇಳಿದೆ ಕಂಡಷ್ಟು
ಕುರ್ತಕೋಟಿ ಕಲ್ಮೇಶನ ದಯದಿಂದ ಹಾಡಿದೆನಣ್ಣಾ ಜನಕಾ

**ಛಲಮನೆ ಮೆಱೆವೆಂ**

ನೆಲಕಿಱಿವೆನೆಂದು ಬಗೆದಿರೆ
ಚಲಕಿಱಿವೆಂ ಪಾಂಡುಸುತರೊಳೀನೆಲನಿದು
ಪಾಟ್ನೆಲನೆನಗೆ ದಿನಪಸುತನಂ
ಕೊಲಿಸಿದ ನೆಲನೊಡನೆ ಮತ್ತೆ ಪುದುವಾಳ್ದಪೆನೇ

ಪುಟ್ಟಿದ ನೂರ್ವರುಮನ್ನೊಡ
ವುಟ್ಟಿದ ನೂರ್ವರುಮಿದಿರ್ಚಿ ಸತ್ತೊಡೆ ಕೋಪಂ
ಪುಟ್ಟಿ ಪೊದಟಿಸ್ದುದು ಸತ್ತರ್
ಪುಟ್ಟರೆ ಪಾಂಡವರೊಳಿಱಿದು ಛಲಮನೆ ಮೆಱೆವೆಂ

**ಕೌರವೇಂದ್ರನ ಕೊಂದೆ ನೀನು**

ಕೊರಳಸೆರೆ ಹಿಗ್ಗಿದವು ದೃಗುಜಲ
ಉರವಣಿಸಿ ಕಡು ನೊಂದನಕಟಾ
ಕುರುಪತಿಗೆ ಕೇಡಾದುದೆಂದನು ತನ್ನ ಮನದೊಳಗೆ
ಹರಿಯ ಹಗೆ ಹೊಗೆದೋರದುರುಹದೆ
ಬರಿದೆ ಹೋಹುದೆ ತನ್ನ ವಂಶವ
ನರುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ

ಮಾರಿಗೌತಣವಾಯ್ತು ನಾಳಿನ
ಭಾರತವು ಚತುರಂಗ ಬಲದಲಿ
ಕೌರವನ ಋಣಹಿಂಗೆ ರಣದಲಿ ಸುಭಟಕೋಟಿಯನು
ತೀರಿಸಿಯೆ ಪತಿಯವಸರಕ್ಕೆ ಶ
ಶರೀರವನು ನೂಕುವೆನು ನಿನ್ನಯ
ವೀರರ್ವೈವರ ನೋಯಿಸೆನು ರಾಜೀವಸಖನಾಣೆ

**ವೀರಲವ**

ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ
ನೊರ್ವನೇ ವೀರನಾತನ ಯಜ್ಞತುರಗಮಿದು
ನಿರ್ವಹಿಸಲಾರ್ಪರಾರಾದೊಡಂ ತಡೆಯಲೆಂದಿರ್ದ ಲೇಖನವನೋದಿ
ಗರ್ವಮಂ ಬಿಡಿಸದಿರ್ದೊಡೆ ತನ್ನ ಮಾತೆಯಂ
ಸರ್ವಜನಮುಂ ಬಂಜೆಯೆನ್ನದಿರ್ದಪುದೆ ತನ
ಗುರ್ವತೋಳ್ಗಳಿವೇತಕೆಂದು ಸಲೆ ವಾಲಿಯಂ ತೊಟ್ಟು ಲವನುರಿದೆದ್ದನು.

ತೆಗೆದುತ್ತರೀಯಮಂ ಮುರಿದು ಕುದುರೆಯ ಗಳಕೆ
ಬಿಗಿದು ಕದಳೀದ್ರುಮಕೆ ಕಟ್ಟಲ್ಕೆ ಮುನಿಸುತರ್
ಮಿಗೆ ನಡುಗಿ ಬೇಡಬೇಡರಸುಗಳ ವಾಜಿಯಂ ಬಿಡು ಬಡಿವರೆಮ್ಮನೆನಲು
ನಗುತೆ ಪಾರ್ವರ ಮಕ್ಕಳಂಜಿದೊಡೆ ಜಾನಕಿಯ
ಮಗನಿದಕೆ ಬೆದರುವನೆ ಪೋಗಿ ನೀವೆಂದು ಲವ
ನಗಡುತನದಿಂದ ಬಿಲ್ದಿರುವನೇರಿಸಿ ತೀಡಿ ಜೇಗೈದು ನಿಂತಿರ್ದನು

**ಕೆಮ್ಮನೆ ಮೀಸೆವೊತ್ತೆನೇ**

ಅಂತೆಂಬನಾರ್ಗೆ ಪಿರಿದುಂ
ಭ್ರಾಂತು ದಲೇಂ ದ್ರೋಣನೆಂಬನೇಂ ಪಾರ್ವನೆ ಪೇ
ಟಿಂತೆನಗೆ ಕೆಳೆಯನೇ ನೂಂ
ಕಂತಪ್ಪನನಱಿಯೆನೆಂದು ಸಭೆಯೊಳ್ ನುಡಿದಂ

ಒಡವೆಯನರ್ಥಿಗಿತ್ತೆನವನೀತಳಮಂ ಗುರುಗಿತ್ತೆನೀಗಳೊಂ
ದಡಕೆಯುಮಿಲ್ಲ ಕೈಯೊಳೆರೆದಂ ಶ್ರುತಪಾರಗನೆಂತು ಸಂತಸಂ
ಬಡಿಸುವೆನಿನ್ನಿದೊಂದು ಧನುರ್ವಿದ್ಯೆದು ದಿವ್ಯಶರಾಶಿಯಿರ್ದುದಿ
ಲ್ಲೊಡಮೆ ಸಮಂತು ಪೇೞವರೊಳಾವುದನೀವುದೊ ಕುಂಭಸಂಭವಂ

**ಪತ್ರಲೇಖನ:**

1. ನಿಮ್ಮ ಅಕ್ಕ / ಅಣ್ಣನ ಮದುವೆ ಹೋಗಲು ಎರಡು ದಿನಗಳ ರಜೆ ಕೋರಿ ನಿಮ್ಮ ಶಾಲೆಯ ಮುಖ್ಯೋಪಾಧ್ಯಾಯರಿಗೆ ಒಂದು ಪತ್ರ ಬರೆಯಿರಿ:

ಸ್ಥಳ : ಜಯಚಾಮರಾಜಪುರ
ದಿನಾಂಕ: 11/11/2019

ಇಂದಾ,
ಸುಹಾನಬಾನು,
10ನೇ ತರಗತಿ,
ಸರ್ಕಾರಿ ಪ್ರೌಢಶಾಲೆ,
ಜಯಚಾಮರಾಜಪುರ.

ಇವರಿಗೆ,
ಮುಖ್ಯೋಪಾಧ್ಯಾಯರು,
ಸರ್ಕಾರಿ ಪ್ರೌಢಶಾಲೆ,
ಜಯಚಾಮರಾಜಪುರ.

ಮಾನ್ಯರೇ,

**ವಿಷಯ: ಎರಡು ದಿನಗಳ ರಜೆ ಕೋರುವ ಬಗ್ಗೆ,**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನನ್ನ ಅಕ್ಕನ ಮದುವೆಯು ಅರಸೀಕೆರೆಯಲ್ಲಿ ದಿನಾಂಕ: 12/11/2019ರಂದು ನಡೆಯಲಿದೆ. ನಾನು ಸಹ ಈ ಸಮಾರಂಭಕ್ಕೆ ಪಾಲ್ಗೊಳ್ಳುತ್ತಿದ್ದೇನೆ. ಆದ್ದರಿಂದ ದಿನಾಂಕ: 12/11/2019 ಮತ್ತು 13/11/2019ರವರೆಗೆ ಶಾಲೆಗೆ ಹಾಜರಾಗಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ನೀವು ನನಗೆ ಎರಡು ದಿನಗಳ ರಜೆಯನ್ನು ನೀಡಬೇಕೆಂದು ನಿಮ್ಮಲ್ಲಿ ಕೋರುತ್ತಿದ್ದೇನೆ.

**ವಂದನೆಗಳೊಂದಿಗೆ,**

ಇಂತಿ ತಮ್ಮ ವಿಧೇಯ,
ಸುಹಾನಬಾನು

********

2. ನಿಮ್ಮ ಊರಿನ ಬೀದಿಗೆ ದಾರಿದೀಪ ಹಾಕಿಸುವಂತೆ ಕೋರಿ ಸಂಬಂಧಪಟ್ಟ ಅಧಿಕಾರಿಗಳಿಗೆ ಒಂದು ಪತ್ರ ಬರೆಯಿರಿ:

ಸ್ಥಳ : ವಾಮನಪದವು
ದಿನಾಂಕ: 12/12/2019

ಇಂದಾ,
ರಾಮಚಂದ್ರ,
10ನೇ ತರಗತಿ,
ಸರ್ಕಾರಿ ಪ್ರೌಢಶಾಲೆ,
ವಾಮನಪದವು. ಬಂಟ್ವಾಳ ತಾ.

ಇವರಿಗೆ,
ಮಾನ್ಯ ಅಧ್ಯಕ್ಷರು,
ಗ್ರಾಮ ಪಂಚಾಯಿತಿ ಕಚೇರಿ,
ವಾಮನಪದವು. ಬಂಟ್ವಾಳ ತಾ.
ಮಾನ್ಯರೇ,

**ವಿಷಯ: ಬೀದಿ ದೀಪ ಅಳವಡಿಸುವಂತೆ ಕೋರಿ**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ವಾಮನಪದವಿನಿಂದ ಚೆನ್ನೈತ್ತೋಡಿ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿ ಪ್ರತಿನಿತ್ಯ ನೂರಾರು ಮಂದಿ ಸಂಚರಿಸುತ್ತಾರೆ. ಈ ರಸ್ತೆ ನಿರ್ಮಾಣಗೊಂಡು ಈಗಾಗಲೇ ಹದಿನೈದು ವರ್ಷಗಳಾಗಿವೆ. ಚೆನ್ನೈತ್ತೋಡಿ ಗ್ರಾಮದಲ್ಲಿ ಸುಮಾರು 20 ಮನೆಗಳಿಗೆ ಹೋಗಲು ಈ ರಸ್ತೆ ಪ್ರಮುಖವಾಗಿದೆ. ಆದರೆ ರಸ್ತೆ ಹೊಂಡಮಯವಾಗಿರುವುದರಿಂದ ಹಾಗೂ ಕಾಡಿನ ಮಧ್ಯೆ ಹಾದು ಹೋಗುವುದರಿಂದ ರಾತ್ರಿ ಹೊತ್ತಿನಲ್ಲಿ ಸಂಚಾರಕ್ಕೆ ತುಂಬಾ ತೊಂದರೆಯಾಗುತ್ತಿದೆ. ಆದುದರಿಂದ ಗ್ರಾಮ ಪಂಚಾಯಿತಿಯವತಿಯಿಂದ ದಾರಿದೀಪ ಹಾಕಿಸಬೇಕಾಗಿ ಈ ಮೂಲಕ ಪ್ರಾರ್ಥಿಸಿಕೊಳ್ಳುತ್ತೇನೆ.

**ಧನ್ಯವಾದಗಳೊಂದಿಗೆ,**

ಇಂತಿ ತಮ್ಮ ವಿಧೇಯ,
ರಾಮಚಂದ್ರ

3. ನಿಮ್ಮ ಶಾಲೆಯಲ್ಲಿ ಕೈಗೊಂಡ ಶೈಕ್ಷಣಿಕ ಪ್ರವಾಸಕ್ಕೆ ನೀವು ಹೋಗಲು 2000ರೂ ಹಣ ಕಳಿಸುವಂತೆ ನಿಮ್ಮ ತಂದೆಗೆ ಒಂದು ಪತ್ರ ಬರೆಯಿರಿ:

ಕ್ಷೇಮ                    ಶ್ರೀ                    ಇಂದಾ,

ವಿಜಯ,
10ನೇ ತರಗತಿ,
ಸರ್ಕಾರಿ ಪ್ರೌಢಶಾಲೆ,
ಬಾಣಾವರ.
ದಿನಾಂಕ: 15/11/2019

ತೀರ್ಥರೂಪರವರಿಗೆ,

ನಿಮ್ಮ ಮಗನಾದ ವಿಜಯ ಮಾಡುವ ಶಿರಸಾಷ್ಟಾಂಗ ನಮಸ್ಕಾರಗಳು, ನಾನು ಆರೋಗ್ಯದಿಂದ ಇದ್ದೇನೆ. ನೀವೂ ಆರೋಗ್ಯದಿಂದ ಇದ್ದೀರಿ ಎಂದು ಭಾವಿಸಿದ್ದೇನೆ.

ಈ ಪತ್ರ ಬರೆದ ವಿಷಯವೇನೆಂದರೆ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ನಾನು ಸಾಕಷ್ಟು ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದೇನೆ. ನಾನು ಈ ವರ್ಷ ಶೇ98ರಷ್ಟು ಅಂಕಗಳನ್ನು ಗಳಿಸಲು ಪ್ರಯತ್ನಿಸುತ್ತಿದ್ದೇನೆ. ನಮ್ಮ ಶಾಲೆಯಲ್ಲಿ ಈ ವರ್ಷ ಶೈಕ್ಷಣಿಕ ಪ್ರವಾಸ ಕೈಗೊಂಡಿದ್ದಾರೆ. ಅದಕ್ಕೆ ರೂ.2000 ನಿಗದಿಪಡಿಸಿದ್ದಾರೆ. ನಾನೂ ಪ್ರವಾಸಕ್ಕೆ ಹೋಗಲು ಬಯಸುತ್ತೇನೆ. ಆದ್ದರಿಂದ ನೀವು ನನಗೆ ಹಣ ಕಳುಹಿಸಬೇಕೆಂದು ಕೋರುತ್ತೇನೆ. ಮಾತೃಶ್ರೀಯವರಿಗೆ ನನ್ನ ನಮಸ್ಕಾರಗಳು ಹಾಗೂ ಚಿರಂಜೀವಿ ತಮ್ಮನಿಗೆ ನನ್ನ ಆಶೀರ್ವಾದಗಳನ್ನು ತಿಳಿಸಿ.

**ನಮಸ್ಕಾರಗಳೊಂದಿಗೆ,**

**ಇಂತಿ ನಿಮ್ಮ ಪ್ರೀತಿಯ**
**ವಿಜಯ**

**ಹೊರವಿಳಾಸ:**
ಇವರಿಗೆ,
ಅರವಿಂದ,
ತಿಲಕ್ ಬಡಾವಣೆ,
ಹಾಸನ.

ಮುಕ್ತಾಯ
**ಎಲ್ಲಾ ವಿದ್ಯಾರ್ಥಿಗಳಿಗೆ ಶುಭವಾಗಲಿ**

**ಡಿ.ಟಿ.ಪಿ. ಮತ್ತು ಸಂಯೋಜನೆ:**
**ರಮೇಶ್.ಕೆ. ಕನ್ನಡ ಭಾಷಾ ಶಿಕ್ಷಕರು**
**ಸರ್ಕಾರಿ ಪದವಿ ಪೂರ್ವ ಕಾಲೇಜು**
**(ಪ್ರೌಢಶಾಲಾ ವಿಭಾಗ) ಬಾಣಾವರ.**
**ಅರಸೀಕೆರೆ ತಾ. ಮೊ. ೯೪೮೧೧೧೭೪೭೭**